ಕನ್ನಡ ವಿಶ್ವವಿದ್ಯಾಲಯ ಹಂಪಿ

ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

"ಮುಕ್ತಾಯಕ್ಕಳ ವಚನಗಳು – ವೈಚಾರಿಕ ನೆಲೆ ವಿಶ್ಲೇಷಣಾತ್ಮಕ ಅಧ್ಯಯನ"

ಸಂಶೋಧನಾ ವಿದ್ಯಾರ್ಥಿ:

ಕೃಷ್ಣ ಜೆ.ಕೆ.

ನೋಂದಣಿ ಸಂಖ್ಯೆ : ಕೆ.ಎಸ್.ಪಿ.ಬಿ.ಕೆ.ಎಸ್. 00713

ಮಾರ್ಗದರ್ಶಕರು :

ಡಾ॥ ಶೀಲಾದೇವಿ ಎಸ್ ಮಳೀಮಠ
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ.
ಬಿ.ಎಂ.ಎಸ್.ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು – 560 004.

ಮಾನ್ಯತಾ ಸಂಸ್ಥೆ :

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜ ಪೇಟೆ,
ಬೆಂಗಳೂರು – 560 018.

1219

ಕನ್ನಡ ವಿಶ್ವವಿದ್ಯಾಲಯ ಹಂಪಿ

ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ

"ಮುಕ್ತಾಯಕ್ಕಳ ವಚನಗಳು – ವೈಚಾರಿಕ ನೆಲೆ ವಿಶ್ಲೇಷಣಾತ್ಮಕ ಅಧ್ಯಯನ"

ಸಂಶೋಧನಾ ವಿದ್ಯಾರ್ಥಿ:

ಕೃಷ್ಣ ಜೆ.ಕೆ.

ನೋಂದಣಿ ಸಂಖ್ಯೆ : ಕೆ.ಎಸ್.ಪಿ.ಬಿ.ಕೆ.ಎಸ್. 00713

ಮಾರ್ಗದರ್ಶಕರು :

ಡಾ॥ ಶೀಲಾದೇವಿ ಎಸ್ ಮಳೀಮಠ
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ.
ಬಿ.ಎಂ.ಎಸ್.ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು – 560 004.

ಸಂಯೋಜನಾಧಿಕಾರಿಗಳು
ಸಂಶೋಧನಾ ಕೇಂದ್ರ,
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-18.

ಮಾನ್ಯತಾ ಸಂಸ್ಥೆ :

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜ ಪೇಟೆ,

ಬೆಂಗಳೂರು – 560 018.

ಪ್ರಮಾಣ ಪತ್ರ

"ಮುಕ್ತಾಯಕ್ಕಳ ವಚನಗಳು ವೈಚಾರಿಕ ನೆಲೆ, ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ನಿಬಂಧವನ್ನು ಎಂ.ಫಿಲ್.ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಲ್ಲಿಸಲು ಡಾ॥ ಶೀಲಾದೇವಿ .ಎಸ್ ಮಳೀಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 1/8/2015

ಸ್ಥಳ : ಬೆಂಗಳೂರು

ಕೃಷ್ಣ ಜೆ.ಕೆ.

ಸಹಿ

ಕೃಷ್ಣ ಜೆ.ಕೆ.

ಸಂಶೋಧನಾ ವಿದ್ಯಾರ್ಥಿ

ಬೆಂಗಳೂರು.

<u>ದೃಢೀಕರಣ ಪತ್ರ</u>

ಕೃಷ್ಣ ಜೆ.ಕೆ.ಅವರು ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ **"ಮುಕ್ತಾಯಕ್ಕಳ ವಚನಗಳು ವೈಚಾರಿಕ ನೆಲೆ ವಿಶ್ಲೇಷಣಾತ್ಮಕ ಅಧ್ಯಯನ"** ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಪರ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.ಈ ನಿಬಂಧದ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 1/8/2015

ಸ್ಥಳ : ಬೆಂಗಳೂರು.

ಶೀ ಮಳೀಮಠ 1/8/2015
ಸಹಿ
ಮಾರ್ಗದರ್ಶಕರು
ಡಾ॥ ಶೀಲಾದೇವಿ ಎಸ್. ಮಳೀಮಠ
ಮುಖ್ಯಸ್ಥರು, ಕನ್ನಡ ವಿಭಾಗ,
ಬಿ.ಎಮ್.ಎಸ್ ಮಹಿಳಾ ವಿದ್ಯಾಲಯ
ಬಸವನಗುಡಿ,
ಬೆಂಗಳೂರು – 560 004.

ಪರಿವಿಡಿ

ಪೀಠಿಕೆ – ಉದ್ದೇಶ – ವ್ಯಾಪ್ತಿ

ಅಧ್ಯಾಯ –1

ಪೀಠಿಕೆ – ಉದ್ದೇಶ – ವ್ಯಾಪ್ತಿ

ಸತ್ಯವುಳ್ಳಲ್ಲಿ ಶಬುದು ಹಿಂಗದು ;
ಭಾವವುಳ್ಳಲ್ಲಿ ಭಕ್ತಿ ಹಿಂಗದು
ಮೂರು ಲೋಕದ ಹಂಗಿನ ಶಬುದವೇನಯ್ಯಾ ?
ಮುಕುತಿಯನೇವೆನಯ್ಯಾ ?
ಎನ್ನ ಯುಕುತಿಯ ಮುಕುತಿಯ ಬಕುತಿಯ ಪದವನು ಕಂಡು
ನಾಚಿದನಜಗಣ್ಣ ತಂದೆ.

ಇಡೀ ಮನುಕುಲವು ಮುಕ್ತಿಗಾಗಿ ಪರಿತಪಿಸುತ್ತಲಿದೆ.ಆ ಮುಕ್ತಿ ಎನ್ನುವಂತಹುದು ಕೇವಲ ಆಡಂಬರದ ಬಾಹ್ಯಾಚರಣೆಗಳ ಮೂಲಕ ಕಾಣಲು ಕಾರ್ಯಸಾಧುವಲ್ಲ. ಅದು ಮೋಕ್ಷದ ಮುನ್ನುಡಿಯಾಗಿರಬೇಕಾಗಿರುತ್ತದೆ ಎಂದು ಮುಕ್ತಾಯಕ್ಕ ತನ್ನ ಯುಕ್ತಿ, ಮುಕ್ತಿ ಭಕ್ತಿಯ ಬಗೆಗೆ ಅಜಗಣ್ಣ ಭಾವಿಸಿದಂತೆ ಅಳವಿಲ್ಲವೆಂದು ತಿಳಿಯುತ್ತಾಳೆ.ತನ್ನನ್ನು ಒಂದು ರೀತಿಯ ಆತ್ಮ ಶೋಧನೆಗೆ ಒಳಗು ಮಾಡಿಕೊಳ್ಳುತ್ತಾಳೆ. ಜಗತ್ತಿನ ಜ್ಞಾನಿಗಳನೇಕರು ತಮ್ಮನ್ನು ತಾವು ಒರೆಹಚ್ಚಿ ನೋಡಿಕೊಳ್ಳುವಂತೆ ಮುಕ್ತಾಯಕ್ಕಳು ಸಹ ತನ್ನ ಅರಿವಿನ 'ಆಳ'ವನ್ನು ಪರೀಕ್ಷಿಸಿಕೊಳ್ಳುತ್ತಾಳೆ.

ಅಖಂಡವು ಅಜಗಣ್ಣನೆಂದು ತಿಳಿದು ವೈಚಾರಿಕ ನೆಲೆಯ ಹಿನ್ನಲೆಯಲ್ಲಿ ಮುಕ್ತಾಯಕ್ಕಳ ವಚನಗಳಲ್ಲಿ ಗುರು ಪರಮದೈವ ಹಾಗೂ ಪರಮಜ್ಞಾನದ ಸಂಕೇತವಾಗಿರುವ ಅಣ್ಣ ಹಾಗೂ ತಂಗಿಯರ ಪರಮ ಪವಿತ್ರ ಸ್ನೇಹದ ಹಿಂದೆ

ವೈಚಾರಿಕ ನೆಲೆಯ ಹಿನ್ನಲೆಯಲ್ಲಿ ಮುಕ್ತಾಯಕ್ಕಳ ವಚನಗಳು ನನ್ನನ್ನು ಪ್ರೇರೇಪಿಸಿದವು.

ಅಧ್ಯಯನದ ಉದ್ಧೇಶ

ಈವರೆಗಿನ ಸಾಹಿತ್ಯ ಚರಿತ್ರೆಗಳಲ್ಲಿ ಅಜಗಣ್ಣ ಮತ್ತು ಮುಕ್ತಾಯಕ್ಕಳ ಸಮಧುರ ಅಣ್ಣ ತಂಗಿ ಸಂಬಂಧ ಉಪಮಾತೀತ, ವಾಙ್ಮಾನಾತೀತ, ತತ್ವಾತೀತ, ತತ್ವಮಯ ವೇದಶಾಸ್ತ್ರ ಪುರಾಣಾಗಮ, ಅಷ್ಟಾದಶ ವಿದ್ಯೆಗಳ ಆಗರ ಹಾಗೂ ಪರತತ್ವ ಸ್ವರೂಪ ಮುಕ್ತಾಯಕ್ಕಳ ಪಾಲಿಗೆ ಮಹಾದೇವನೇ ಅವನು.

ಮುಕ್ತಾಯಕ್ಕ ಮುಗ್ಧಳಂತೆ ಕಂಡರೂ ಅವಳು ಜ್ಞಾನಯೋಗಿ.ಇಡೀ ಹೆಣ್ಣು ಕುಲಕ್ಕೆ ಮಾರ್ಗದರ್ಶಕವಾಗಬಹುದಾದ ನಿರ್ಮೋಹದ ಬಗೆಗೆ ಮುಕ್ತಾಯಕ್ಕ ಹೇಳಿದ್ದಾಳೆ. ಹೆಣ್ಣಿಗಿರುವ ಅದಮ್ಯ ಶಕ್ತಿಯನ್ನು ಕುರಿತು ಹೇಳುತ್ತಾಳೆ.

ಅಹುದಹುದು ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.
ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ,
ಉರಿಯೊಳಡಗಿದ ಕರ್ಪುರದಂತೆ, ಬಯಲನಪ್ಪಿದ ವಾಯುವಿನಂತೆ
ಇಪ್ಪ ನಿಲವು ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ ?
ಅರಿವಡೆ ಮತಿಯಿಲ್ಲ, ನೆನವಡೆ ಮನವಿಲ್ಲ;
ಎನ್ನ ಅಜಗಣ್ಣ ತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ
ನಮೋ ನಮೋ ಎನುತಿರ್ದೆನು.

ಮುಕ್ತಾಯಕ್ಕಳ ಭಕ್ತಿಯ ವೈಚಾರಿಕ ನಿಲುವು ಕಬ್ಬಿಣ ಕುಡಿದ ನೀರಿನಂತೆ ಅದು ಯಾರ ಕಣ್ಣಿಗೂ ಕಾಣುವುದಿಲ್ಲ. ಅದೇ ರೀತಿ ನೆರಳನ್ನು ಉಂಡ ಅರಿಶಿನದಂತೆ ಅಂದರೆ ನೆರಳಲ್ಲೆ ಒಣಗಿದ ಅರಿಶಿನದಂತೆ ಆದರೆ ಅದು ನೆರಳನ್ನೆ ಉಂಡಿದೆ ಎನ್ನುವುದು ಯಾರಿಗೂ ತಿಳಿಯದು. ಬಯಲಿನಲ್ಲಿ ಸುಳಿದಾಡುವ ಗಾಳಿ ಹೇಗೆ ಕಣ್ಣಿಗೆ

ಕಾಣುವುದಿಲ್ಲವೋ ಅದೇ ರೀತಿ ಅರಿವು ಪಡೆಯೋಣವೆಂದರೆ ಮತಿ (ಜ್ಞಾನ) ಇಲ್ಲ ಎಂದು ಹೇಳುತ್ತಾ ಅವಳ ಸ್ಪರ್ಶ ಅಗ್ನಿಯ ಸ್ಪರ್ಶದಂತೆ ಅವಳೊಂದು ಜ್ವಾಲಾಮುಖಿ ಎನ್ನುವ ಅರ್ಥದಲ್ಲಿ ತನ್ನ ಅನುಭವದ ಕಿಡಿಗಳನ್ನು ಕಾರಿದ್ದಾಳೆ. **"ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಅಳಿಗೊಂಡರು ಸಹ ನಾನು ಅಂಜುವವಳಲ್ಲ"**ಎನ್ನುತ್ತಾಳೆ.

ವಚನ ಸಾಹಿತ್ಯದ ಹಿನ್ನೆಲೆಯಲ್ಲಿ ತನ್ನ ಅಣ್ಣನಾದ ಅಜಗಣ್ಣನಲ್ಲಿ ಇಟ್ಟಿರುವ ಭಕ್ತಿ ಅಧ್ಯಾತ್ಮ ತತ್ವ, ಅಂದರೆ ಜಲಶೋಧನೆಯಲ್ಲಿ ತೊಡಗಿಸಿಕೊಂಡಾಗ ಒಂದು ಬಂಡೆ ಎದುರಾಗಿ ಆ ಬಂಡೆಯ ಮಧ್ಯದಲ್ಲಿ ಸಿಗುವ ಅಮೃತಧಾರೆಯಂತೆ ಮುಕ್ತಾಯಕ್ಕಳ ವಚನಗಳ ಅಧ್ಯಾತ್ಮಕತೆಯ ತತ್ವಗಳ ಜಲಧಾರೆ ಇಡೀ ಮನುಕುಲದ ವ್ಯವಸ್ಥೆಯ ಸಂಘಟಿತ ತತ್ವವಾಗಿದೆ ಎಂಬುದು ನಿರ್ವಿವಾದ.

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದಲ್ಲಿ ಮುಕ್ತಾಯಕ್ಕಳ ವಚನಗಳಿಂದ ದೊರಕಬಹುದಾದ ಸೃಜನಶೀಲತೆ, ವಾಕ್‌ಸ್ವಾತಂತ್ರ್ಯ, ವೈಚಾರಿಕ ನಿಲುವು, ಅಭಿವ್ಯಕ್ತಿ ಸ್ವಾತಂತ್ರ್ಯ, ಅಧ್ಯಾತ್ಮಿಕತೆ, ಸಾಹಿತ್ಯಾತ್ಮಕತೆ ಇತ್ಯಾದಿಗಳಲ್ಲಿ ವೈಚಾರಿಕ ನೆಲೆಯನ್ನು ಕಂಡುಕೊಳ್ಳುವುದಾಗಿದೆ.

ಅಲೌಖಿಕ ಗುರುವಾದ ಅಜಗಣ್ಣನಲ್ಲೇ ತನ್ನ ಕಾಯಕ, ಶಿವತತ್ವ, ಪರತತ್ವ ಕಾಣುವ ಮನೋಭಾವನೆಯನ್ನು ಮುಕ್ತಾಯಕ್ಕ ಅದಮ್ಯವಾಗಿ ಕಾಡಿದ್ದಾಳೆ. ಅಣ್ಣ ತಂಗಿಯರ ನಡುವಿನ ಸುಮಧುರ ಬಾಂಧವ್ಯದ ಜೊತೆಜೊತೆಯಲ್ಲಿ ಮುಕ್ತಿಯ ಕಡೆ ಹೇಗೆ ಮುಖಾಮುಖಿಯಾಗಿ ಯುಕ್ತಿಗೆ ಹೊರಗಾಗಬೇಕು?ಆಗ ಅರಿವಿನ ಅರಿವಾಗಿ ಬದುಕು ಸಾರ್ಥಕವಾಗುತ್ತದೆ ಎನ್ನುವಂತಹ ಅಧ್ಯಾತ್ಮದ ಉಸಿರನ್ನು ಆಡಿದ ಮುಕ್ತಾಯಕ್ಕಳ ವಚನಗಳಲ್ಲಿ ವೈಚಾರಿಕತೆಗೆ ಸಂಬಂಧಪಟ್ಟ ವಚನಗಳ ಶೋಧನೆಯಲ್ಲಿ ನನ್ನ ಅಧ್ಯಯನ ನಡೆಸಲಾಗುವುದು.

ಮುಕ್ತಾಯಕ್ಕಳ ವಚನಗಳಲ್ಲಿ ಶ್ರೀಮಂತವಾಗಿರುವುದು ವೈಚಾರಿಕ ನೆಲೆ. ವಚನಗಳಲ್ಲಿ ಆರಾಧ್ಯ ದೈವನ ಅಂಕಿತವಿರುವುದು ಸಾಮಾನ್ಯ.ಆದರೆ, ಮುಕ್ತಾಯಕ್ಕಳಲ್ಲಿ ಅಜಗಣ್ಣನೇ ತಂದೆ, ಅಣ್ಣ ಹಾಗೂ ಆಕೆಯ ಆರಾಧ್ಯ ದೈವವೂ ಅಜಗಣ್ಣನೇ ಇದ್ದು ಮತ್ತೊಂದು ವ್ಯಾಪ್ತಿ.

ಅಷ್ಟಾವರಣ, ಷಟ್‌ಸ್ಥಲ ಸಿದ್ಧಾಂತ, ತ್ರಿವಿಧ ದಾಸೋಹ, ಕಾಯಕ ತತ್ವ, ಯೋಗ ಇಂತಹ ಪಾರಿಭಾಷಿಕತೆಯನ್ನು ಸರಳವಾಗಿ ಅರ್ಥೈಸುವುದರೊಂದಿಗೆ ಸಾಮಾನ್ಯರಿಗೂ ತಲುಪುವಂತಹ ಭಾಷಾ ಬಳಕೆಯಿಂದ ಬೃಹತ್ ವಿಚಾರಗಳನ್ನು

ಸಾಮಾನ್ಯೀಕರಣಗೊಳಿಸಿರುವುದು ವಿಭಿನ್ನ ನೆಲೆಯಾಗಿ ಗುರ್ತಿಸುವುದು ನನ್ನ ಅಧ್ಯಯನದ ಚೌಕಟ್ಟಿನೊಳಗೆ ಸಾಧ್ಯವಾಗಿಸುವುದು.

ಮುಕ್ತಾಯಕ್ಕಳ ವಚನಗಳಲ್ಲಿ ಸಾಧಕಿಯೊಬ್ಬಳ ಸಂಕೀರ್ಣ ಮನೋಭಾವದ ಅಭಿವ್ಯಕ್ತಿ ಸಾಧನಾ ಮಾರ್ಗದ ಹಲವಾರು ನೆಲೆಗಳ ಅಭಿವ್ಯಕ್ತಿಯನ್ನು ದಾಖಲಿಸುವುದು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ.

ವಚನ – ವಿಶ್ಲೇಷಣೆ – ವೈಚಾರಿಕತೆ – ಅರ್ಥ ವ್ಯಾಖ್ಯಾನ

ಅಧ್ಯಾಯ – ೨

ವಚನ – ವಿಶ್ಲೇಷಣೆ – ವೈಚಾರಿಕತೆ ಅರ್ಥ – ವ್ಯಾಖ್ಯಾನ

ವಚನ ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮ ಸಾಕ್ಷಿಯ ಮಾತು ಎಂದರ್ಥ.ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮ ಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ.ಈ ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ.

ಯಾವುದೇ ವಚನಕ್ಕೆ ನಾವು ಎರಡು ರೀತಿಯ ಅರ್ಥಗಳನ್ನು ಕೊಡಬಹುದು.ವಚನದ ಪ್ರತಿ ಶಬ್ದಕ್ಕೂ ಅರ್ಥ, ವಿವರ ಕೊಡುವುದು ಮತ್ತೊಂದು ನಿಘಂಟುವಿನ ಅರ್ಥದಿಂದ ಆ ಪದ್ಯವನ್ನು ವ್ಯಾಖ್ಯಾನಿಸುವುದು.ಇಲ್ಲಿ ವಚನದ ಸಂಪೂರ್ಣ ಅರ್ಥವನ್ನು ತಿಳಿಯುವುದು.

ಮುಕ್ತಾಯಕ್ಕಳ ವಚನಗಳನ್ನು ವಿಶ್ಲೇಷಣಾತ್ಮಕ ಅಧ್ಯಯನ ಮತ್ತು ಸಂಶ್ಲೇಷಣಾತ್ಮಕ ಅಧ್ಯಯನದಿಂದ ಅವಲೋಕಿಸಿದಾಗ ವೈವಿಧ್ಯತೆಯಿಂದ ವೈಚಾರಿಕತೆಗೆ, ವೈಚಾರಿಕತೆಯಿಂದ ವೈವಿಧ್ಯತೆಗೆ ಸಾಗುತ್ತದೆ.ಕೆಲವು ಬಿಡಿ ಪದಗಳ ಅರ್ಥ ಗೊತ್ತಾಗದೆ ಇರುವುದಿಲ್ಲ.

ಅನೇಕ ವೇಳೆ ನಮಗೆ ವಚನದ ಪ್ರತಿಯೊಂದು ಪದದ ನಿಘಂಟುವಿನ ಅರ್ಥ ಗೊತ್ತಾದರೂ ವಚನದ ಉದ್ದೇಶ ಸ್ಪಷ್ಟವಾಗುವುದಿಲ್ಲ.ಹಾಗೆ ಸ್ಪಷ್ಟವಾಗಬೇಕಾದರೆ

ವಚನದ ಒಳಗಿರುವ ಅದರ ತಾತ್ವಿಕತೆಯನ್ನ ತಿಳಿದುಕೊಂಡು, ತಾತ್ವಿಕ ವಚನದ ಪಾರಿಭಾಷಿಕ ಪದದ ಅರ್ಥ ಕೊಡಬೇಕಾಗುತ್ತದೆ.

ವಚನಗಳು ತತ್ವಶಾಸ್ತ್ರದ ಹಿನ್ನಲೆಯಲ್ಲಿ ಒಂದು ಪಾರಿಭಾಷಿಕ ಪದಕ್ಕೆ ಕೊಟ್ಟ ಅರ್ಥ ಸಮರ್ಪಕ ಮತ್ತು ಸಮರ್ಥನೀಯವೇ ಹೊರತು, ಬೇರೆ ಹಿನ್ನಲೆಯಲ್ಲಿ ಕೊಟ್ಟ ಅರ್ಥವಲ್ಲ.

ಎಲ್ಲಾ ವಚನಗಳ ಎಲ್ಲಾ ಪಾರಿಭಾಷಿಕ ಪದಗಳ ಅರ್ಥವನ್ನು ತಿಳಿದುಕೊಂಡರೆ ವಚನಕಾರರ ತತ್ವಮೀಮಾಂಸೆ, ನೀತಿಶಾಸ್ತ್ರ, ಕಾಯಕ ಸಿದ್ಧಾಂತ ಮುಂತಾದವುಗಳನ್ನು ಅರಿತಂತಲ್ಲ. ಒಬ್ಬ ವಚನಕಾರ ಅಂಗ, ಶೂನ್ಯ, ಪರಬ್ರಹ್ಮ, ಈಶ್ವರ ವಚನ ಪಾರಿಭಾಷಿಕ ಪದಗಳ ಹಿನ್ನಲೆಯಲ್ಲಿ ವಿವೇಚಿಸಬೇಕಾಗುತ್ತದೆ.ಅರ್ಥದಲ್ಲಿ ವಚನ ಸಾಹಿತ್ಯವೂ, ಗಾತ್ರದಲ್ಲಿ ಕಿರಿದೂ-ಹಿರಿದೂ ಅಭಿವ್ಯಕ್ತಿಯಲ್ಲಿ ಸರಳವೂ ಆದ ವಚನಗಳನ್ನು ಅರ್ಥಮಾಡಿಕೊಳ್ಳಲು ಅಷ್ಟು ಪರಿಶ್ರಮವಾಗಲಾರದು. ಹಲವು ವ್ಯಕ್ತಿಗಳ ಅನುಭವದಿಂದ ಒಡಗೂಡಿರುವುದರಿಂದ ಭಾವನೆ, ನಿರೂಪಗಳಲ್ಲಿ ವೈವಿಧ್ಯವು ಕಂಡುಬರುತ್ತದೆ. ಅವು ಆತ್ಮ ವಿಕಾಸ, ಪರಮಾತ್ಮನ ಸಾಕ್ಷಾತ್ಕಾರದ ನುಡಿಗಳಾಗಿರುವುದರಿಂದ ಯಾವಾಗಲೂ ಶುಚಿಯಾಗಿವೆ. ಭಾಷೆಯಲ್ಲಿ ವಾಸ್ತವತೆ, ಅರ್ಥ ಪೂರ್ಣದೃಷ್ಟಿ ತಾತ್ವಿಕ ಚಿಂತನೆ ಇವು ವಚನ ಸಾಹಿತ್ಯವನ್ನು ಉನ್ನತಮಟ್ಟಕ್ಕೇರಿಸುತ್ತಿದೆ.ಹಿಂದಿನ ಸಾಹಿತ್ಯವು ಕಲ್ಪನಾತ್ಮಕವೂ, ವಿಷಯ ಸುಖ ಪ್ರದಾಯಕವೂ ಉದರ ಪೋಷಕವು ಆಗಿದೆ ಎಂದು ಶಿವಶರಣರು ನೊಂದಿದ್ದಾರೆ.

ನಡೆ-ನುಡಿಗೆ ವಿಶೇಷ ಮಹತ್ವ ಕೊಟ್ಟು ಜ್ಞಾನ, ಸ್ವಾತಂತ್ರ್ಯ ಶೀಲಗಳಿಗೆ ಗಮನವಿತ್ತಿದ್ದರೆ, ಇಂದ್ರಿಯಗಳ ದುರ್ಗುಣ ವ್ಯಸನಗಳಿಂದ ದೂರವಿರಿಸಲು ಭಾವನೆಗಳನ್ನು ಪವಿತ್ರೀಕರಿಸಲು ವಚನಗಳನ್ನು ನುಡಿದಿದ್ದಾರೆ.ವಚನಗಳು ಕರಿ, ಸಿರಿ, ರಾಜ್ಯಗಳಿಗಿಂತಲೂ ಮೇಲಾದವು. ಅವು ಮದ-ಮಾತ್ಸರ್ಯಗಳಿಗೆ

ಎಡೆಗೊಡುತ್ತಿವೆಯೆಂದು ನಿಮ್ಮ ಶರಣರ ಸೂಳ್ನುಡಿಯನ್ನು ಒಂದರಗಳಿಗೆಯಿತ್ತಡೆ ನಿಮ್ಮನಿತ್ತೆ ಎಂದಿದ್ದಾನೆ ಜೇಡರ ದಾಸಿಮಯ್ಯ.

ವಚನಸಾಹಿತ್ಯವು ವ್ಯಕ್ತಿಯ ಭಾವಶುದ್ಧಿ, ಹೃದಯಶುದ್ಧಿ, ಇಂದ್ರಿಯ ಶುದ್ಧಿಗಳಿಗೆ ಪ್ರಥಮ ಪ್ರಾಶಸ್ತ್ಯವಿತ್ತರು. ದಿನನಿತ್ಯದ ಬಳಕೆಯ ಮಾತುಗಳು ಅವರ ಮೂಲಕ್ಕೆ ಉದ್ದೇಶಕ್ಕೆ ಅನುಗುಣವಾಗುವಂತಿದ್ದು, ಅಲ್ಲಿ ನುಡಿಗಳು ಕಾವ್ಯದ ಪ್ರಾಸಾನುಪ್ರಾಸ ಅರ್ಥಲಂಕಾರ ನಾಣ್ಣುಡಿ, ಜಾಣ್ನುಡಿ ಸೂತ್ರಾತ್ಮಕ ನುಡಿ, ಸೂಳ್ನುಡಿ ಕಿಡಿ–ನುಡಿಗಳಿದ್ದು, ಕನ್ನಡ ವಾಙ್ಮಯದ ಹೊಳೆಹೊಳೆವ ಚಿನ್ನದ ನಾಣ್ಯಗಳಂತಿವೆ. ಬದುಕಿಗೆ ಕಾಂತಿಯನ್ನೀಯುತ್ತವೆ. ಅಮೃತದ ಸೇವನೆಗೈಯುತ್ತವೆ.

ವಚನ ವಾಙ್ಮಯದ ಪ್ರಾರಂಭವನ್ನು ಕುರಿತು **"ಆರ್.ಸಿ. ಹಿರೇಮಠ"** ಅವರು ಹೀಗೆ ಬರೆದಿದ್ದಾರೆ.**"ವಚನ ವಾಙ್ಮಯದ ವ್ಯಾಪ್ತಿ ಅಪಾರವಾಗಿದೆ.ಅದರ ಆದಿ ಇನ್ನು ಅನಿರ್ಣಿತವಾಗಿಯೇ ಉಳಿದಿದೆ"**[೧].

ವಚನ ಧರ್ಮದಲ್ಲಿ ಸಾಮಾನ್ಯವಾಗಿ ಮೂರು ಪ್ರಮುಖ ಅಂಶಗಳು ಅಡಗಿರುತ್ತವೆ. ತತ್ವಭಾಗ, ಆಚರಣೆಯ ಭಾಗ, ಮತ್ತು ಆಚಾರ ನಿರ್ಣಯ, ಈ ಧರ್ಮದ ಸ್ವರೂಪ ರಚನೆಯ ದೃಷ್ಟಿಯಿಂದ ಧರ್ಮವು ವಸ್ತು ಸತ್ಯದ ಪ್ರಯೋಗಾಚರಣೆಯೆನ್ನಬಹುದು.

ವಚನ ಸಾಹಿತ್ಯವು ತನ್ನ ರೂಪ ಮತ್ತು ಸತ್ವಗಳ ದೃಷ್ಟಿಯಿಂದ ಅತ್ಯಂತ ಅಪೂರ್ವ ಸೃಷ್ಟಿಯಾಗಿದೆ.ವಚನಗಳು ಶಾಸ್ತ್ರ ಸಾಹಿತ್ಯ ಎರಡೂ ಆಗಿರುವುದು ಅವುಗಳ ವಿಶೇಷವಾಗಿದೆ.ಬಸವಣ್ಣನವರು ತಮ್ಮ ವಚನದ ಒಂದರಲ್ಲಿ ಹೇಳಿದಂತೆ **'ಆನು ಒಲಿದಂತೆ ಹಾಡುವೆ'** ಎಂಬ ಮಾತು ಬಹುಶಃ ಎಲ್ಲ ವಚನಕಾರರಿಗೂ ಅನ್ವಯಿಸುವಂತೆ ಕಂಡುಬರುತ್ತದೆ.ವಚನಕಾರರು ಪ್ರಜ್ಞಾಪೂರ್ವಕವಾಗಿ ಸಾಹಿತ್ಯಸೃಷ್ಟಿಗೆ

ಹೊರಟ ಕವಿಗಳಲ್ಲ. ಆದ್ದರಿಂದ, ಅವರ ವಚನಗಳಲ್ಲಿ ಕಂಡುಬರುವ ಸಾಹಿತ್ಯ ಗುಣವನ್ನು ವಿಶೇಷ ಎಚ್ಚರದಿಂದ ಪರೀಕ್ಷಿಸಬೇಕಾಗುತ್ತದೆ. ವಿಶಾಲವಾದ ಜೀವನಾನುಭವದ ಹಿನ್ನಲೆಯಲ್ಲಿ ಉತ್ಕಟ ಭಕ್ತಿ–ಭಾವದಲ್ಲಿ ನುಡಿದ ಶರಣರ ವಚನಗಳು ಕನ್ನಡದ ವಿಶೇಷ ಸಾಹಿತ್ಯ ಭಾಗವಾಗಿದೆ.ವಚನಗಳ ಸಾಹಿತ್ಯ ಗುಣವನ್ನು ಅನೇಕ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆಯ ಮಾನದಂಡಗಳಿಂದ ಮೌಲ್ಯ ಮಾಪನ ಮಾಡುವ ಪ್ರಯತ್ನಗಳು ನಡೆದಿವೆ.

ಒಟ್ಟಿನಲ್ಲಿ ವಚನಗಳು ತತ್ವ, ಧರ್ಮದಂತಹ ವಿಷಯಗಳ ಅಭಿವ್ಯಕ್ತಿಗೆ ಸಮರ್ಥ ವಾಹಕಗಳಂತೆಯೇ ಉತ್ತಮ ಸಾಹಿತ್ಯ ವಾಹಕಗಳು ಆಗಿವೆ. ಇವು ಶಾಸ್ತ್ರಗಳಾದಂತೆ ಉತ್ತಮ ಸಾಹಿತ್ಯವೂ ಆಗಿರುವುದು ಅವುಗಳ ಹೆಚ್ಚಿನ ವಿಶೇಷ ಗುಣವಾಗಿದೆ.ವಚನಗಳು ಕನ್ನಡ ಸಾಹಿತ್ಯದ ಉಪನಿಷತ್ತುಗಳು ಎಂಬ ಮಾನ್ಯತೆಗೆ ಪಾತ್ರವಾಗಿದೆ.ಉಪನಿಷತ್ತುಗಳಿಗೆ ಹೋಲುವ ಉಕ್ತಿಗಳು ವಚನದಲ್ಲಿ ಬಂದಿವೆ ಮಾತ್ರವಲ್ಲ, ಉಪನಿಷತ್ಕಾರರ ಆತ್ಮಾನುಭವ ದೃಷ್ಟಿ. ವೈಶಾಲ್ಯ ಸತ್ಯ.ಧರ್ಮದರ್ಶನ ಇವು ವಚನಕಾರರಲ್ಲಿವೆ. ಜೊತೆಗೆ **"ಉಪನಿಷತ್ತಿನಲ್ಲಿ ಇಲ್ಲದ ತತ್ವ ಪ್ರಣಾಲಿ, ಸಮಾಜನೀತಿ, ಆಚಾರ, ಧರ್ಮಗಳೂ ಅವುಗಳನ್ನು ಕನ್ನಡಿಸುವುದಕ್ಕೆ ಹೊರಟ ಭಾಷೆಯ ಜನಸಮ್ಮುಖ ಸ್ವರೂಪಗಳು ವಚನಗಳಲ್ಲಿವೆ"** ಎಂಬ **"ರಂ.ಶ್ರೀ.ಮುಗಳಿ'**ಯವರ ಮಾತುಗಳಿಂದ ವಚನ ಸಾಹಿತ್ಯದ ಎತ್ತರ–ಬಿತ್ತರಗಳನ್ನು ಗಮನಿಸಿ ಕೊನೆಗಾಣಿಸಬಹುದು.

ಮುಕ್ತಾಯಕ್ಕಳ ವಚನಗಳಲ್ಲಿ ವಚನಕಾರರ ಅಂತರಂಗದ ಪ್ರಾಮಾಣಿಕ ಪ್ರತಿಬಿಂಬವನ್ನು ಕಾಣಬಹುದು.ಈ ಬಗೆಯ ಆತ್ಮನಿವೇದನೆ–ಆತ್ಮನಿರೀಕ್ಷಣೆ ಹಾಗೂ ಆತ್ಮ ಟೀಕೆಗಳು ವಚನಗಳಲ್ಲಿ ಮೂಡಿ ಬಂದಿರುವ ರೀತಿಯು, ತನ್ನ ತಪ್ಪುಗಳನ್ನು ದೈವದ ಮುಂದೆ ಒಪ್ಪಿಕೊಂಡು, ತನ್ನನ್ನು ನೇರ್ಪಡಿಸುವುದರ ಮೂಲಕ

ಉದ್ಧರಿಸಬೇಕೆಂದು ಬೇಡುವ ಹಾಗಾದೀತೆಂಬ ಭರವಸೆಯನ್ನು ತೋರ್ಪಡಿಸುವ ಸ್ವರೂಪದ್ದಾಗಿದೆ. ತನ್ನ ತಪ್ಪನ್ನು ಯಾರಾದರೂ ಕಂಡರೇನು ಗತಿಯೆಂಬ ಅಳುಕಾಗಲೀ, ತನ್ನ ಬಗೆಗೆ ಜನರು ಏನೆಂದುಕೊಂಡಾರೆಂಬ ಭಾವನೆಯಾಗಲೀ, ಸೋಗಿನ ಗಾಂಭೀರ್ಯವಾಗಲೀ ಈ ವಚನಗಳಲ್ಲಿ ಕಾಣದೆ, ಅವು ನೇರವಾಗಿ ಹೃದಯದಿಂದ ಬಂದ ಭಾವನೆಗಳಾಗಿವೆ. ಈ ದೃಷ್ಟಿಯಿಂದ ನೋಡಿದಾಗ **"ಡಿ.ಎಲ್. ನರಸಿಂಹಚಾರ್ಯರು"**ವಚನಗಳನ್ನು**"ಶಿವಶರಣರ ಹೃದಯ ವಿದ್ರಾವಕ ಗೀತ"**[3]ಗಳೆಂದು ಕರೆದಿರುವುದು ಮತ್ತಷ್ಟು ಅರ್ಥಪೂರ್ಣವಾಗುತ್ತದೆ.

ಮುಕ್ತಾಯಕ್ಕಳ ವಚನಗಳು ಜಗತ್ತಿನ ಕೆಲವು ಭಾಷೆಗಳಲ್ಲಿ ಕ್ವಚಿತ್ತಾಗಿ ಕಾಣಬರುವ ಬಿಡಿ–ಬಿಡಿಯಾದ ರಚನೆಗಳಂತೆ ಅಲ್ಪ ಪ್ರಮಾಣದಲ್ಲಿರದೆ, ವಿಪುಲ ಪ್ರಮಾಣದಲ್ಲಿ ದೊರೆಯುತ್ತವೆ. ಇಲ್ಲಿನ ಚಿಂತನಾಲಹರಿಗಳು **'ಉಪನಿಷತ್ತು''ತಿರುಕ್ಕುರಳ್'**ಗಳಲ್ಲಿಯೂ ಇತರ ಕಾವ್ಯಗಳ ನಡುವೆಯೂ ಬಂದಿರಬಹುದಾದರೂ ವಚನಗಳಂತಹ ಮುಕ್ತಕಗಳನ್ನು **'ಕನ್‌ಫ್ಯೂಷಿಯಸ್', 'ಮಾರ್ಕಸ್', 'ಆರೀಲಿಯಸ್'**ರ ಚಿಂತನೆಗಳು **'ಬೈಬಲ್', 'ಇಮಿಟೇಷನ್ ಆಫ್ ಕ್ರೈಸ್ಟ್'** ಮುಂತಾದ ಕಡೆಗಳಲ್ಲಿ ಕ್ವಚಿತ್ತಾಗಿ ಕಾಣಬಹುದು.

ವಚನ ಸಾಹಿತ್ಯ ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು.ಹನ್ನೆರಡನೇ ಶತಮಾನದಲ್ಲಿ ಉಲ್ಬಣಗೊಂಡಿದ್ದ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೊರಬಂದ ಸಾಹಿತ್ಯವೇ ವಚನಸಾಹಿತ್ಯ.

ಮುಕ್ತಾಯಕ್ಕಳ ವಚನಗಳನ್ನು ಅಧ್ಯಯನ ಮಾಡಿದಾಗ ಅವರು ಪಡೆದ ಅಧ್ಯಾತ್ಮಿಕ ಉನ್ನತಿ ಅವಳಿಗಾದ ಸತ್ಯದ ದರ್ಶನ ಅವಳಿಂದ ಸಮಾಜಕ್ಕಾದ ಮಾರ್ಗದರ್ಶನ ಪ್ರಮುಖವಾಗಿ ಕಂಡು ಬರುತ್ತದೆ. ಸತ್ಯದ ದರ್ಶನವಾದಾಗ ಅಥವಾ ಪರಮಾತ್ಮನ ಅನುಭೂತಿಯಾದಾಗ ಮನುಷ್ಯನಲ್ಲಿ ಹಲವು ಪರಿಣಾಮಗಳು

ಕಂಡುಬರುತ್ತವೆ. ಅವುಗಳಿಂದ ಮುಖ್ಯವಾಗಿ ಆತನಲ್ಲಿ ನೈತಿಕ ಬದಲಾವಣೆ, ಸತ್ಯದೊಡನೆ ಸಂಯೋಗದಾನಂದ ಮತ್ತು ಧಾರ್ಮಿಕತೆಯಲ್ಲಿ ಪರಿವರ್ತನೆ ಕಂಡುಬರುತ್ತದೆ. ಇಂಥ ವ್ಯಕ್ತಿ ತನ್ನ ಅಂತರಾತ್ಮದಲ್ಲಿ ಶೋಧ ಮಾಡುತ್ತಾನೆ. ಅಷ್ಟೇ ಅಲ್ಲದೆ ಗುಣಾತೀತನೂ ಆಗುತ್ತಾನೆ. ಗುಣಾತೀತನಾಗುದೆಂದರೆ ರಜೋ- ತಮೋ ಸತ್ವ ಗುಣಗಳಾಚೆ ಹೋಗುವುದು.

ಹನ್ನೆರಡನೇ ಶತಮಾನದ ವಚನಕಾರರಲ್ಲಿ ಅಧ್ಯಾತ್ಮಿಕತೆಯ ಉಸಿರನ್ನೇ ಉಸಿರ್ದಾಣವಾಗಿ ಕಂಡುಬರುವವರು ಅಜಗಣ್ಣ, ಮುಕ್ತಾಯಕ್ಕ. ಅಪೂರ್ವ ಆಧ್ಯಾತ್ಮಿಕ ಅನುಭಾವದ ಪರಿಸರವಾದ 'ಲಕ್ಕುಂಡಿ'ಯಲ್ಲಿ ಹುಟ್ಟಿ ಬೆಳೆದುದ್ದನ್ನು ಐತಿಹಾಸಿಕವಾಗಿ ಹೆಸರುವಾಸಿಯಾದ ಆ ಊರು ಧಾರ್ಮಿಕ ಸಾಧನೆಗೆ ಆಧಾರವಾಗಿತ್ತು. ಅದೂ ಸಾಲದು ಎಂಬಂತೆ ಹಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎನ್ನುವಂತೆ ಅಣ್ಣನಾದ ಅಜಗಣ್ಣ ದೇವನ ತಿರುಳಲ್ಲಿ ಬೆಳೆದ ಮುಕ್ತಾಯಕ್ಕಳೇ ಹೇಳಿಕೊಂಡಿರುವಂತೆ ಅಜಗಣ್ಣ ತಂದೆ ಬೆನ್ನ ಬಳಿಯವಳು.ತಾನು ಎರೆದು ಹೇಳುವ ಮಾತೆ ಮಹಾಶಿಭಕ್ತ, ಮಹಾಘನ ಸೋಮೇಶ್ವರ, ಎಂಬ ಅಂಕಿತವನ್ನೊಳಗೊಂಡ ಅಜಗಣ್ಣ ದೇವನ ತಂಗಿ ಎಂಬ ಹೇಳಿಕೆಯೆ ಅವಳ ಧಾರ್ಮಿಕ ವಾತಾವರಣ ಹೀಗಿತ್ತು ಎಂಬುದನ್ನು ತಿಳಿಸುತ್ತದೆ.

ಅಟ್ಟು-ಮಣ್ಣುವಾಗಲು ಅವಳಿಗೆ ಶಿವನನ್ನು ಕುರಿತಾದ ಚರ್ಚೆ ವಾದ-ವಿವಾದ ಆಲೋಚನೆ ಅರ್ಪಣೆ ಇಷ್ಟರಲ್ಲಿಯೇ ಅವಳಿಗೆಅದೇಸುಖ, ಅದೇ ಅವಳಿಗೆ ಪರಮಾರ್ಥ.

ತನುವಿನೊಳಗೆ ತನುವಾಗಿ ಮನದೊಳಗೆ ಮನವಾಗಿ
ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ
ಕೆಲಬರಿಗೆ ಅರಿಯ ಬಪ್ಪುದೇ ?
ಅಂತರಂಗದೊಳಗೆ ಅದೇ ಎಂದಡೇನು ಹೇಳಾ
ಮನಮುಟ್ಟಿ ಕಾಣಬಾರದು.
ಬಹಿರಂಗದಲ್ಲಿ ಅದೇ ಎಂದಡೇನು ?
ಪೂಜಿಸುವನ್ನಕ್ಕರ ಕಾಣಬಾರದು.
ಸಾಕಾರವಲ್ಲದ ನಿರಾಕಾರ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು
ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ
ಎನ್ನ ಅಜಗಣ್ಣನಿಕ್ಕಿದ ದಸರಿದೊಡಕಿಂಗೆ
ಬೆರಗಾದೆ ಕಾಣ ಪ್ರಭುವೇ ![೩]

"ದೇವರು ಮತ್ತು ಧರ್ಮ ಅಫೀಮು" ಎಂದಿದ್ದಾರೆ **'ಕಾರ್ಲ್‌ಮಾರ್ಕ್ಸ್'**ಅಂತೆಯೇ ನಮ್ಮ ಧಾರ್ಮಿಕ ವಿಚಾರಗಳು ಅಧ್ಯಾತ್ಮಿಕ ಸಂಗತಿಗಳು ಇಲ್ಲಿವೆ. ಖಾಸಗಿಯಾಗಿ ಇರದೇ, ಜಾತ್ಯಾತೀತವಾಗಿಯೂ ನಿಲ್ಲದೇ ದೇಶದ ಭದ್ರತೆಗೆ ಧಕ್ಕೆ ತರುವಂತದ್ದು ನಮಗೆಲ್ಲರಿಗೂ ಗೊತ್ತಿರುವ ಸತ್ಯ. ಅದೊಂದು ಐತಿಹಾಸಿಕ ದುರಂತ. ನಮಗೆ ಅಂತಹ ತೋರ್ಪಡಿಕೆಯ ದೇವರಾಗಲೀ ಭಕ್ತರಾಗಲೀ ಬೇಡ.ಎಂಬುದೇ ಮುಕ್ತಾಯಕ್ಕಳ ಕಾಳಜಿ.

ನಮ್ಮ ಶರೀರದ ಒಂದು ಭಾಗವಾಗಿ ಮನಸ್ಸಿನಲ್ಲಿ ಹಲವಾರು ವಿಚಾರಗಳು ಬಂದುಹೋಗುತ್ತವೆ. ಶಿವನು ಸ್ಥಾಯಿಯಾಗಿ ದೇಹದಲ್ಲಿ ಆತ್ಮವಿದ್ದಂತೆ ಆತ್ಮದಲ್ಲಿ ಪರಮಾತ್ಮನಿರುತ್ತಾನೆ. ಇರಬೇಕು ಎಂಬ ಆಶಯ ಅಕ್ಕನದು.ಆದರೆ ಬೂಟಾಟಿಕೆಯ ಭಕ್ತರಿಗೆ ಇಂತಹ ನಿಜ ಭಕ್ತರ ಅರಿವು ತಿಳಿಯುವುದಿಲ್ಲ. ಅಂತವರನ್ನು ಗುರುತಿಸುವ ಸಾಮರ್ಥ್ಯವು ಅವರಿಗಿಲ್ಲ. ಒಳಮನಸ್ಸಿನಲ್ಲಿ ಇದೆ ಎಂಬುದನ್ನು ತಿಳಿಯಲಾರರು.ಇಂತಹ ತೋರ್ಪಡಿಕೆಯ ಭಕ್ತರು ಬಾಯಿಮಾತಿನಲ್ಲಿ ಶಿವಭಕ್ತ ಎಂದ

ಮಾತ್ರಕ್ಕೆ ಅಂತವರನ್ನು ನಂಬಬಾರದು.ಅವರು ಶಿವ ಪೂಜೆ ಮಾಡುವುದನ್ನು ಕಾಣುವವರಿಗೆ ಒಪ್ಪಲಾಗದು.ನಮ್ಮ ಜನಪದರು ಪ್ರಕೃತಿಯ ಚರಾಚರ ವಸ್ತುಗಳಲ್ಲೆದರಲ್ಲಿಯೂ ದೇವರನ್ನು ಕಂಡಂತೆ ಆಕಾರದಲ್ಲಿನ ನಿರಾಕಾರವಾದ ಲಿಂಗವನ್ನು ಬರೀ ಸ್ಥಾವರದಲ್ಲಿ ಮಾತ್ರವಲ್ಲದೇ ಎಲ್ಲೆಂದರಲ್ಲಿಯೂ ಶಿವನನ್ನು ಕಾಣಬೇಕು.ಆದರೆ ನನಗೆ ಗುರುವಿಲ್ಲ, ಉಪದೇಶವಾಗಿಲ್ಲ, ನನ್ನ ಮನಸ್ಸಿನೊಳಗೆ ಪರಬ್ರಹ್ಮನನ್ನು ಯಾರು ಸ್ಥಾಪಿಸಿಲ್ಲದ ಕಾರಣ, ನನ್ನ ಗುರು, ತಂದೆ ಅಣ್ಣನಾದ **"ಅಜಗಣ್ಣ ಶಿವನೆಂಬ ಬಿಚ್ಚಲಾರದ ಗಂಟುನೀಡಿದ ಕಾರಣ ಅಚ್ಚರಿಗೊಂಡೆ"**ಎನ್ನುತ್ತಾರೆ.

ಸುಮ್ಮನೇಕೆ ದಿನ ಕಳೆಯುವಿರಿ ಸುಮ್ಮನೇಕೆ ಹೊತ್ತು ಗಳೆವಿರಿ ?
ಸುಮ್ಮನೇಕೆ ಹೊತ್ತು ಗಳೆವಿರಿ ಸ್ವಾಮಿಗಳಿರಾ ?
ಮಾಡಬನ್ನಿ ದಿನ ಶಿವರಾತ್ರಿಯ, ಕೇಳಬನ್ನಿ ಶಿವಾನುಭವವ
ನೋಡಬನ್ನಿ ಅಜಗಣ್ಣನಿರವ ಬಸವಣ್ಣ ತಂದೆ.
ತನುವಿಡಿದೆನಾಗೆ ಅನುವನರಿಯದೆ ಕೆಟ್ಟೆನು.
ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು.
ಭಾವದ ಬಯಕೆ ಹಿಂಗದಾಗಿ ವಿಯೋಗಿಯಾಗಿ ಕೆಟ್ಟೆನು.
ಅರಿವ ನುಡಿದು ಮರಹಿಗೊಳಗಾದೆನು.
ಎನ್ನ ಕಾಣದೆ ಭಿನ್ನ ಜ್ಞಾನಿಯಾದೆನು.
ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ
ಎನ್ನಮತಿಗೆ ಮರೆವೆಯ ಮಾಡಿಹೋದನು.[೪]

ಮಾನವನ ಒಪ್ಪಿಗೆ ಪ್ರಶ್ನೆ ಕೇಳದೆ ಭೂಮಿಯಲ್ಲಿ ನಮ್ಮ ಜನನವಾಗಿದೆ.ಸಕಲ ಜೀವರಾಶಿಗಳಲ್ಲಿ ಮನುಷ್ಯ ಜನ್ಮವು ಒಂದು.ಆದರೆ ಮಾನವನ ವಿವೇಚನೆ, ನಡತೆ, ಆಲೋಚನಾ ಶಕ್ತಿ ಇತರೆ ಪ್ರಾಣಿಗಳಿಗಿಂತ ಮಾನವನನ್ನು ಭಿನ್ನವಾಗಿ ಇರಿಸಿದೆ. ಹೀಗಿರುವಾಗ ನಮ್ಮ ಜನ್ಮದ ಮಹತ್ವ ಮರೆತು ಬೇಕಾಬಿಟ್ಟಿಯಾಗಿ ಜೀವಿಸುವುದು ಮನುಷ್ಯ ಜನ್ಮಕ್ಕೆ ಅಪಚಾರ ಮಾಡಿದಂತೆ. ಎಲ್ಲಾ ಪ್ರಾಣಿಗಳು ಕ್ರಿಮಿ ಕೀಟಗಳು, ಸಸ್ಯ ಪಕ್ಷಿಗಳು ಉಣ್ಣುತ್ತವೆ. ಉಸಿರಾಡುತ್ತವೆ. ವಿಶ್ರಾಂತಿ ವಿನೋದ ಪಡೆಯುತ್ತವೆ.

ಸಂತಾನೋತ್ಪತ್ತಿಯನ್ನು ಮಾಡುತ್ತವೆ. ಇದಿಷ್ಟೆ ಮಾಡುವುದಾದರೆ ನಮಗೆ ಶ್ರೇಷ್ಠವಾದ ಮಾನವ ಜನ್ಮ ಏಕೆಬೇಕು ?ಎಂಬುದು ಮುಕ್ತಾಯಕ್ಕನ ಪ್ರಶ್ನೆ.

ಆದ್ದರಿಂದ ಶರೀರ ಪಡೆದಮೇಲೆ ತಿಳುವಳಿಕೆ ಇಲ್ಲದಿದ್ದರೆ ಕೆಡುತ್ತವೆ. ಮನಸ್ಸೋ ಇಚ್ಛೆ ಸ್ವೇಚ್ಛಾಚಾರಿಯಾಗಿ ನಮ್ಮ ಅರಿವು ನಾಶವಾಗಿ ಹಾಳಾಗುತ್ತವೆ. ರಾಗ ದ್ವೇಷಗಳು ದೂರವಾಗದಿದ್ದರೆ ಯೋಗಿಯು ವೇಷದ ಕಪಟಿಯಾಗುತ್ತಾನೆ ಹೊರತು ಶರಣನಾಗಲು ಸಾಧ್ಯವಿಲ್ಲ.

"ನಡೆನುಡಿಯಲ್ಲಿ ಏಕತೆಯಿಲ್ಲದೆ ನಾನಾಡಿದ ಮಾತಿಗೆ ವಿರುದ್ಧವಾಗಿ ನಡೆದು ಸದಾಚಾರದ ಮಾತು ಮರೆತುಹೋಗಿ ನಗೆಪಾಟಲಿಗೆ ಈಡಾದೆನು". "ತನ್ನ ತಾನರಿತರೆ ತನ್ನರಿವೆ ತನಗೆ ಗುರು" ಎಂಬಂತೆ ಎಂಬ ಹೇಳಿಕೆಯಂತೆ ಪ್ರತಿಯೊಬ್ಬ ಜೀವಿಯೂ ತಾನರಿಯುವುದನ್ನು ಚನ್ನಾಗಿ ಬಲ್ಲ. ಹಾಗಾಗಿ ನನ್ನೊಳಗಿನ ಸಂತನನ್ನು ನಾನು ಕಾಣದೆ ಹೋಗಿ ಮೂಡನಾದೆ. ಆದರೆ ನನ್ನಣ್ಣ ಅಜಗಣ್ಣನೆಂಬ ಮಹಾಮಹಿಮ ಪುರುಷನು ಬದುಕಿನ ನಶ್ವರತೆಯ ಅರಿವು ಮೂಡಿಸಿ ಹಾಗೆಯೇ ಅಚ್ಚರಿ ಉಂಟುಮಾಡಿ ಆದ ಆಘಾತಕ್ಕೆ ನನಗೆ ಅರಳು ಮರಳು ಸ್ಥಿತಿ ಉಂಟಾಗಿದೆ.ಎಂದು ಕಾಣದ ಶಕ್ತಿಯ ಮಹತ್ವ ಮತ್ತು ಲೌಕಿಕ ಜಗತ್ತಿನಿಂದ ದೂರವಾದ ಮಂತ್ರಶಕ್ತಿಯನ್ನು ತಿಳಿಸಿದ್ದಾಳೆ.

ಗುರುವಚನದಿಂದಲ್ಲದೆ ಲಿಂಗವನರಿಯಬಾರದು.
ಗುರುವಚನದಿಂದಲ್ಲದೆ ಜಂಗಮವನರಿಯಬಾರದು
ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು
ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು.
ಹಿಂದಣ ಜನ್ಮದಲ್ಲಿ ಲಿಂಗವನು ಪೂಜಿಸಿ ಇಂದು ಜ್ಞಾನೋದಯವಾದಡೆ
ಗುರುವಿಲ್ಲದ ಮುನ್ನ ಆಯಿತೆನ್ನಬಹುದೆ?
ತನ್ನಲ್ಲಿ ತಾನು ಸನ್ನಹಿತನಾದೆಹೆನೆಂದಡೆ ಏನೆಂದರೆ ಗುರುವಿಲ್ಲದೇ ಆಗದು ಕೇಳಾ
ಎನ್ನ ಅಜಗಣ್ಣನೆಂಬ ಗುರುವಿಲ್ಲದೇ
ಆರೂಢಿಯ ಕೂಟ ಸಮನಿಸದು ಕೇಳಾ[೫].

ಸ್ಥಾಪಿತ ಧರಿಸಿದ ಲಿಂಗಶಿವನ ಸಂಕೇತ ಇಂತಹ ಲಿಂಗದ ಸ್ವರೂಪವನ್ನು ಅರಿಯಲು ಗುರುವಿನ ಮಾರ್ಗದರ್ಶನ ಬೇಕು.ಗುರು ಇದ್ದಾಗ ಮಾತ್ರ ಗುರಿತಲುಪಲು ಸಾಧ್ಯ.ಅರ್ಥಾತ್ ಶರಣ ಶಿವನನ್ನು ಕಾಣಲು ದಾರಿ ಸಿಗುತ್ತದೆ. ಹಾಗೆಯೆ ವೇಷಧಾರಿಗಳೆಲ್ಲಾ ಶಿವಭಕ್ತರಲ್ಲ ಅಂಥವರನ್ನು ಗುರುತಿಸಲು ಗುರುವಿನ ಉಪದೇಶ ಬೇಕು ಇಲ್ಲದಿದ್ದರೆ ಉದರಂಭಣಕ್ಕಾಗಿ ಬಗೆ ಬಗೆ ವೇಷತೊಡುವ ಜನರೆ ಜಂಗಮರಾಗಿ ಕಾಣಿಸಿ ಮೋಸಗೊಳಿಸಬಹುದು. ದಾರಿತಪ್ಪಿಸಬಹುದು.ಇತ್ತೀಚೆಗೆ ಮಠಾಧಿಶರು ಸ್ವಯಂ ಘೋಷಿತ ಸನ್ಯಾಸಿಗಳಿಂದಾಗಿ ಭಕ್ತರು ಅನುಭವಿಸುತ್ತಿರುವ ಕಿರುಕುಳ ಅಷ್ಟಿಷ್ಟಲ್ಲ ಅದರಲ್ಲೂ ಮಹಿಳಾ ಭಕ್ತರೂ ಮೊದಲಿಗಿಂತ ಹೆಚ್ಚು ಜಾಗೃತಿಯಾಗಿರಬೇಕೆಂಬುದನ್ನು ಈ ಸಾಲು ಒತ್ತಿ ಹೇಳುತ್ತದೆ.

ಕೈಲಾಸ ಬಯಸುವ ಶಿವಗಣ ಸೇರಲಿಚ್ಛಿಸುವ ಭಕ್ತರು ನಾಲಿಗೆ ಚಪಲಕ್ಕೆ ಬಲಿಯಾಗಬಾರದು ಅದರಲ್ಲೂ ಬಹುತೇಕರು ಪ್ರಸಾದದ ಹೆಸರಿನಲ್ಲಿ ಭಾರಿ ಭೋಜನವನ್ನು ಶಿವನ ಹೆಸರ್ಹೇಳಿ ಹೊಟ್ಟೆಗಿಳಿಸುತ್ತಾರೆ.ಇಂತಹ ಜನರ ಬಾಯಲ್ಲಿ ಮಾತ್ರ ವೈರಾಗ್ಯ ಆದರೆ ಶರಣರಿಗೂ ಬದ್ಧತೆ ಇರಬೇಕು.ರಚನೆಯ ದೌರ್ಭಲ್ಯಕ್ಕೆ ತುತ್ತಾದ ವ್ಯಕ್ತಿ ತನಗರಿವಿಲ್ಲದಂತೆ ಇಂದ್ರಿಯಗಳ ದಾಸನಾಗುತ್ತಾನೆ. ಪಂಚೇಂದ್ರಿಯ

ತೃಪ್ತಿ ಭಕ್ತನ ಏಳಿಗೆಗೆ ದೊಡ್ಡ ಅಡ್ಡಿ ಆದಕಾರಣ ಎಲ್ಲೆಂದರಲ್ಲಿ ನಡೆಯುವ ದಾಸೋಹಕ್ಕೆ ಬಲಿಯಾಗದೆ ತಿನ್ನುವುದೇ ಬದುಕು. ಮಾಡಿಕೊಳ್ಳುವುದೇ ಬದುಕಿಗಾಗಿ ಅರ್ಥಾತ್ ಸಿದ್ಧಿಗಾಗಿ ಏನು ಬೇಕೋ ಅದು ಎಷ್ಟು ಬೇಕೋ ಅಷ್ಟು ಸೇವಿಸಬೇಕೆಂಬುದನ್ನು ಅಕ್ಕ ಹೇಳುತ್ತಾಳೆ.ದೇಹ ದಂಡನೆ ಶರಣ ತತ್ವಗಳಲ್ಲಿ ಒಂದು.

ಹಾಗೆಯೇ ನಾನು ಯಾರೆಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವ ತನ್ನ ದಾರಿ ಎಷ್ಟು ಶ್ರೇಷ್ಟ ಎನ್ನುವ ಆತ್ಮ ವಿಮರ್ಶೆಗೆ ಗುರುವಿನ ಕೈ ದೀವಿಗೆ ಬೇಕು ಏಕೆಂದರೆ ನಾವು ಮಾಡುವ ಕೆಲಸ ನಮಗೆ ಪ್ರಿಯವಾಗಿಯೆ ಕಾಣುತ್ತದೆ. ಅದಕ್ಕೆ ನಮ್ಮೊಳಗೆ ಸಮರ್ಥನೆಯ ಸಮಾಧಾನವು ಸಿಗುತ್ತದೆ, ಇದು ನರಕದ ದಾರಿ ಅದಕ್ಕೆ ಗುರೂಪದೇಶ ಬೇಕು ಪೂರ್ವ ಜನ್ಮದ ಪುಣ್ಯದ ಶೇಷ ಈ ಜನ್ಮದ ಸಾಧನೆಗೆ ಆಧಾರ ಅದು ಬಂದದ್ದು. ಲಿಂಗ ಪೂಜೆಯಿಂದ ಎಂಬ ನಂಬಿಕೆ ಅಕ್ಕನದು. ನನಗೆ ಷಟ್‌ಸ್ಥಲದ ಹಂತ ಸಿಕ್ಕಿದೆ (ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ) ಎಂದು ಭ್ರಮಿಸುವುದು ಆತ್ಮಗತಿ ಅಂತಹ ಶೂನ್ಯ ತತ್ವ ಸಿಗುವುದು ಕೂಡ ಗುರುವಿನಿಂದ ನನಗೆ ಅಂತಹ ಗುರಿ ತೋರಿದ ಗುರು ಅಜಗಣ್ಣ ಎಂದು ಅಭಿಮಾನದಿಂದ ಹೇಳಿದ್ದಾಳೆ.

ಜ್ಞಾನಮೂಲ ಗುರುಸೇವೆ ಎಂಬೆನು
ಐಶ್ವರ್ಯ ಮೂಲ ಲಿಂಗಾರ್ಚನೆ ಎಂಬೆನು
ಮೋಕ್ಷ ಮೂಲ ಘಟ ಸಂತೃಪ್ತಿ ಎಂಬೆನು, ಅಜಗಣ್ಣ ಲಿಂಗವೆ[೬]

ಬದಲಾಗುತ್ತಿರುವ ಸನ್ನಿವೇಶ ಮತ್ತು ದಾವಂತದ ಈ ಬದುಕಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ.ಎಂಬ ಅರೋಪ ಆತಂಕಕಾರಿಯಾಗಿದೆ. ಆದರೆ ಇದಕ್ಕೆ ಗುರು ಶಿಷ್ಯ ಸಂಬಂಧವು ಹೊರತಾಗಿಲ್ಲ ಎಂಬುದು ವಿಪರ್ಯಾಸ. ಆದರೆ ಮುಕ್ತಾಯಕ್ಕಳಂತಹ ವಚನಕಾರ್ತಿಗೆ ತನ್ನ ಇಂದಿನ ಸಾಧನೆಗೆ ಅರಿವಿನ

ವಿಸ್ತಾರಕ್ಕೆ ಗುರುವೇ ಕಾರಣ ಎನ್ನುತ್ತಾಳೆ. ಗುರುವು ತೋರಿದ ಹಾದಿಯಲ್ಲಿ ನಡೆದ ಕಾರಣ ಬೇಕಾದ ಸಕಲ ಸಂಪತ್ತು ದಕ್ಕಿದ್ದು ಶಿವಸ್ವರೂಪಿ ಲಿಂಗ ಪೂಜೆಯಿಂದ ಹಾಗೆಯೆ, ಜನನ ಮರಣಗಳ ಬಾಧೆ ತಪ್ಪಿ ಶಿವಗಣ ಪದವಿ (ಮೋಕ್ಷ) ಸಿಕ್ಕಿದ್ದು ಸಾಕೆಂಬ ಸಂತೃಪ್ತಿಯಿಂದ ಇದಕ್ಕೆ ಅಜಗಣ್ಣ ಲಿಂಗವೇ ಸಾಕ್ಷಿ ಎಂದು ಗುರು ಲಿಂಗ ಜಂಗಮದ ಮಹತ್ವವನ್ನು ಸಾರಿದ್ದಾಳೆ.

ಅಹುದಹುದು ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು
ಕಬ್ಬುನ ಉಂಡ ನೀರಿನಂತೆ ಕಬ್ಬಿಸಿಲುಂಡ ಅರಿಶಿನದಂತೆ
ಉರಿಯೊಳಡಗಿದ ಕರ್ಪೂರದಂತೆ
ಬಯಲಪ್ಪಿದ ವಾಯುವಿನಂತೆ
ಇಪ್ಪ ನಿಲುವು ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೇ
ಅರಿವಡೆ ಮತಿಯಿಲ್ಲ ನೆನೆವಡೆ ಮನವಿಲ್ಲ
ಎನ್ನ ಅಜಗಣ್ಣ ತಂದೆಯನೊಳಕೊಂಡಿಪ್ಪ ನಿಮ್ಮ
ಮಹಿಮೆಗೆ ನಮೋ ನಮೋ ಎನುತಿರ್ದೆನು[2].

ನಿಜ ಶಿವಶರಣರ ಸಾಧನೆ ಯಾರಿಗೂ ಕಾಣಬಾರದು.ಏಕೆಂದರೆ ಅದು ಅನುಭವಿಸಿ ತೀರಬೇಕಾದ್ದು ಶರಣರು ತನ್ನ ಮಹಿಮೆಯನ್ನು ಇನ್ನೊಬ್ಬರ ಮುಂದೆ ಪ್ರದರ್ಶಿಸಲು ಹೋದರೆ ಅವನು ಆಷಾಡಭೂತಿಯಾಗುತ್ತಾನೆ. ಸಿಹಿ ಎಂದರೇನು? ಎಂಬುದನ್ನು ತೋರಿಸಲು ವಿವರಿಸಲು ಸಾಧ್ಯವಿಲ್ಲ. ಅದರ ಅರಿವಾಗುವುದು ಅದನ್ನು ಅನುಭವಿಸಿದಾಗ ಮಾತ್ರ ಹಾಗೆಯೇ ಶರಣ ತತ್ವವನ್ನು ಅರಿತೇ ತೀರಬೇಕು ಅದು ಹೇಗೆಂಬುದನ್ನು ಮುಕ್ತಾಯಕ್ಕ ತನ್ನ ವಚನಗಳ ಮುಂದಿನ ಸಾಲಿನಲ್ಲಿಯೇ ಸ್ಪಷ್ಟಪಡಿಸುತ್ತಾಳೆ. ಬಹುಕಾಲ ನೀರಿನೊಳಗಿರುವ ಕಲ್ಲು ಕರಗುವಂತೆ ಜಲದ ಸಂಗದಿಂದ ಕಬ್ಬಿಣವೂ ಕರಗಿ ನೀರಲ್ಲಿ ಲೀನವಾಗುತ್ತದೆ.ಆದರೆ ಅದು ಯಾರಿಗೂ ಕಾಣುವುದಿಲ್ಲ. ತೋರಿಸಲೂ ಸಾಧ್ಯವು ಇಲ್ಲ. ಹೀಗೆ ಚೆನ್ನಾಗಿ ಬಿಸಿಲು ಬಿದ್ದಾಗ ಮಾತ್ರ ಅದರ ಶಾಖ ಮತ್ತು ಬೆಳಕಿನಿಂದ ಅರಿಶಿನ ಸಿಗುತ್ತದೆ.ಅರಿಸಿನಕ್ಕೆ ಮಾತ್ರವಲ್ಲ

ಸಕಲ ಜೀವರಾಶಿಗೂ ಸೂರ್ಯ ರಶ್ಮಿ ಬೇಕು.ಬೆಂಕಿ ತಾಗಿದ ಕೊಡಲಿ ಕರ್ಪೂರ ಪರಿಮಳ ಸುತ್ತುತ್ತಾ ಉರಿಯಲ್ಲಿ ಲೀನವಾಗುತ್ತದೆ. ತಾನು ಅದರಲ್ಲಿ ಪಕ್ವವಾದೆ ಎಂಬ ಕುರುಹು ನೀಡದೆ ಹಾಗೆಯೇ ನಮ್ಮ ಉಸಿರಾಟಕ್ಕೆ ಜೀವಕ್ಕೆ ಅಗತ್ಯವಾದ ಆಮ್ಲಜನಕ ನಮ್ಮೊಳಗೆ ನಮ್ಮ ಸುತ್ತ ಮುತ್ತ ಇದ್ದರೂ ಹೇಗೆ ಕಣ್ಣಿಗೆ ಕಾಣಿಸುವುದಿಲ್ಲವೋ ಅದೇ ರೀತಿ ಶಿವ ಸಾಕ್ಷಾತ್ಕಾರವನ್ನು ಅದರ ಅನುಭವವನ್ನು ಮಾತಿನಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ. ಅದನ್ನು ವಿವರಿಸುವಷ್ಟು ನನಗೆ ಬುದ್ಧಿಯಿಲ್ಲ. ನೆನಪು ಮಾಡಿಕೊಂಡು ಹೇಳಲು ಸಾಧ್ಯವಿಲ್ಲ, ನನ್ನ ಸಾಧನೆಗೆ ಸಹಕಾರಿಯಾದ ಇಷ್ಟ ದೈವಕ್ಕೆ ನಮಿಸುವುದಾಗಿ ಹೇಳುತ್ತಾಳೆ.

ಸತ್ಯವುಳ್ಳಲ್ಲಿ ಶಬುದು ಹಿಂಗದು;
ಭಾವವುಳ್ಳಲ್ಲಿ ಭಕ್ತಿ ಹಿಂಗದು.
ಮೂರು ಲೋಕದ ಹಂಗಿನ ಶಬುದವೇನಯ್ಯ ?
ಮುಕುತಿಯನೇವೆನಯ್ಯಾ ?
ಎನ್ನ ಯುಕುತಿಯ ಮುಕುತಿಯ ಬಕುತಿಯಪದವನು ಕಂಡು
ನಾಚಿದನಜಗಣ್ಣ ತಂದೆ[೮].

"ಸತ್ಯಮೇವ ಜಯತೇ" ಎಂಬುದು ಉಪನಿಷತ್ತಿನ ಕಾಲದಿಂದಲೂ ಚಾಲ್ತಿಯಲ್ಲಿರುವ ಸಾತ್ವಿಕ ಹೇಳಿಕೆ.ಅದರ ಪ್ರಭಾವ ವಚನಕಾರರ ಸಾಹಿತ್ಯದಲ್ಲಿ ಕಾಣಬಹುದು.ಸತ್ಯದ ಪರವಿದ್ದಾಗ ಅದನ್ನು ಹೇಳಲು ಯಾವ ಹಿಂಜರಿಕೆಯೂ ಇರುವುದಿಲ್ಲ. ಇರಬಾರದು. ಹಾಗೇನಾದರೂ ಅದನ್ನು ಪ್ರತಿಬಂಧಿಸಿದಲ್ಲಿ ತಾತ್ಕಾಲಿಕ ಮಾತ್ರ ಅಂತಿಮವಾಗಿ ಗೆಲುವು ಮಾತ್ರ ಸತ್ಯದ್ದೇ, ಆಗಿರುತ್ತದೆ. ರಾಜಾ ಹರಿಶ್ಚಂದ್ರ, ಶ್ರೀ ರಾಮಚಂದ್ರನ ಪಿತೃವಾಕ್ಯ ಪರಿಪಾಲನೆ ಯುಧಿಷ್ಠರ ನೀತಿ, ಗಾಂಧಿತತ್ವ ಅಷ್ಟೇಕೆ ಪುಣ್ಯಕೋಟಿಯ ನಾಡಿನಲ್ಲಿ ಸತ್ಯದ ಪರವಾದ ಆದರ್ಶಗಳೇ ನಿತ್ಯ ಸ್ಮರಣೆಯಾಗಿವೆ. ಭಾವನೆ ಇರುವ ಶರಣನು ಎಲ್ಲರಲ್ಲೂ ಪರಶಿವನನ್ನು ಕಾಣುತ್ತಾನೆ. ಅಂತಹವನಿಗೆ

ಸ್ವರ್ಗ–ನರಕ ಮರ್ತ್ಯಲೋಕದ ಭಯ ಇರುವುದಿಲ್ಲ. ಇಂತಹವರು ಮುಕ್ತಿಯನ್ನು ಬಯಸುವುದೂ ಇಲ್ಲ. ಹೀಗೆ ಸತ್ಯ–ಭಕ್ತಿ ಇಲ್ಲದ ಢಾಂಭಿಕರು ಭಕುತಿ ಮುಕುತಿಯ ಮಾತನ್ನು ಆಡುವುದನ್ನು ಕೇಳಿದರೆ ನಾಚಿಕೆಯಾಗುತ್ತದೆ ಎಂದು ಮುಕ್ತಾಯಕ್ಕ ಹೇಳುತ್ತಾಳೆ.

ಸಚ್ಚಿದಾನಂದ ಸ್ವರೂಪವಾದ ವಾಙ್ಮನಕ್ಕಗೋಚರವಾದ
ಜ್ಞಾನಕ್ರೀಯನೊಳಕೊಂಡು ನಿಂದ ಜಂಗಮವೆ ಅಂಗ ಪ್ರಾಣವಾದ,
ಶರಣರನೊಳಕೊಂಡು ಚಿದ್ಘನದೊಳಗೆ ಅವಿರಳೈಕ್ಯವಾದ
ಎನ್ನ ಅಜಗಣ್ಣ ತಂದೆಯನರಿದು ಶರಣೆಂಬಾತ
ನೀನಾರು ಹೇಳಯ್ಯಾ?[೯].

ಸತ್ ಚಿತ್ ಆನಂದ ಅರ್ಥಾತ್ ಸತ್ಯವಾದ ಆಲೊಚನೆಗಳಿಂದ ಚಿತ್ ಎಂದರೆ ಮನಸ್ಸಿಗೆ ಆನಂದ ಉಂಟು ಮಾಡುವ ಅಧ್ಯಾತ್ಮವೇ ಸಚ್ಚಿದಾನಂದ ಸ್ವರೂಪ ಅಂತಹ ಆನಂದವನ್ನು ಅನುಭವಿಸಬೇಕೆ ಹೊರತು ಪದಗಳಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ. ಜ್ಞಾನಿಯಾದ ಭಕ್ತನು ಅದನ್ನು ತನ್ನ ಕಾರ್ಯ ಚಟುವಟಿಕೆಯಲ್ಲಿ ವ್ಯಕ್ತಪಡಿಸಿದಾಗ ಅಂತಹ ಜಂಗಮ ಲಿಂಗ ಸ್ವರೂಪಿಯಾದ ಇಂತಹ ಶರಣರೊಂದಿಗೆ ಬೆರೆತು ಶಿವ ಮಹಿಮೆಯನ್ನು ಕೊಂಡಾಡುವ ಭಕ್ತರೊಂದಿಗೆ ಬೆರೆತಾಗ ಮಾತ್ರ ಅವರು ಪರಮೇಶ್ವರನನ್ನು ಕಾಣಬಲ್ಲರು ಎನ್ನುತ್ತಾಳೆ.

ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣ ದೋರುವ ಪರಿಯ ನೋಡಾ ಅವ್ವಾ
ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದನು
ಈ ಅಜಗಣ್ಣನ ಯೋಗಕ್ಕೆ ಬೆರಗಾದೆನವ್ವಾ
ಈ ಅರಿವೆಂತುಟೆಲ್ಲವನೊಳಗಿಟ್ಟು ಕೊಂಡನು,
ಶಿವಗುಣಸಂಚ ಶಿವಯೋಗಿ ಅಜಗಣ್ಣದೇವನು[೧೦]

ದೃಷ್ಟಿಯಂತೆ ಸೃಷ್ಟಿ ಎನ್ನುತ್ತಾರೆ. ಹಿರಿಯರು ಚಿತ್ತ ಶುದ್ಧಿ ಇದ್ದ ಶರಣನಿಗೆ ಎತ್ತ ನೋಡಿದರೆ ಅತ್ತ ಜಂಗಮ ಸ್ವರೂಪಿ ಶಿವನೇ ಕಾಣಿಸುತ್ತಾನೆ. ಶಿವ ನಿರಾಕಾರಿ, ನಿರ್ಗುಣ ಅವನಿಗೆ ರೂಪವಿಲ್ಲ, ಆಕಾರವಿಲ್ಲ, ಬಣ್ಣವಿಲ್ಲ ಆದರೂ ಅವನು ಶಿವಭಕ್ತರ ಗುಂಪಿನಲ್ಲಿಯೇ ಇದ್ದಾನೆ. ಅವನನ್ನು ಕಂಡು ಅಚ್ಚರಿಗೊಂಡವಳು ಮುಕ್ತಾಯಕ್ಕ.

ಹಿಡಿದಾಚಾರವ ಬಿಡದನ್ನಕ್ಕರ
ಎನ್ನ ಅರಿವ ಮರೆಯದನ್ನಕ್ಕರ
ಎನ್ನ ಮನವ ಸುಡದನ್ನಕ್ಕರ
ಎನ್ನ ಬೆಡಗಿನ ಗುರುವ ತೊರೆಯದನ್ನಕ್ಕರ
ಸುಸುರವೆಂತಪ್ಪುದೊ ಹೇಳಾ ?
ಹೋಹ ಬಟ್ಟೆಯಸರಿಯದನ್ನಕ್ಕರ
ತಾನಾಗಬಾರದು ಕಾಣಾ, ಎನ್ನ ಅಜಗಣ್ಣ ತಂದೆಯಂತೆ(೧೧)

ಶಿವಭಕ್ತನಾದವನಿಗೆ ಕೆಲವು ಕಟ್ಟು ಪಾಡುಗಳಿವೆ, ರೀತಿ ನೀತಿಗಳಿವೆ. ಆತ ಓತ ಪ್ರೋತವಾಗಿ ಬದುಕುವಂತಿಲ್ಲ. ಅದಕ್ಕಾಗಿ ಕೆಲವು ಆಚರಣೆಗಳನ್ನು ರೂಢಿಸಿಕೊಂಡಿರಬೇಕು.ಅಂತಹ ಆಚಾರಗಳನ್ನು ಬಿಡದೆ ಆಚರಿಸುವವರಿಗೆ ಲೌಕಿಕ ಬದುಕಿನ ಆಕರ್ಷಣೆ ಉಂಟು ಮಾಡುವ ಬಯಕೆಗಳನ್ನು ಪಡುವವರಿಗೆ ಅಷ್ಟೆ ಅಲ್ಲ ಗುರುವಾದರೂ ಆ ಮಾನವನ ಮೇಲಿನ ಮೋಹ ಕಳೆಯುವವರೆಗೆ ಆ ಶಿವಶರಣೆಗೆ ಶಿವ ಸಾನಿಧ್ಯ ಸುಲಭವಲ್ಲ. ಎಂದು ಅಕ್ಕ ಎಚ್ಚರಿಸುತ್ತಾಳೆ.

ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೋ ?
ನೆರೆಯರಿದ ಬಳಿಕ ಮತ್ತೆ ಮತಿ ಹುಟ್ಟಲುಂಟೆ ?
ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೋ ?
ತನ್ನಲ್ಲಿ ತಾನು ತದ್ಗತವಾದ ಬಳಿಕ
ಬೊಮ್ಮ ಪರಬೊಮ್ಮವಾದನೆಂಬುದಿಲ್ಲ ನೋಡಾ
ಎನ್ನ ಅಜಗಣ್ಣ ತಂದೆಗೆ(೧೨).

ಸಿಡಿಲು ಬಡಿದು ಹಾಳಾಗಿ ಆಕಾರ ಕಳೆದುಕೊಂಡ ಬಾವಿಗೆ ಮೆಟ್ಟಿಲಿನ ಅವಶ್ಯಕತೆ ಇಲ್ಲ. ಹಾಕಿದರೂ ಅದು ವ್ಯರ್ಥ. ಒಂದು ವಸ್ತುವಾಗಲಿ, ಒಬ್ಬ ವ್ಯಕ್ತಿಯ ಸ್ವರೂಪವಾಗಲಿ ಪೂರ್ತಿ ಚೆನ್ನಾಗಿ ಪರಿಚಯವಾದ ಮೇಲೆ ಮತ್ತೆ ಅವರ ಬಗ್ಗೆ ನಮಗೆ ಹೊಸ ಭಾವನೆ ಹುಟ್ಟುವುದಾಗಲಿ ಅಭಿಪ್ರಾಯ ಬೇಧವಾಗಲಿ ಉಂಟಾಗುವುದಿಲ್ಲ. ದೀಪವಿರುವ ಮನೆಗೆ ಕತ್ತಲು ಆವರಿಸುವುದಿಲ್ಲ!. ತನ್ನ ಮನದ ಮಾಯೆ ಅರಿತು ಸುಟ್ಟ ನಂತರ ಬೇರೊಬ್ಬ ಸೃಷ್ಟಿಕರ್ತನನ್ನು ಕಾಣುವ ಹಂಬಲ ಬೇಕಿಲ್ಲ. ಆ ಪರಬ್ರಹ್ಮ ತನ್ನ ಮಾತಿನೊಳಗೆ ಇರುತ್ತಾನೆ. ಎಂಬ ನಂಬಿಕೆ ಅಕ್ಕನದು.

ಘನ ಮಹಿಮ ಶರಣರ ಸಂಗದಿಂದ ಘನಕ್ಕೆ – ಘನವೇದ್ಯವಾದ ಬಳಿಕ
ಅರಿಯಲಿಲ್ಲ, ಮರೆಯಲಿಲ್ಲ; ಕೂಡಲಿಲ್ಲ ಅಗಲಲಿಲ್ಲ;
ಮನ ಮೇರೆದಪ್ಪಿ ನಿರವಯಲಾದ ಸುಖವ
ಶೂನ್ಯ ನಿಶೂನ್ಯವೆಂದು ನುಡಿಯಲುಂಟೆ ?
ಶಬ್ದ ಮುಗ್ದವಾಗಿ ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ
ಉರಿಯುಂಡ ಕರ್ಪೂರದಂತಾದೆನಯ್ಯಾ[(೧೩)].

"ಸಹವಾಸದಂತೆ ಬುದ್ಧಿ ತಿಂಡಿಯಂತೆ ಲದ್ದಿ" ಎಂಬ ಗಾದೆ ಇದೆ.**"ನಿನ್ನ ಸ್ನೇಹಿತೆ ಎಂಥವಳು ಎಂಬುದನ್ನು ಹೇಳು ನಾನು ಎಂತಹವಳು ಎಂಬುದನ್ನು ಹೇಳುತ್ತೇನೆ"** ಎಂದಿದ್ದಾರೆ. **'ಮಹಾತ್ಮ ಗಾಂಧೀಜಿ'**. ಇದರರ್ಥ ಇಷ್ಟೆ.ಸಮಾನ ಭಾವನೆ, ಆಸಕ್ತಿ ಅಭಿರುಚಿ ಇರುವವರು ಮಾತ್ರ ಆತ್ಮೀಯರಾಗುತ್ತಾರೆ.ಇದರ ತಾತ್ಪರ್ಯವೇನೆಂದರೆ **"ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ"** ಎಂಬ ಉಕ್ತಿಯಿಂತೆ ನಾವು ಸೇರುವ ಸಹವಾಸ ನಮ್ಮ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ.ಅದೃಷ್ಟಕ್ಕೆ ಉತ್ತಮರ ಸಂಸರ್ಗದಿಂದ ಮಹಾ ಮಹಿಮಾ ಶಿವಶರಣರ ಜೊತೆ ಸೇರಿದ ಕಾರಣ ಅವನ ಘನತೆ ಮಹತ್ವ ನನಗೂ ಬಂತು. ಪರಿಣಾಮವಾಗಿ ಅರಿಯಲಿಲ್ಲ, ಮರೆಯಲಿಲ್ಲ.

ಅಂದರೆ ಹೊಸದಾಗಿ ಇನ್ನೇನು ತಿಳಿಯಬೇಕಾದ ಅವಶ್ಯಕತೆ ಬರಲಿಲ್ಲ. ವ್ಯಕ್ತಿತ್ವವೂ ಮುಕ್ಕಾಗಲಿಲ್ಲ. ಇದರಿಂದ ವ್ಯಾಮೋಹ ಬೆಳೆಯಲೂ ಇಲ್ಲ. ದೂರವಾದಾಗ ವಿರಹದ ಚಿಂತೆ ಕಾಡಲಿಲ್ಲ. ಸೀಮಿತ ಬುದ್ದಿಯ ಮನಸ್ಸು ದೊಡ್ಡವರ ಪ್ರಭಾವದಿಂದ ವಿಶಾಲ ಮನೋಭಾವ ಹೊಂದಿ ನಿರಂಕುಶವಾಗಿ ಯೋಚಿಸತೊಡಗಿದ ಸುಖವನ್ನು ಸಿದ್ಧಿ ; ಸ್ಥಿತಿ ಎಂದು ವಿಂಗಡಿಸಿ ಹೇಳಲು ಸಾದ್ಯವೇ ಇಲ್ಲ. ಅಂತಹ ಉತ್ತುಂಗ ಸ್ಥಿತಿ ತಲುಪಿದ ಶಿವ ಶರಣೆಗೆ ವಾಚ್ಯದ ವಾಚಾಳಿತನಕ್ಕಿಂತ ಮೌನದ ಆನಂದವೆ ಪರಮ ಸುಖ ಅದು ಉರಿಗೆ ಸಿಕ್ಕಿ ತನ್ನ ಬಹಿರಂಗದ ಬಾಳು ಕಳೆದುಕೊಂಡು ಕರಗುತ್ತಲೂ ಪರಿಮಳವನ್ನೇ ನೀಡಿದ ಕರ್ಪೂರದಂತೆ ಆಯಿತು ನನ್ನ ಬದುಕು ಎಂಬ ಸಾಲುಗಳಲ್ಲಿ ಬದುಕಿನ ಸಾರ್ಥಕತೆಯ ಸೊಗಸು ಸಂಭ್ರಮಿಸಿದೆ.

ಅಡಿ ಟಿಪ್ಪಣಿ

೧) ಡಾ॥ ಜಿ.ಎಸ್. ಶಿವರುದ್ರಪ್ಪ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ; ಸಂಪುಟ೩, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ, ಪುಟ ೪೪, ೧೯೭೬.

೨) ಡಾ॥ ಜಿ.ಎಸ್.ಶಿವರುದ್ರಪ್ಪ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, ಪುಟ ೨೧೬, ೧೯೭೬.

೩) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೦: ವಚನಸಂಖ್ಯೆ: ೧೧೧೬.

೪) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೪: ಪದ್ಯಸಂಖ್ಯೆ: ೧೧೩೧.

೫) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೨೯: ವಚನಸಂಖ್ಯೆ: ೧೧೧೧.

೬) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೦: ವಚನಸಂಖ್ಯೆ: ೧೧೧೪.

೭) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೨೬: ವಚನಸಂಖ್ಯೆ: ೧೧೦೧.

೮) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೪: ವಚನಸಂಖ್ಯೆ: ೧೧೨೮.

೯) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೩: ವಚನಸಂಖ್ಯೆ: ೧೧೨೭.

೧೦) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೨೮: ವಚನಸಂಖ್ಯೆ: ೧೧೦೮.

೧೧) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೫: ವಚನಸಂಖ್ಯೆ: ೧೧೩೩.

೧೨) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೩೫: ವಚನಸಂಖ್ಯೆ: ೧೧೩೦.

೧೩) ಶಿವಶರಣೆಯರ ವಚನ ಸಂಪುಟ ೫, ಸಂಪಾದಕ: ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ ೩೨೯: ವಚನಸಂಖ್ಯೆ: ೧೧೧೨.

ಮುಕ್ತಾಯಕ್ಕಳ ವಚನಗಳ ವೈವಿಧ್ಯತೆ

ಅಧ್ಯಾಯ – ೨.

ಮುಕ್ತಾಯಕ್ಕಳ ವಚನಗಳ ವೈವಿಧ್ಯತೆ.

ಮುಕ್ತಾಯಕ್ಕಳು ಎಲ್ಲಾ ವಚನಕಾರ್ತಿಯರಂತಲ್ಲ, ಆಕೆಯ ಆಲೋಚನಾ ವಿಧಾನವೆ ವಿಭಿನ್ನ.ಗುರು–ಲಿಂಗ – ಜಂಗಮರನ್ನು ಕುರಿತು ಚರ್ಚಿಸುತ್ತಾಳೆ.

ಮುಕ್ತಾಯಕ್ಕಳ ವಚನಗಳು ಅಧ್ಯಾತ್ಮಿಕ, ಧಾರ್ಮಿಕ, ಕಾವ್ಯಾತ್ಮಕ, ಮನೋವಿಶ್ಲೇಷಣಾತ್ಮಕ, ಶೈಕ್ಷಣಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಮೂಹಿಕ, ಅನುಭಾವಿಕ, ಮಾನವಿಕ ಎಂದು ವಿವಿಧತೆಯಲ್ಲಿ ಐಕ್ಯತಾಭಾವ ಕಂಡುಬರುತ್ತದೆ.ಹಾಗೆಯೇ ಐಕ್ಯತಾಭಾವನೆಯಿಂದ ವಿವಿಧತೆಯ ಕುರುಹುಗಳು ಕಂಡುಬರುತ್ತವೆ.

ಜ್ಞಾನ ಮೂಲ ಗುರುಸೇವೆ ಎಂಬೆನು
ಐಶ್ವರ್ಯಮೂಲ ಲಿಂಗಾರ್ಚನೆ ಎಂಬೆನು,
ಮೋಕ್ಷಮೂಲ ಘಟಸಂತೃಪ್ತಿ ಎಂಬೆನು ಅಜಗಣ್ಣ ಲಿಂಗವೆ[೧].

ಗುರುವಚನದಿಂದಲ್ಲದೆ ನಾವು ಏನೊಂದನ್ನು ಸಾಧಿಸಲು ಸಾಧ್ಯವಿಲ್ಲ. ಜ್ಞಾನಕ್ಕೆ ಮೂಲ ಗುರುವೆ ಹಾಗೆಯೆ ಅರಿವೆ ಗುರು ನುಡಿ ಜ್ಯೋತಿರ್ಲಿಂಗ ಎನ್ನುವ ವಚನಕ್ಕೆ ಪೂರಕವಾಗಿ ಜ್ಞಾನ ಎಂದರೆ ನಮ್ಮ ಅರಿವಿಗೆ ಬರುವ ಒಂದು ವಿಶಿಷ್ಟ ಪರಿಜ್ಞಾನವೇ ಗುರು, ಎಂದು ಹೇಳುತ್ತಾ ಐಹಿಕ ಭೋಗ ಜೀವನದಲ್ಲಿ ಮೈ ಮರೆತಿರುವ ಜಗತ್ತು ನಿಜವಾದ ಐಶ್ವರ್ಯವೆಂದರೆ ಲಿಂಗದ ಪೂಜೆ. ಅಕ್ಕಳ ಅಧ್ಯಾತ್ಮಿಕ ನಿಲುವಿನ ಹಿನ್ನಲೆಯಲ್ಲಿ ತನ್ನ ಅಣ್ಣ ಅಜಗಣ್ಣ ಶಬ್ದಾಡಂಬರದ ವ್ಯಕ್ತಿಯಾಗಿರದೆ, ನಿಶ್ಯಬ್ದಾಕಾರದ ಮುಗದ ನಾದನು ಎಂದು ತನ್ನ ಅಣ್ಣನ ಮಹಾಜ್ಞಾನದ ಬಿಂಬ ತನ್ನಿಂದ ದೂರವಾದಾಗ ಹಾಗೂ ಉಳಿದ ವಚನಕಾರರ ಸಂಸರ್ಗದಿಂದ ಮುಕ್ತಾಯಕ್ಕಳು.ತನ್ನ

ನಿಲುವಿಗೆ ನಿಲುಕಿದ ಮಹಾಜ್ಞಾನದಿಂದ ಹೇಳುತ್ತಾಳೆ. ಮೋಕ್ಷವೆಂದರೆ ಸತ್ತನಂತರ ಪಿತ್ರಾರ್ಪಣ ಮಾಡಿದರೆ ಮೋಕ್ಷ ದೊರಕುತ್ತದೆ ಎನ್ನುವುದು ಕಲ್ಪನೆ, ಆದರೆ ಮುಕ್ತಾಯಕ್ಕಳ ತನ್ನ ಅನುಭವದ ನಿಲುವಿಗೆ ನಿಲುಕಿದ್ದು ಇಡೀ ಶರೀರವನ್ನು ಕರ್ಮ ಸಿದ್ಧಾಂತದಲ್ಲಿ ತೊಡಗಿಸುವುದು.ಸೇವೆ ಮಾಡುವುದು ಎಂದರ್ಥ.ಬದುಕಿದ್ದಾಗ ಯಾರೊಬ್ಬರಿಗೂ ಸೇವೆ ಗೈಯದ ಈ ದೇಹವಿದ್ದು ಪ್ರಯೋಜನವಿಲ್ಲ. ಸತ್ತ ನಂತರ ಆ ಶರೀರ ಮೋಕ್ಷ ಪಡೆಯಲೆಂದು ವಿಧಿಕರ್ಮಗಳನ್ನು ಮಾಡಿದರೆ ಅದು ಮೋಕ್ಷದ ಮೂಲವಲ್ಲ ಎಂದು ಹೇಳುತ್ತಾಳೆ.

ಮುಕ್ತಾಯಕ್ಕಳ ವಚನಗಳ ಈ ನಿಲುವಿಗೆ ತನ್ನ ಬೆನ್ನಮುಂದೆ ಬಂದ ಅಜಗಣ್ಣನ ಅಪರಿಮಿತ ಅನುಭಾವದ ಸ್ಥಿತಿಯೆ ಮುಕ್ತಾಯಕ್ಕ ತನ್ನ ವಚನಗಳಲ್ಲಿ ತಾತ್ವಿಕ ಹಾಗೂ ವೈಚಾರಿಕ ನಿಲುವುಗಳನ್ನು ಸ್ಪಷ್ಟಪಡಿಸುತ್ತಾಳೆ.

ಅರಿವನಣಲೊಳಗಿಕ್ಕಿ ಅಗಿವುತ್ತಿದೆ, ಮರ್ತ್ಯಲೋಕವೆಲ್ಲವು
ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು.
ನಾನೆಂತು ಬದುಕುವೆನಣಾ ?
ಕತ್ತಲೆಯ ಬೆಳಗ ಕಾಂಬ ಸಂದೇಹಿ ನಾನೊಬ್ಬಳು.
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣ ನಿನ್ನ ಯೋಗ !(2)

ಅರಿವಿನ ಜನ್ಮಕ್ಕೆ ಬಂದ ಮಾನವಕುಲ ಬೆಲೆಯಿಲ್ಲದ ಜೀವರತ್ನ, ಭಾವರತ್ನ 'ಅರಿವು' ಎಂಬ ಅರಿವಿಲ್ಲ ಈ ಕುಲಕೋಟಿಗೆ. ವಿಶ್ವತರಂಗ ಕೋಟಿಗೆ ಅರಿವಿನಲ್ಲಲ್ಲದೆ ಅಸ್ತಿತ್ವವಿಲ್ಲ ಎಂಬ ಕಲ್ಪನೆಯಿಲ್ಲ. ಈ ಕೋಟಿಗೆ ಇರುವು ಇದ್ದರೂ ಅರಿವು ಅದನರಿಯದಿದ್ದರೆ ಇದ್ದ ಇರುವೆಲ್ಲ ಇಲ್ಲದಂತೆಯೆ.ಮತ್ತೆ ಈ ಇರವು ಅರಿವನುಳಿದು ಎಂದೂ ಇಲ್ಲ. ಆದರೆ ಈ ಇರವಿನ ನಿತ್ಯ ಸಂಗಾತಿಯಾದ ಅರಿವು ಉಳಿಯರಿಯದೆ ಕೆಟ್ಟಿತ್ತು.ಲೋಕವೆಲ್ಲವೂ ಅರಿವನ್ನು ಜ್ಞಾನರತ್ನ ಸ್ವಯಂಕಾಂತಿಯನ್ನು

ಪರಮಾಲಂಕಾರವೆಂದು ದೇಹ, ಪ್ರಾಣ, ಇಂದ್ರಿಯ. ಕರಣ ಭಾವದಲಿ ಸರ್ವಾಂಗ ಲಿಂಗನವಾಗಿ ಧರಿಸದೆ ಅಂಥ ಕಾಂತಿಯನ್ನು ದವಡೆಯಲ್ಲಿಕ್ಕಿ ಕಡಿದು ಜಗಿದು ಮಂಗನ ಕೈಗೆ ಕೊಟ್ಟ ಮಾಣಿಕ್ಯದಂತೆ ಅರಿವು ಈಡಾಗುತ್ತಿದೆ. ಮಾನವಲೋಕದಲ್ಲಿ ಲೋಕದ ಈ ಆಟ ಮನದ ಮಾಯಾಜಾಲ. . . ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು. . . . ಮನದ ಕುರುಡಿಗೆ ಅರಿವಿನ ಕಾಂತಿ ಕಾಳಕತ್ತಲೆ. ಈ ಕತ್ತಲೆ ಕವಿಯಿತ್ತು ಮೂರು ಲೋಕದೊಳಗೆ. ಕತ್ತಲೆಯ ಕುಲಕ್ಕೆ ಮರ್ತ್ಯಲೋಕವಲ್ಲದ ಸ್ವಯಂ ಸ್ವರಾಜ್ಯವಿಲ್ಲ. ಇಂಥ ಸಾವಿನ ಸೀಮೆಯಲಿ ಬದುಕುವುದೆಂತು? ಎನ್ನುವಲ್ಲಿ ಅಜಗಣ್ಣನ ಯೋಗ ಬಹಿರ್ಮುಖವಾದ ಮನಸ್ಸು ಇಂದ್ರಿಯದ ಹೊರ ಛಾಪವನ್ನು ಮುಚ್ಚಿ ನಿಜ ಸ್ವರೂಪಕ್ಕೆ ಸ್ವಯಂ ಜ್ಞಾನವೆಂಬ ಕಾಂತಿದರ್ಪಣವನ್ನು ಹಿಡಿದಿತ್ತು.

ಹಾಗೆಯೆ ಒಳಗೆ ನೋಡಿದರೆ ಬೆಳಗು ಹೊರಗೆ ನೋಡಿದರೆ ಕತ್ತಲೆ! ಒಳಗಿಂದ ನೋಡಿದರೆ ಒಂದು ಹೊರಗಿಂದ ನೋಡಿದರೆ ಹಲವು ಅಜಗಣ್ಣ ನನ್ನ ಹೊರಗಡೆಯಿಂದ ನೋಡಿ ಭ್ರಮಿತನಾಗಿದನಲ್ಲಾ ಒಳಗಡೆಯಿಂದ ನೋಡಿದಾಗ ಅಣ್ಣನ ನಿಜವಾದ ಬೆಳಗು ಕಾಣಬರುತ್ತದೆ.

ಮುಕ್ತಾಯಕ್ಕಳ ವಚನದಲ್ಲಿ ವೈವಿಧ್ಯತೆಯ ಆಗರವೇ ತುಂಬಿದೆ.

ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಲ್ಲಿ ಕಾವ್ಯವ ಕೇಳಿದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ
ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ
ಆರೂಢಗೆಟ್ಟೆಯೊ ಅಜಗಣ್ಣ. ![೩]

ಅಜಗಣ್ಣ ಲಿಂಗೈಕ್ಯನಾದ ಸಂದರ್ಭದಲ್ಲಿ ಮುಕ್ತಾಯಕ್ಕ ಶೋಕಿಸುತ್ತಾ ಅಜಗಣ್ಣ ನೀವಾದರೂ ಕುರುಡನ ಕೈಯನ್ನು ಹಿಡಿದ ಕುರುಡನಂತೆ ಕಣ್ಣಿಗೆ ಅತೀತವಾಗಿ ಮೂಗನ ಕೈಯಲ್ಲಿ ಕಾವ್ಯವನ್ನು ಕೇಳಿದಂತೆ ಇಲ್ಲ. ಮುಕ್ತಾಯಕ್ಕಳ ಅನುಭವದ ನುಡಿಗಳನ್ನು ಕಾಣಬಹುದು.ಅಂಧಕನ ಕೈಯ ಅಂಧಕ ಹಿಡಿದಾಗಲೂ ಅಧ್ಯಾತ್ಮಿಕ ನೆಲೆಯಲ್ಲಿ ಮುಂದೆ ಹೋಗಲು ಸಾಧ್ಯ ಮೂಗನ ಬಾಯಿಂದ ಕಾವ್ಯವನ್ನು ಕೇಳಬಹುದು ಕನ್ನಡಿಯೊಳಗೆ ಪ್ರತಿಬಿಂಬವನ್ನು ಹಿಡಿಯಲು ಅಸಾಧ್ಯ.ಆದರೂ ಮುಕ್ತಾಯಕ್ಕಳ ಅನುಭಾವಿಕವಾಗಿ ಅದು ಸಾಧ್ಯ ಅಂತರಂಗದಲ್ಲಿ ಅಡಗುವ ಆಮೆ ಬಹಿರಂಗದಲ್ಲಿ ತೆರೆದುಕೊಳ್ಳುವ ಆಮೆಯ ಮರಿಯಂತೆ ತನ್ನ ಅಣ್ಣ ಇನ್ನು ಬದುಕನ್ನು ಸಾಗಿಸುತ್ತಾ ಇರಬಹುದಿತ್ತು.ಆದರೆ ಆತ ಎಲ್ಲವನ್ನು ಬಿಸುಟು ಬಹುದೂರ ಹೊರಟು ಹೋದ ಎಂದು ಹೇಳುತ್ತಾಳೆ.

ಅಕ್ಕಳ ಎಲ್ಲಾ ವಚನಗಳಲ್ಲಿಯೂ ಅಜಗಣ್ಣನ ಪರಮಾರ್ಥಿಕದ ಆಧ್ಯಾತ್ಮದ ಮಾತುಗಳನ್ನಾಡುತ್ತಾ ಅಜಗಣ್ಣ ಬಾಲಕನಾಗಿದ್ದಾಗಿನಿಂದಲೂ ಶಬ್ದ ಮುಗ್ದನಾಗಿದ್ದ ಹಾಗೂ ಶರಣನಾಗಿದ್ದ.ಅವನ ಇಷ್ಟಲಿಂಗ ಹೃದಯಸ್ಥವಾಗಿದ್ದುದರಿಂದ ಲಿಂಗಾರ್ಚನೆಯೂ ಮಂತ್ರಾರ್ಚನೆಯೂ ಅಂತರಾಳದಲ್ಲೇ ನಡೆಯುತ್ತಿತ್ತು.

ಅಂತಹವನು ತಲೆ ಬಾಗಿಲುವಾಡಕ್ಕೆ ತಾಗಿದಾಗ ಓಂ ನಮಃ ಶಿವಾಯ' ಮಂತ್ರವನ್ನು ಹೊರಗುಚ್ಚರಿಸಿ ಬಯಲಾದ ಆರೂಢಗೆಟ್ಟ.

ರವಿಯೊಳಡಗಿದ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ,
ನಿಮ್ಮೊಳಡಗಿದ ಭೇದವ ಭಿನ್ನವ ಮಾಡುವರೆ ಅಣ್ಣಾ?
ನಿಮ್ಮ ನುಡಿಗಳೆಲ್ಲವೂ ಪ್ರತಿಬಿಂಬಗಳಾದವೆ ಅಣ್ಣಾ?
ಕೊಡನೊಳಗಣ ಜ್ಯೋತಿಯಡಗಿಸಲರಿಯದೆ
ಮಿಗೆವರಿದಂತಾಗೆಯಾ ಅಜಗಣ್ಣ ![೪]

ಸೂರ್ಯನಲ್ಲಿರುವ ಬಿಂಬದಂತೆ ಹಿಡಿಯುವರ ಹಿಡಿತಕ್ಕೆ ಸಿಕ್ಕದೆ ಅಣ್ಣಾ ನೀವಿರಬೇಕಾಗಿತ್ತು ಸೂರ್ಯ ಎಂದರೆ ಶಿವನಾಮಸ್ಮರಣೆ ಹೊರಗಿನ ವಿಚಾರಣೆ ಪ್ರತಿಬಿಂಬ ಆ ಪ್ರತಿಬಿಂಬ ಯಾರು ಹಿಡಿಯಲಾರರು ಹಾಗೆ ನಿನ್ನ ನಿಜ ನಾಮ ಸ್ಮರಣೆ ಮುಗ್ದನಾಗಿರಬೇಕಾಗಿತ್ತು ಎಂತಲೂ ಅಂದು ನೀವಾಡಿದ ಮಾತುಗಳೆಲ್ಲವೂ ಕನ್ನಡಿಯಲ್ಲಿನ ನೆರಳಿನಂತಾಗಿದೆ.ಗಾಜಿನ ಬುರುಡೆಯಲ್ಲಿನ ಜ್ಯೋತಿ ಆ ಗಾಜಿನ ಬುರುಡೆಯಲ್ಲಿಯೇ ಅಡಗಿರಲಾರದೆ ಹೊರಹೊಮ್ಮಿ ಹೋದಂತಾದಿರಿ ಎಂದು ಹೇಳುತ್ತಾಳೆ.

ವಚನ ಸಾಹಿತ್ಯದಲ್ಲಿಯೇ ಅತ್ಯಂತ ವೈವಿಧ್ಯತೆಯ ಆಗರದ ಅನುಭವಾಮೃತವನ್ನು ಅಕ್ಕಳು ಉಣಬಡಿಸುತ್ತಾಳೆ.ಇಲ್ಲಿ ನಿಜವಾದ ಭಕ್ತಿ ಎಂದಿಗೂ ತೋರ್ಪಡಿಸಲಾಗದು.ಅದು ಸೂರ್ಯನಲ್ಲಿ ಅಡಗಿರುವ ಪ್ರತಿಬಿಂಬದಂತೆ ಎಲ್ಲೂ ಕಾಣಬಯಸುವುದಿಲ್ಲ. ಗಾಜಿನ ಬುರುಡೆಯಲ್ಲಿನ ಜ್ಯೋತಿ ಆಗಾಜಿನ ಬುರುಡೆಯಲ್ಲಿಯೇ ಅಡಗಿ ತನ್ನ ಮುಗ್ದ ಜ್ಞಾನವನ್ನು ಹೇಗೆ ಪ್ರಕಟ ಪಡಿಸಬೇಕು ಎನ್ನುವಲ್ಲಿ ಅಕ್ಕಳ ಆಶಯ ವ್ಯಕ್ತಪಡಿಸುತ್ತದೆ.

ಲಿಂಗ ಪ್ರಕಾಶ ಲಿಂಗದಲ್ಲೆಲ್ಲಾ ವ್ಯಾಪಿಸಿದ್ದು ಅದು ಮೈಯಿಂದ ಸಿಡಿದು ಹೋದದ್ದು ಹೇಗೆ ಎಂಬ ಭಾವನೆಯನ್ನು ಸೂಚಿಸುತ್ತದೆ. ಶಿವಜ್ಞಾನವೆನ್ನುವುದು ಸೂರ್ಯನಲ್ಲಿ ಅಡಗಿದ ಪ್ರತಿಬಿಂಬದಂತೆ ಇರಬೇಕು ಇದುವರೆಗೂ ಜ್ಞಾನವನ್ನು ಅಡಗಿಸಿಕೊಂಡಿದ್ದವರು. ಇಂದು ಅದನ್ನು ಪ್ರಕಟ ಮಾಡಿ ನಮಗೆ ನೋವಾಗುವಂತೆ ಮಾಡಿದಿರಿ ಇದುವರೆಗೂ ಮೌನವೇ ನಿಮ್ಮ ಮಂತ್ರವಾಗಿತ್ತು ಕೊಡಒಡೆದು ಜ್ಯೋತಿ ಜಾರಿದಂತೆ ನಮ್ಮ ಕೈತಪ್ಪಿ ಹೋಗಿದ್ದೀರಿ ಎಂದು ತನ್ನ ಅಣ್ಣನ ಸಾವಿನ ಕೊನೆಯ ಕ್ಷಣದಲ್ಲೂ ಶಿವಭಕ್ತೆಯ ಪಾರಮ್ಯತೆಯನ್ನು ಮೆರೆಯುತ್ತಾಳೆ.

ಸ್ಪಟಿಕಪ್ರಜ್ವಲಜ್ಯೋತಿ ಘಟದೊಳಗೆ ತೋರುತ್ತಿರೆ.
ದಿಟಪುಟವತಿಗಳೆದು ಸಟೆಯ ಬಳಸುವರೆ?
ಅಂತರಂಗ ಶುದ್ಧಿಯ ಬಹಿರಂಗಕ್ಕೆ ತಂದು
ಸಂತೈಸಲರಿಯದೆ ಮರುಳಾದಿರಣ್ಣಾ !
ಜಂತ್ರದ ಕೀಲು ಕೂಟದ ಸಂಚದ ಭೇದವು ತಪ್ಪಿ
ಮಂತ್ರ ಭಿನ್ನವಾಗಿ ನುಡಿವರೆ ಅಜಗಣ್ಣಾ ?[೫]

ಅಂತರಂಗ ಬಹಿರಂಗದ ಅಧ್ಯಾತ್ಮಿಕವಾದ ಬಾಷೆ, ಘಟ, ಪುಟ, ಅಂತರಂಗದ ಭಾಷೆ ಕಣ್ಣಿನಿಂದ ಅರ್ಥೈಸಲೂ ಸಾಧ್ಯ.ಗಾದೆಯೇ ಹೇಳುವಂತೆ **"ಕಣ್ಣ ಅರಿಯದಿದ್ದರೂ ಕರುಳು ಅರಿಯದೆ"**.ಇಲ್ಲಿ ಸ್ಪಟಿಕ ಅಂದರೆ ಮುಟ್ಟಿದ್ದೆಲ್ಲವೂ ಹೊಳಪಾಗಿ ಮಾರ್ಪಾಡಾಗುವ ಶಕ್ತಿಸಾಮರ್ಥ್ಯವೂ ಸ್ಪಟಿಕಕ್ಕಿದೆ. ಸ್ಪಟಿಕ ಜ್ಯೋತಿಯ ಹಾಗೆ ಅಂತರಂಗದಲ್ಲಿ ಸಂತೈಸುವ ಗುಣಗಳನ್ನು ಹೊಂದಿರಬೇಕೆ ಹೊರತು ಅಂತರಂಗದಲ್ಲಿರಬೇಕಾದ ಭಕ್ತಿ ಸಾಂತ್ವಾನ ಶುದ್ಧಿಯನ್ನು ಬಹಿರಂಗಕ್ಕೆ ತಂದು ತೋರ್ಪಡಿಕೆಯ ಜೀವನ ಎಷ್ಟು ಸಮಂಜಸ. ರಹಸ್ಯವಾದ ಯಂತ್ರದ ಜೋಡಣೆ, ಬಹಿರಂಗಕ್ಕೆ ತಂದು ಬಯಲಾದಿರಿ. ದೇಹ ಎನ್ನುವುದು ಮಲತ್ರಯ ದೂರವಾಗಿ ಸ್ಪಟಿಕವಾದರೆ ಶಿವನ ಪ್ರಜ್ವಲ ಜ್ಯೋತಿ ಘಟಕದಲ್ಲಿಯೂ ಉಜ್ವಲಿಸುತ್ತದೆ.

ತನ್ನಲ್ಲಿ ತಾನು ತದ್ಗತವಾದ ಬಳಿಕ ಬೊಮ್ಮ ಪರಬೊಮ್ಮನೆಂಬುದಿಲ್ಲ. ನೋಡಾ ಇಹ ಪರದ ಬಗೆಗೆ ಅಕ್ಕ ಹೇಳುತ್ತಾ ಸ್ವರ್ಗ ಎನ್ನುವಂತಹುದು ನಮ್ಮ ಅಂತರಂಗದಲ್ಲೆ ಇದೆ ಎಂದು ಹೇಳುತ್ತಾಳೆ.

ಅಲರೊಳಡಗಿದ ಪರಿಮಳದಂತೆ
ಪತಂಗದೊಳಡಗಿದ ಅನಲನಂತೆ
ಶಶಿಯೊಳಡಗಿದ ಷೋಡಶ ಕಳೆಯಂತೆ
ಉಲುಹಡಗಿದ ವಾಯುವಿನಂತೆ
ಸಿಡಿಲೊಳಡಗಿದ ಗಾತ್ರದ ತೇಜದಂತೆ
ಇರಬೇಕಯ್ಯಾ ಯೋಗ ಎನ್ನ ಅಜಗಣ್ಣ ತಂದೆಯಂತೆ[೬].

ಅಜಗಣ್ಣನ ಯೋಗ ಹೂವಿನಲ್ಲಿ ಅಡಗಿರುವ ಸುವಾಸನೆಯಂತೆ ಕಣ್ಣಿಗೆ ಕಂಡರೂ ಪರಿಮಳ ಕಾಣದು ಇಲ್ಲಿ. ಹೂ ಅಜಗಣ್ಣನಾಗಿದ್ದಾನೆ. ಪರಿಮಳ ಭಕ್ತಿರಸವಾಗಿದೆ.ಸೂರ್ಯನಲ್ಲಿ ಅಡಗಿರುವ ಬೆಂಕಿಯಂತೆ. ಸೂರ್ಯ ಕಣ್ಣಿಗೆ ಕಾಣುತ್ತಾನೆ ಅವನಿಂದ ಹೊರಹೊಮ್ಮುವ ತಾಪ ಕಣ್ಣಿಗೆ ಕಾಣದು ಅದೇ ರೀತಿ ಚಂದ್ರನಲ್ಲಿ ಮನೆ ಮಾಡಿರುವ ಹದಿನಾರು ಕಳೆಗಳಂತೆ ಚಂದ್ರ ಕಣ್ಣಿಗೆ ಸೊಂಪಾಗಿ, ತಂಪಾಗಿ ಕಾಣುತ್ತಾನೆ. ಆದರೆ ಆತನಲ್ಲಿ ಅಡಗಿರುವ ಹದಿನಾರು ಕಳೆಗಳು ಕಣ್ಣಿಗೆ ಕಾಣವು.

ವಾಯುವಿನಲ್ಲಿ ಅಡಗಿರುವ ಶಬ್ದದಂತೆ ವಾಯುವಿನ ಸ್ಪರ್ಶಸುಖವನ್ನು ಅನುಭವಿಸಬಹುದು.ಆದರೆ ಅದರ ಮೇಲೂ ಉಲುಹನ್ನು ಕೇಳಲು ಸಾಧ್ಯವಿಲ್ಲ. ಸಿಡಿಲಿನಲ್ಲಿ ಅಡಗಿರುವ ತೇಜಸ್ಸಿನಂತೆ ಸಿಡಿಲ ಮೊಳಗನ್ನು ಕೇಳಬಹುದು.ಆದರೆ ಸುಡುವ ತೇಜಸ್ಸನ್ನು ಕಾಣಲು ಅಸಾಧ್ಯ.ಈ ಎಲ್ಲಾ ಗುಣಗಳನ್ನು ಮೇಳೈಸಿಕೊಂಡಿರುವ ಅಜಗಣ್ಣ ಕಂಡು ಕಾಣದಂತೆ ಆತನಂತಿರಬೇಕು.ಅದು ಆತನ ಯೋಗದ ಪರಿ ಎಂದು.

ಪ್ರತಿಯೊಂದು ವಚನದಲ್ಲಿಯೂ ಮುಕ್ತಾಯಕ್ಕ ಮುಕ್ತಿಯ ಪರಮಾವಧಿಯ **"ಅರಿವಿನ ಮರೆವಿನ"** ಅಂತರಂಗ ಬಹಿರಂಗ ಭಕ್ತಿಯ ವಚನಗಳನ್ನು ಪ್ರಸ್ತಾಪಿಸುತ್ತಾ ತನ್ನ ನಿಜವಾದ ತಂದೆ ಇದ್ದಿದ್ದರೆ ಆ ಸ್ಥಾನ ಕೊಡುತ್ತಿದ್ದನು ಇಲ್ಲವೋ ಆದರೆ

ಅಜಗಣ್ಣ ತನ್ನ ತಂದೆಯ ಸ್ಥಾನವನ್ನು ಅಲಂಕರಿಸಿ **"ಪದ್ಮ ಪತ್ರದ ಜಲಬಿಂದು"**ವಿನಂತೆ.ಅಂದರೆ ತಾವರೆಯ ಮೇಲೆ ಎಷ್ಟೆ ಹನಿಗಳು ನಿಂತರೂ ಅದು ತಾವರೆಗೆ ಹೇಗೆ ಅಂಟಿಕೊಳ್ಳುವುದಿಲ್ಲವೋ ಹಾಗೆಯೇ ಜೀವನಾನುಭವದ ಸಂಪ್ರದಾಯಗಳಿಗೆ ಒಳಗಾಗದೆ ತಂದೆ ಆದ ವಿಶಿಷ್ಟ ಅಂತರಂಗದ ಅರಿವಿನ ಭಕ್ತಿಯನ್ನು ಅಜಗಣ್ಣನಲ್ಲಿ ಕಂಡಿರಿಸಿದ ನಿಜಾಂಶವನ್ನ ಮುಕ್ತಾಯಕ್ಕ ತಂದೆಯಾದ ವಿಶಿಷ್ಟ ವೈವಿಧ್ಯತೆಯಲ್ಲಿ ಅರಹುತ್ತಾಳೆ.

ಮುಕ್ತಾಯಕ್ಕಳ ವಚನಗಳಲ್ಲಿ ಇತರ ವಚನಕಾರರಂತೆಯೇ ಎರಡು ಸಂಯೋಜಿತ, ಪೂರಕ, ಸಾದೃಶ ವಸ್ತುಗಳನ್ನು ಬಳಸುವಲ್ಲಿ ಸಾಮ್ಯತೆಯನ್ನು ಕಾಣಬಹುದು. ಪ್ರತೀ ವಚನದಲ್ಲೂ ಮೂರು–ನಾಲ್ಕು ಸಾದೃಶ ವಸ್ತುಗಳನ್ನು ಬಳಸಿ ಕಡೆಗೆ ಹೀಗಿರಬೇಕೆಂದು ಅಂತಿಮಗೊಳಸಲಾಗುತ್ತದೆ. ಈ ಮೇಲಿನ ವಚನ ಅದಕ್ಕೆ ಉದಾಹರಣೆ

ಗಾಳಿ ಬೀಸುವಾಗ ಅಲ್ಲಿನ ಸುಗಂಧಿತ ಪುಷ್ಪಗಳಿಂದ ಸುವಾಸನೆಯನ್ನು ತನ್ನ ಜೊತೆ ತರುತ್ತದೆ. ಪತಂಗವು ಬೆಂಕಿಯೆಡೆಗೆ ಸಹಜವಾಗಿಯೇ ಆಕರ್ಷಿತವಾಗಿ ಅಲ್ಲಿ ತನ್ನ ಐಕ್ಯತೆಯನ್ನು ಮುಟ್ಟುತ್ತದೆ. ಚಂದ್ರನಲ್ಲಿ ಯೌವ್ವನದ ಕಳೆಕಂಡುಬರುತ್ತದೆ. ಮಾತಿನಲ್ಲಿ ಉಸಿರೂ ಸೇರಿಕೊಂಡಿರುತ್ತದೆ. ಸಿಡಿಲಿನಲ್ಲೂ ಬೃಹತ್ ಗಾತ್ರದ ತೇಜಸ್ಸು ಕಂಡುಬರುತ್ತದೆ. ಅಜಗಣ್ಣ ತಂದೆಯ ಸ್ವಭಾವ (ಯೋಗ)ದಂತೆ ಉಳಿದವರೂ ಇರಬೇಕೆಂದು ಮುಕ್ತಾಯಕ್ತ ಪ್ರತಿಪಾದಿಸುತ್ತಾರೆ.

ಹನ್ನರಡನೆಯ ಶತಮಾನದ ಹೊತ್ತಿಗಾಗಲೆ ದಿಟ–ಸಟೆಯ ಸಂಘರ್ಷದ ಹಿನ್ನಲೆಯಲ್ಲಿ ನಿಜವಾದ ಶಿವಶರಣರ ಮಹಿಮೆ, ಅಂತರಂಗದ ಭಕ್ತಿ ಹೇಗಿರಬೇಕೆಂದು ಹೇಳುತ್ತಾ ಪ್ರತಿಮೆಗಳ ಮೂಲಕ ಮಾನವ ಕುಲಕೋಟಿಗೆ ಉಣಬಡಿಸುತ್ತಾಳೆ.

ನಿರಾಶೆ ಮತ್ತು ಪಾಪಪ್ರಜ್ಞೆ ಸತ್‌ಗುಣ ಭಕ್ತರಲ್ಲಿ ನೋಡಬಹುದು ಆಧ್ಯಾತ್ಮಿಕತೆಯ ಮಹತ್ವದ ಪ್ರಲೋಭನೆ ಇದ್ದುದು ಕಂಡುಬರುತ್ತದೆ. ನಿರಾಶೆ ಮತ್ತು ದುಃಖ ಮುಕ್ತಾಯಕ್ಕಳ ಜೀವನದ ಉದ್ದೇಶವನ್ನು ನಿಶ್ಚಯಿಸುವಲ್ಲಿ ಬಹು ಮಹತ್ವದ ಪಾತ್ರ ವಹಿಸಿದ್ದಾವೆಂದು ಈ ಕೆಳಗಿನ ವಚನದಲ್ಲಿ ಕಾಣಬಹುದು.

ಆರು ಇಲ್ಲದವಳೆಂದು ಆಳಿಗೊಳಲುಬೇಡ
ಆಳಿಗೊಂಡಡೆ ಆನು ಅಂಜುವಳಲ್ಲ
ಒಲವಿನ ಒತ್ತೆಕಲ್ಲನು ಬೆವರಿಸಬಲ್ಲೆ ಕಾಣಿರೂ!
ಅಪ್ಪಿದವರನಪ್ಪಿದಡೆ ತರಗೆಲೆಯಂತೆ
ರಸವನರಸಿದಡುಂಟೆ ಅಜಗಣ್ಣ ತಂದೆ ?[2]

ಮೇಲಿನ ವಚನದಲ್ಲಿ ಸ್ತ್ರೀ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯದ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತೀಕವಾಗಿ ತನ್ನ ದಿಟ್ಟ ನಿಲುವನ್ನು ವ್ಯಕ್ತಪಡಿಸಿದ್ದಾಳೆ.

ತನ್ನನ್ನು ಯಾರು ಇಲ್ಲವೆಂದು ತಿಳಿದು ತಿರಸ್ಕೃತ ಭಾವನೆಯಿಂದ ಕಾಣಬಾರದು, ತಿರಸ್ಕರಿಸಿ ಹಿಂಸಿಸಿದರೆ ನಾನು ಅಂಜುವವಳಲ್ಲ ಎನ್ನುತ್ತಾಳೆ. ಇದರಿಂದ ಮುಕ್ತಾಯಕ್ಕಳಿಗೆ ರಕ್ತಸಂಬಂಧಿಗಳು ಇದ್ದಂತೆ ಕಂಡುಬರದು. ಇದರಿಂದಾಗಿ ಅವಳ ಮನಸ್ಸಿನ ಯಾವುದೂ ಒಂದು ಮೂಲೆಯಲ್ಲಿ ನಾನೊಬ್ಬ ದುಃಖತಪ್ತ ಹೆಣ್ಣೆಂದು ತನ್ನ ವಚನಗಳ ಮೂಲಕ ನಿವೇದಿಸುತ್ತಾಳೆ.ಯಾರು ಸಂಬಂಧಿಗಳಿಲ್ಲದಿದ್ದಾಗ, ಮನುಷ್ಯನಿಗೆ ಅನಾಥ ಪ್ರಜ್ಞೆ ಕಾಡುತ್ತದೆ.ಅನಾಥ ಮಕ್ಕಳಿಗೆ ಶಿವ–ಪಾರ್ವತಿ ನಿಜವಾದ ತಂದೆ ತಾಯಿಗಳಂತೆ ಹಾಗೆ ಅಕ್ಕಳು ಭಾವಿಸುತ್ತಾ, ಬದುಕುತ್ತಾಳೆ.

ಮುಕ್ತಾಯಕ್ಕಳ ವಚನದಿಂದ ಅವಳಿಗೆ ದೊರೆತ ಸಮಾಜದ ವರ್ತನೆಯಿಂದ ನೋವಾಗಿರಬಹುದು ಇದನ್ನೇ ಅವಳ ಈ ಕೆಳಗಿನ ವಾಕ್ಯ **"ಆಳಿಗೊಂಡಡೆ ಆನು**

ಅಂಜುವವಳಲ್ಲ."ಅಂದರೆ ಇತರರು ಅವಳಿಗೆ ಹೀಯಾಳಿಸಿದರೂ ಕೂಡ ಅದನ್ನು ಧೈರ್ಯದಿಂದ ಎದುರಿಸುತ್ತೇನೆಂದು ಹೇಳುತ್ತಾಳೆ.

ಸಮಾಜದಲ್ಲಿ ಇತರರು ಅವಳನ್ನು ಹೀಯಾಳಿಸುವುದಕ್ಕೆ ಕಾರಣ ಏನೇ ಇದ್ದರೂ ಬಸವಣ್ಣನವರ ತತ್ವ ಮತ್ತು ಸಾಮಾಜಿಕ ಕ್ರಾಂತಿಯಿಂದಾಗಿ ಮುಂದೆ ಈ ಪರಿಸ್ಥಿತಿ ಬದಲಾಗಿ ಮುಕ್ತಾಯಕ್ಕಳ ಸಹಿತ ಅನೇಕ ಶಿವಶರಣೆಯರು ಸಮಾಜದಲ್ಲಿ ಉನ್ನತ ಸ್ಥಾನ ಪಡೆದು ಹೇಳುತ್ತಾ ಸ್ತ್ರೀಯರ ಮೇಲಿನ ದೌರ್ಜನ್ಯವನ್ನು ಖಂಡಿಸುತ್ತಾ ಒಲವಿನ ಒತ್ತೆಕಲ್ಲನ್ನು ಬೆವರಿಸಬಲ್ಲೆ ಕಾಣಿರೋ ಅಪ್ಪಿದವರನ್ನಪ್ಪಿದಡೆ ತರಗೆಲೆಯಂತೆ ರಸವನರಸಿದಡುಂಟೆ ಅಜಗಣ್ಣ ತಂದೆ?

ಇಲ್ಲಿ ವಿಶೇಷವಾಗಿ ಅಮಾಯಕ ಸ್ತ್ರೀಯರನ್ನು ದುರ್ವ್ಯವಹಾರದಲ್ಲಿ ತೊಡಗಿಸಲಿಕ್ಕೆ ಆಮಿಷಗಳನ್ನು ಒಡ್ಡುವ ಪುರುಷರನ್ನು ಕಂಡು ಸಿಡಿದೆದ್ದು ಹೇಳುತ್ತಾಳೆ.ಸಮಾಜದಲ್ಲಿ ಮಾತೆ, ತಂಗಿ, ಅಕ್ಕ, ಹೆಂಡತಿ, ವಿವಿಧ ಪವಿತ್ರ ಬಂಧಗಳಲ್ಲಿ ತನ್ನ ಸ್ಥಾನ ನಿರ್ವಹಿಸುವವವಳನ್ನು ದುರ್ಭಾವದಿಂದ ಅಪ್ಪಿಕೊಳ್ಳುವ ವರ್ತನೆಯನ್ನು ಧಿಕ್ಕರಿಸಬೇಕು.ಇದನ್ನ ಮೀರಿ ಯಾರಾದರೂ ಸ್ತ್ರೀಗೆ ಆಮಿಷ ಕೋರಿದರೆ ಅವರಿಗೆ ಬೆವರು ಬಿಡಿಸುವ ಶಿಕ್ಷೆ ಕೊಡಬೇಕೆಂದು ಹೇಳುತ್ತಾಳೆ.

ನುಡಿಯಲು ಬಾರದು ಕೆಟ್ಟ ನುಡಿಗಳ
ನಡೆಯಲು ಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದವ್ರತ ಬಿಡದಿರಲು ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ[೮].

ನಡೆ-ನುಡಿಯ ವಿಚಾರದಲಿ ಬಸವಣ್ಣನವರು ಮುತ್ತಿನಹಾರ ಮಾಣಿಕ್ಯದ ದೀಪ್ತಿ ಲಿಂಗ ಮೆಚ್ಚಬೇಕು ಎಂದೆಲ್ಲಾ ಉದಾಹರಿಸಿದರೆ ಅಕ್ಕಳು ಜಿಹ್ವಾಲಂದ್ರಂಗದಲ್ಲಿ

ನಮ್ಮ ವ್ಯಕ್ತಿತ್ವ ಮೂರ್ತಗೊಳ್ಳುತ್ತವೆ. ಹಾಗಾಗಿ ಆ ಜಿಹ್ವಾಲ ಮಾತನಾಡುವ ಮೊದಲು ಆಲೋಚನೆಗಿಯ್ದು ಒಳಿತನ್ನು ಮಾತನಾಡಬೇಕು.ಎನ್ನುವುದು ಅಕ್ಕಳ ಆಶಯ ಹಾಗೆ ವರ್ತನೆಯು ಹಾಗೆ ನಮ್ಮ ವ್ಯಕ್ತಿತ್ವದ ಬುನಾದಿಯಾಗಿದೆ.ವಚನ ಪರಿಭಾಷೆಯಲ್ಲಿ ನಡೆ–ನುಡಿ ಜೀವನದ ಅವಿಭಾಜ್ಯ ಅಂಗಗಳ ಒಂದೇ ನಾಣ್ಯದ ಎರಡು ಮುಖಗಳಂತೆ. ನಾವು ಬದುಕಿನಲ್ಲಿ ಒಂದು ವ್ರತವನ್ನು ಕೈಗೊಳ್ಳಬೇಕು.ಆ ವ್ರತವೆಂದರೆ ಪ್ರತಿವಾರ ದೇವರಿಗೆ ವೈವಿದ್ಯ ಮಾಡುವಂತಹ ವ್ರತವಲ್ಲ. ನಾನೆಂದು ಕೆಟ್ಟ ನಡೆ–ನುಡಿಯಲ್ಲಿ ಬಾಳಿಸಲಾಗದು ಎನ್ನುವಂತಹ ವ್ರತ ಆ ವ್ರತದಿಂದ ಮಹಾಜ್ಞಾನವನ್ನು ಆಚರಣೆಯಿಂದ ಪಡೆಯುವುದು.

ಮುಕ್ತಾಯಕ್ಕ ನಡೆ–ನುಡಿಗಳಲ್ಲಿ ಕೆಟ್ಟತನವಿರಬಾರದೆಂದು ಪ್ರತಿಪಾದಿಸಿದ್ದಾಳೆ. ನಡೆಯದಿದ್ದರೂ ನುಡಿಯದಿದ್ದರೂ ಜೀವನದಲ್ಲಿ ಪ್ರತಿಪಾದಿಸಿದ ವ್ರತಗಳನ್ನು ಎಂದೂ ಬಿಡಬಾರದು.ಅದೇ ಮಹಾಜ್ಞಾನದ ಆಚರಣೆಯಾಗುತ್ತದೆ ಎಂದು ನಡೆ–ನುಡಿಗಳ ಮಹತ್ವ ಮತ್ತು ವ್ರತಗಳ ಮಹತ್ವವನ್ನು ಸಾರಿ ಹೇಳಿದ್ದಾಳೆ.

ಕೆಟ್ಟ ನುಡಿ, ಕೆಟ್ಟ ನಡೆಯನ್ನ ಮೀರಬೇಕೆಂಬ ಆಶಯವೇ ಒಂದು ತಪಸ್ಸು! ಅದೇ ಹಿಡಿದ ವ್ರತ.ಅಂದರೆ, ನಡೆ–ನುಡಿ ಅಂತರಂಗ ಬಹಿರಂಗ ಪಾರದರ್ಶಕದಂತೆ ಒಂದೇ ಆಗಿರಬೇಕೆಂಬ ಆಚರಣೆಯೇ ಮಹಾಜ್ಞಾನ. ಅಂದರೆ, ಕೇವಲ ನುಡಿದಡೇನು? ನುಡಿಯದಿರ್ದಡೇನು? ಎಂದು ಪ್ರಶ್ನೆ ಹಾಕಿಕೊಳ್ಳದೆ, ಅದಕ್ಕೆ ಉತ್ತರವಾಗಿ ಕೆಟ್ಟ ನುಡಿ, ಕೆಟ್ಟ ನಡೆಯನ್ನ ಆಚರಣೆಗೆ ತರುವುದಿಲ್ಲವೆಂಬ ವ್ರತವನ್ನೇ ಶ್ರದ್ಧೆಯಿಂದ ದಿನೇ–ದಿನೇ ಆಚರಿಸಿದಾಗ ಮಾತ್ರವೇ ಅದು "ಮಹಾಜ್ಞಾನದ ವ್ಯಕ್ತಿತ್ವ ಯೋಗಿಯ ಸಾಧನೆ"ಯಾಗುತ್ತದೆ ಎಂದು ಮುಕ್ತಾಯಕ್ಕ "ಆಚರಣೆ"ಯೊಂದು ವ್ರತ ಅದೇ ತಪಸ್ಸು, ಅಲ್ಲಿ ಸಾಧಕರಾಗುವುದು ಕೇವಲ ಆಚರಣೆಯಿಂದ ಎಂದು ಧ್ವನಿಸಿದ್ದಾಳೆ.

ಅಡಿ ಟಿಪ್ಪಣಿ

1) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 330, ವಚನಸಂಖ್ಯೆ: 1114.
2) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 325, ವಚನಸಂಖ್ಯೆ: 1099.
3) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 325, ವಚನಸಂಖ್ಯೆ: 1097.
4) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 333, ವಚನಸಂಖ್ಯೆ: 1124.
5) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 334, ವಚನಸಂಖ್ಯೆ: 1132.
6) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 325, ವಚನಸಂಖ್ಯೆ: 1110.

7) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 326, ವಚನಸಂಖ್ಯೆ: 1103.

8) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 332, ವಚನಸಂಖ್ಯೆ: 1122.

ಮುಕ್ತಾಯಕ್ಕಳ ವಚನಗಳಲ್ಲಿ ವೈಚಾರಿಕ ಪ್ರಜ್ಞೆ

ಅಧ್ಯಾಯ – ೪

ಮುಕ್ತಾಯಕ್ಕಳ ವಚನಗಳಲ್ಲಿ ವೈಚಾರಿಕ ಪ್ರಜ್ಞೆ

ಮುಕ್ತಾಯಕ್ಕಳ ವಚನಗಳು ಅಧ್ಯಾತ್ಮಿಕ, ಧಾರ್ಮಿಕ, ಕಾವ್ಯಾತ್ಮಕ, ಮನೋವಿಶ್ಲೇಷಣಾತ್ಮಕ, ಶೈಕ್ಷಣಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಮೂಹಿಕ, ಅನುಭಾವಿಕ, ಮಾನವಿಕ ಎಂದು ವಿವಿಧತೆಯಲ್ಲಿ ಐಕ್ಯತಾಭಾವ ಕಂಡುಬರುತ್ತದೆ. ಹಾಗೆಯೇ ಐಕ್ಯತಾಭಾವನೆಯಿಂದ ವಿವಿಧತೆಯ ಕುರುಹುಗಳು ಕಂಡುಬರುತ್ತವೆ.

ಮುಕ್ತಾಯಕ್ಕಳ ವಚನಗಳಲ್ಲಿ ವೈಚಾರಿಕವಾಗಿ ಅಧ್ಯಯನ ಮಾಡಲು ಅವಳ ಎಲ್ಲಾ ಆಯ್ದ ವಚನಗಳಿಂದ ವಿಚಾರ ಸಾಹಿತ್ಯವಾಗಿ ನಾವು ನೋಡಬಯಸುತ್ತೇನೆ.

ಮುಕ್ತಾಯಕ್ಕಳ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದಾಗ ಅವಳು ಪಡೆದ ಅಧ್ಯಾತ್ಮಿಕ ಉನ್ನತಿ, ಅವಳಿಗಾದ ಸತ್ಯದ ದರ್ಶನ, ಅವಳಿಂದ ಸಮಾಜಕ್ಕಾದ ಮಾರ್ಗದರ್ಶನ ಪ್ರಮುಖವಾಗಿ ಕಂಡುಬರುತ್ತದೆ.ಅವಳನ್ನು ವೈಚಾರಿಕ ಹಾಗೂ ಅಧ್ಯಾತ್ಮಿಕ ದೃಷ್ಟಿಕೋನಗಳಲ್ಲಿ ಅವಲೋಕಿಸಿದಾಗ ದೃಷ್ಟಾಂತಗಳು ಪುರಾವೆಗಳು ಸಿಗುತ್ತವೆ.

ಇಲ್ಲಿಯವರೆವಿಗೆ ಮೂವತ್ತೇಳು ವಚನಗಳು ಮಾತ್ರ ದೊರಕಿವೆ. ಇಲ್ಲಿ ಅಧ್ಯಾತ್ಮಿಕ, ನೈತಿಕ ಸತ್ವದೊಂದಿಗಿನ ಸಂಯೋಗಾತ್ಮಕ, ಇಂದ್ರಿಯಾತೀತ ವಚನಗಳನ್ನು ಕಾಣಬಹುದು.

ಮುಕ್ತಾಯಕ್ಕಳೂ ಎಲ್ಲ ವಚನಕಾರ್ತಿಯರಂತಲ್ಲ. ಆಕೆಯ ಆಲೋಚನಾ ವಿಧಾನವೇ ವಿಭಿನ್ನ ರೀತಿಯದು.ಗುರು–ಲಿಂಗ– ಜಂಗಮರನ್ನು ಕುರಿತು

ಚರ್ಚಿಸುತ್ತಾಳೆ. ಭಕ್ತಿ-ಮಾತು ಮೌನದ ಬಗೆಗೆ ವಿಚಾರ ಮಾಡುತ್ತಾಳೆ.ಗುಪ್ತಭಕ್ತಿ ಶರಣರ ಆಚಾರ ವಿಚಾರಗಳು ಮಂಥನ ನಡೆಸುತ್ತಾಳೆ.ಸಾಕಾರ, ನಿರಾಕಾರಗಳ ಸಮನ್ವಯ ಸಮರಸ್ಯಗಳನ್ನು ಸುವಾದಕ್ಕೆ ಒಳಪಡಿಸುತ್ತಾಳೆ.ಸಿದ್ಧಿ ಸಾಧನೆಗಳನ್ನು ಪ್ರತಿಕ್ರಿಯಿಸುತ್ತಾಳೆ. ಜ್ಞಾನ ಅರಿವು ಆಳಗಳನ್ನು ಒರೆ ಹಚ್ಚುತ್ತಾಳೆ. ಗುರುವಿನ ಮಹಿಮೆಯನ್ನು ನಿರೂಪಿಸುತ್ತಾಳೆ. ಲೌಕಿಕ-ಅಲೌಕಿಕ ಬದುಕಿನ ತಾರತಮ್ಯವನ್ನು ಮಾಡಿಸುತ್ತಾ ಎಲ್ಲಾ ವಿಚಾರದಾರೆಗೂ ಅವಳ ಮುಂದೆ ಪ್ರಭಲವಾಗಿ ನಿಂತ ಮೂರ್ತಿ ಎಂದರೆ ಆಧ್ಯಾತ್ಮ ಮಾರ್ಗದರ್ಶಿತ ಗುರುವಾದ ತನ್ನ ಅಣ್ಣ ಅಜಗಣ್ಣನೆ.

ಅಲರೊಳಡಗಿದ ಪರಿಮಳದಂತೆ
ಪತಂಗದೊಳಡಗಿದ ಅನಲನಂತೆ
ಶಶಿಯೊಳಡಗಿದ ಷೋಡಶ ಕಳೆಯಂತೆ
ಉಲುಹಡಗಿದ ವಾಯುವಿನಂತೆ
ಸಿಡಿಲೊಳಡಗಿದ ಗಾತ್ರದ ತೇಜದಂತೆ
ಇರಬೇಕಯ್ಯಾ ಯೋಗ ಎನ್ನ
ಅಜಗಣ್ಣ ತಂದೆಯಂತೆ[೧].

ಈ ವಚನದಲ್ಲಿ ಮುಕ್ತಾಯಕ್ಕ ಪ್ರಪಂಚದ ಬಗೆಗಿನ ವೈಚಾರಿಕ ನಿಲುವುಗಳಿಗೆ ಸೂಚಿಸುತ್ತಾಳೆ. ಅಲರ, ಪತಂಗ, ಶಶಿ, ಸಿಡಿಲು, ಇವು ವಿಶ್ವದ ಭೌತದ್ರವ್ಯ ರೂಪವನ್ನು ಸೂಚಿಸಿದರೆ ಅನುಕ್ರಮವಾಗಿ ಪರಿಮಳ, ಅನಲ ಷೋಡಶಕಳೆ, ಗಾತ್ರತೇಜ ಇವು ಅದರ ಹೊರಗಿನ ಸ್ವರೂಪ ಛಾಯೆಯನ್ನು, ತತ್ವವನ್ನು ದರ್ಶಿಸುತ್ತವೆ. ಮನುಷ್ಯನ ಅಧ್ಯಾತ್ಮಿಕ ವಿಚಾರದಲ್ಲಿ ಈ ಎರಡೂ ಪರಿತ್ರಯಗಳೂ ಅಂತಃ ಸ್ಫೂರ್ತಿಯ ಏಕೋಭಾವವನ್ನು ಪ್ರಸ್ತಾಪಿಸುವ ನಿಜ ಸತ್ಯದ ಅನುಭವದ ನಿಲುವುದಾಗಿವೆ. ಇದರಿಂದಾಗಿ ಮುಕ್ತಾಯಕ್ಕಳ ವಿಶ್ವದ ಬಗೆಗಿನ ವೈಚಾರಿಕ ಅಂಶಗಳ

ಆಳ-ಅಗಲ, ಕಂಡುಬರುತ್ತದೆ. ಇದರ ಜೊತೆಯಲ್ಲಿಯೇ ಅವರಿಗಾದ ಅಮಳೋಕ್ಯವಾದ ಅಪರಿಮಿತ ಅನುಭಾವವನ್ನು ಪಡೆಯುವುದಾಗಿರುತ್ತದೆ.

> **ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋರುವ ಪರಿಯ ನೋಡಾ ಅವ್ವಾ**
> **ಬಣ್ಣವಿಲ್ಲದ ಬಣ್ಣವನ್ನುಟ್ಟು ಸುಳಿದನು**
> **ಈ ಅಜಗಣ್ಣನ ಯೋಗಕ್ಕೆ ಬೆರಗಾದೆನವ್ವಾ**
> **ಈ ಅರಿವೆಂತುಟೆಲ್ಲವನೊಳಗಿಟ್ಟು ಕೊಂಡೆನು**
> **ಶಿವಗಣ ಸಂಚ ಶಿವಯೋಗಿ ಅಜಗಣ್ಣದೇವರು**[೨].

ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋರುವ ಪರಿಯ ನೋಡಾ ಎನ್ನುವಲ್ಲಿ ಮುಕ್ತಾಯಕ್ಕ ಪಂಚೇಂದ್ರಿಗಳಿಂದಾಗುವ ಪರಿಜ್ಞಾನದ ಮೂಲವನ್ನು ಅರಿತು, ಜ್ಞಾನೇದ್ರಿಯಗಳನ್ನು ಪಡೆದು, ಸ್ಥೂಲ ಶರೀರದ ಉಚ್ವಾಸ-ನಿಚ್ವಾಸ ಗಳ ಮೂಲಕ ಆಗುವ ಬದಲಾವಣೆಗಳು ಮನುಷ್ಯನ ಮೆದುಳಿನಲ್ಲಿಯ ಗ್ರಹಣ ಶಕ್ತಿಯ ಕಾರ್ಯದಿಂದ ಸಂವೇಧನೆಗೆ ಒಳಗಾಗುತ್ತವೆ. ಈ ಸಂವೇದನೆಗಳು ಮನಸ್ಸಿನ ಕಾರ್ಯದಿಂದಾಗಿ ಅನುಭವಜನ್ಯವಾಗಿ ಪರಿವರ್ತನೆಯಾಗುತ್ತವೆ.

ಕಣ್ಣ ಮೊದಲ ನೋಟದಲ್ಲೆ ನಾನಾ ರೀತಿಯ ಬಣ್ಣಗಳಲ್ಲಿ ಮೈತಾಳಿವೆ. ಹೊರನೋಟದ ವಸ್ತುವೆ ನಮ್ಮನ್ನು ನಾನಾ ರೀತಿಯ ಪ್ರಲೋಭನೆಗಳಿಗೆ ಆಹ್ವಾನವಿಕ್ಕುತ್ತದೆ.ಆದರೆ ಇಂದ್ರಿಯ ಮೆದುಳಿನಲ್ಲಿರುವ ಕೇಂದ್ರ.ಇವು ಮನಸ್ಸಿನ ಸಂವಾದವಿಲ್ಲದಿದ್ದರೆ ಯಾವುದೇ ಸಂವೇದನೆ ಅನುಭವಕ್ಕೆ ಬರಲಾರದು.ಈ ಇಂದ್ರಿಯ ಜನ್ಯ ಅನುಭವ ಜ್ಞಾನವಾಗಬೇಕಾದರೆ ಅದಕ್ಕೆ ಮನಸ್ಸಿನ ಪ್ರತಿಕ್ರಿಯೆ ಬೇಕು ಈ ಅನುಭವಗಳನ್ನು ಮನಸ್ಸಿನ ಪ್ರತಿಕ್ರಿಯೆಗಳಿಂದ ಅನುಭವಿಸಿ ಅವುಗಳನ್ನು ಸ್ವಯಂ ಪ್ರಜ್ಞೆಯಿಂದ ಪ್ರಮಾಣಿಸಬೇಕಾಗುತ್ತದೆ.ಆಗ ಮಾತ್ರ ಸ್ಥೂಲ ಶರೀರದಿಂದ ಬರುವ ಸಂವೇಧನೆಗಳು ಜ್ಞಾನವಾಗುವುವು.

ಇಂದ್ರಿಯಗಳು ಒಳಹೊರಗಾಗುವ ಬದಲಾವಣೆಗಳ ಅಚ್ಚನ್ನು ಮನಸ್ಸಿಗೆ ತಲುಪಿಸುತ್ತವೆ. ಮನಸ್ಸು ಜ್ಞಾನಕ್ಕೆ ತಲುಪಿಸುತ್ತದೆ.ಜ್ಞಾನ ಈ ಅಚ್ಚುಗಳನ್ನು ಕನ್ನಡಿಯಂತೆ ಪ್ರತಿಬಿಂಬಿಸುತ್ತದೆ. ಈ ಬಿಂಬಗಳ ಹಿಂದೆ ಒಂದು ಸ್ವಯಂ ಪ್ರಕಾಶ ಹೊಂದಿದ ಆತ್ಮವಿದೆ.ಆತ್ಮ ಪ್ರತಿಬಿಂಬಗಳನ್ನು ಪರಿಶೀಲಿಸಿ ಸೂಕ್ತ ಪ್ರತಿಕ್ರಿಯೆಯನ್ನು ಕೊಡುತ್ತದೆ.

ಕೇವಲ ಕಣ್ಣಿನಿಂದ ನೋಡಿದರೆ ಅದು ಕಂಡ ದೃಷ್ಯ ದೃಷ್ಯವಾಗಲಾರದು. ಅದನ್ನು ಪರಿಶೀಲಿಸುವ ಸ್ವಯಂ ಪ್ರಜ್ಞೆಯುಕ್ತ ಆತ್ಮ ಇರಬೇಕಾಗುತ್ತದೆ. ಈ ಆತ್ಮ ಸ್ವಯಂ ಪ್ರಕಾಶದ ಗುಣಗಳನ್ನು ಹೊಂದಿರಬೇಕು.ಈ ಆತ್ಮ ಮತ್ತುಶರೀರ ಸಂಬಂಧ ಸಂವೇದನೆ ಮತ್ತು ಜ್ಞಾನದ ಸಂಬಂಧವನ್ನರಿವುದು ಮುಕ್ತಾಯಕ್ಕ ಆಶ್ಚರ್ಯಗೊಂಡಿದ್ದಾಳೆ.

ಬಣ್ಣವಿಲ್ಲದ ಬಣ್ಣವನ್ನುಟ್ಟು ಸುಳಿದು ಎನ್ನುವಲ್ಲಿ ಆತ್ಮ ಬಣ್ಣ ರಹಿತವಾಗಿದ್ದು ಕಣ್ಣಿನಿಂದ ಪಡೆದ ದೃಶ್ಯದಲ್ಲಿ ಬಣ್ಣವನ್ನ ಕಾಣುತ್ತದೆ.ಇದೊಂದು ವೈಜ್ಞಾನಿಕ ಸತ್ಯವೂ ಹೌದು.ಇದರಿಂದಾಗಿ ಮುಕ್ತಾಯಕ್ಕಳ ವೈಚಾರಿಕ ದೃಷ್ಟಿಕೋನವು ಮನುಷ್ಯನ ಪ್ರಗತಿಯಲ್ಲಿ ಮನಸ್ಸಿನ ಮಹತ್ವವೂ ಅರಿತಿದ್ದಳು.

ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು
ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು.
ನಾನೆಂತು ಬದುಕುವೆನಣ್ಣಾ?
ಕತ್ತಲೆಯ ಬೆಳಗ ಕಾಂಬ ಸಂದೇಹಿ ನಾನೊಬ್ಬಳು.
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೊ ಅಜಗಣ್ಣಾ ನಿನ್ನ ಯೋಗ ! [೩]

ಅರಿವಿನ ಜನ್ಮಕ್ಕೆ ಬಂದುದು ಈ ಮಾನವಕುಲ.ಇದು ಬೆಲೆಯಲ್ಲದ ಜೀವರತ್ನವಾಗಿದ್ದು ಭಾವರತ್ನ ಆಗಿದೆ.ಅರಿವು ಎಂಬ ಅರಿವಿಲ್ಲ ಈ ಕುಲಕೋಟಿಗೆ

ಎನ್ನುವಲ್ಲಿ ಭೌತಿಕ, ಜ್ಞಾನ ಅಂತರಾತ್ಮಜ್ಞಾನದಿಂದ ಮಾತ್ರ.ಅರಿವು ಕೆಲಬರಿಗೆ ನಿಲುಕುತ್ತದೆ.ಆ ಅರಿವು ವಿಶ್ವದಾದ್ಯಂತ ಕೋಟ್ಯಂತರ ಅರಿವಿನಲ್ಲಲ್ಲದೆ ಅಸ್ತಿತ್ವಕ್ಕೆ ಸಿಗುತ್ತಿಲ್ಲ. ಇರವೂ ಇದ್ದರೂ ಅರಿವು ಅದನ್ನ ಅರಿಯದೆ ಇದ್ದ ಇವರೆಲ್ಲ ಇಲ್ಲದಂತೆಯೇ ಇದೆ.

ಮತ್ತೆ ಈ ಇರವು ನಿತ್ಯ ಸಂಗಾತಿ ಯಾದ ಅರಿವು ಉಳಿಯಲು ಅರಿಯದೆ ಲೋಕವೆಲ್ಲವೂ ಕೆಟ್ಟು ಹೋಗಿದೆ.ಸ್ವಯಂ ಕ್ರಾಂತಿಯ ಅರಿವು ಜ್ಞಾನರತ್ನ ಇಂದ್ರಿಯ ಕರಣ ಭಾವದಲ್ಲಿ ಸರ್ವಾಂಗಲಿಂಗನವಾಗಿ ಧರಿಸದೆ ಅಂಥ ಕಾಂತಿಯನ್ನು ದವಡೆಯಲ್ಲಿಕ್ಕಿ ಕಡಿದು ಮೂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಹಾಗೆ ಅರಿವನ್ನ ಈಡಾಡುತ್ತಿದೆ. ಮಾನವಲೋಕ ಮನಸ್ಸು ಮನುಜಾಲವಾಗಿದ್ದು ಮನಸ್ಸು ಇದ್ದು ಅರಿವು ಉಳಿಯದೆ ಕೆಟ್ಟಿದೆಯಾ ತನ್ನ ಅಣ್ಣ ಮುಗುದನಾಗಿದ್ದು ಅಂತರಂಗದಲ್ಲಿ ಶಿವನ ಭಕ್ತಿಯನ್ನು ಕೊಂಡಾಡುತ್ತಿದ್ದವನು ಮನದ ಕುರುಡಿಗೆ ಅರಿವಿನ ಕಾಂತಿಯು ಕತ್ತಲೆಯಾಗಿದ್ದು ಈ ಅಂಧಕಾರ ಮೂರು ಲೋಕದೊಳಗೆ ಸಂಚರಿಸುತ್ತಿದ್ದ ಮನುಷ್ಯ ಲೋಕವೆಂಬುದು ಸ್ವಯಂ ಪ್ರಕಾಶನದ ಸ್ವರಾಜ್ಯವಿಲ್ಲ ಇಂತಹ ಸಾವಿನ ಭೂಮಿಯಲ್ಲಿ ಬದುಕುವುದೆಂತು?ಅಜಗಣ್ಣನ ಯೋಗ ನಿಜಕ್ಕೂ ಬಹಿರ್ಮುಖ ಇಂದ್ರಿಯದ ಹೊರ ಗುಂಡಿಯನ್ನು ಮುಚ್ಚಿ ನಿಜವಾದ ಸ್ವಯಂ ಜ್ಞಾನ ಕಾಂತಿಯ ಕನ್ನಡಿಯಾಗಿತ್ತು.ಅಂತೆಯೇ ಒಳಗೆ ನೋಡಿದರೆ ಬೆಳಗು, ಹೊರಗೆ ನೋಡಿದರೆ ಕತ್ತಲು ಇಲ್ಲಿ ಅಂತರಂಗ ಮತ್ತು ಬಹಿರಂಗದ ಅರಿವುಗಳು ನಮ್ಮ ಜ್ಞಾನ ಶಕ್ತಿಯನ್ನು ಹೇಗೆ ಬಳಸಿಕೊಳ್ಳುತ್ತವೆ ಎಂಬುದನ್ನು ಕಾಣಬಹುದು.

ಸ್ಪಟಿಕ ಪ್ರಜ್ವಲಜ್ಯೋತಿ ಘಟದೊಳಗೆ ತೋರುತ್ತಿರೆ
ದಿಟಪುಟವನತಿಗಳೆದು ಸಟೆಯ ಬಳಸುವರೇ ?
ಅಂತರಂಗದ ಸುದ್ಧಿಯ ಬಹಿರಂಗಕ್ಕೆ ತಂದು
ಸಂತೈಸಲರಿಯದೆ ಮರುಳಾದಿರಣ್ಣಾ !
ಜಂತ್ರದ ಕೀಲು ಕೂಟದ ಸಂಚದ ಭೇದವು ತಪ್ಪಿ
ಮಂತ್ರ ಭಿನ್ನವಾಗಿ ನುಡಿದರೆ ಅಜಗಣ್ಣ ?(೪)

ಹಾವು ತನ್ನ ಹೆಡೆಯಲ್ಲಿ ರತ್ನವನ್ನು ಹೇಗೆ ಗೋಪ್ಯವಾಗಿ ಕಾಯ್ದಿರಿಸುತ್ತದೆಯೋ ಹಾಗೆ ಅಜಗಣ್ಣನ ಲಿಂಗ ಪೂಜೆ ಮಂತ್ರ ಧ್ಯಾನ ಭಕ್ತಿಯೋಗ ಹೊರಗೆ ಭವಿಯಾಗಿದ್ದು ಒಳಗೆ ಭಕ್ತ ಹೊರಗೆ ಘಟ, ಒಳಗೆ ಜ್ಯೋತಿ, ಅಜಗಣ್ಣ ಹೊರಗೆ ಲೋಕದ ಮರಳು, ಒಳಗೆ ಲಿಂಗದ ತಿರುಳು. ಈ ಅಂತರ್ಜ್ಯೋತಿಯನ್ನು ಅಜಗಣ್ಣ ಬಲ್ಲ. ಇದರ ಹೊಳಪು ತಂಗಿಗು ಗೊತ್ತು. ಅಜಗಣ್ಣ ತಂಗಿಯ ಯೋಗವನ್ನು ನುಡಿದು ಎಂದೂ ಉಪದೇಶ ಮಾಡಲಿಲ್ಲ ಮುಕ್ತಾಯಕ್ಕ ಎಂದೂ ಕಿವಿತೆರೆದು ಕೇಳಿ ಕಿವಿಯಲ್ಲಿ ಉಪದೇಶ ಪಡೆದಿಲ್ಲ. ಅಂದಕ ಅಣ್ಣನ ಉಪದೇಶ ಮೂಗ ಹಾಡಿದ ಮಹಾಕಾವ್ಯ, ತಂಗಿ ಕಂಡುಕೊಂಡದು ಅಂತಘೋಷದ ಮಹಾದ್ವನಿ ದರ್ಪಣದೊಳಗೆ ಮೂಡಿದ ಸೂರ್ಯನ ಪ್ರತಿಬಿಂಬ ದರ್ಪಣವಿಲ್ಲದೆಯೆ ಹೇಗೆ ತನ್ನಲ್ಲಿಯೆ ಅಡಗಿನ ಪ್ರತಿಬಿಂಬದಂತೆ ಸೇರುತ್ತದೆಯೋ ಹಾಗೆ. ಈ ಪಡಿ ನೆಳಲನ್ನು ಹಿಡಿಯುವ ತೊಗಲಿನ ಕೈಯಿಂದಲ್ಲ ಲೋಕದ ಕೈ ಮುಟ್ಟಬಾರದ ಈ ಬಿಂಬ ಮುಕ್ತಾಯಕ್ಕಳ ಅರಿವಿನ ಹಸ್ತಕ್ಕೆ ನಿಲುಕಿತ್ತು.ಆದರೆ ಶಿವಮಂತ್ರವನ್ನು ಪ್ರಕಟವಾಗಿರಿಸಿ ಅಜಗಣ್ಣನ ಮಂತ್ರ ಸ್ವರೂಪ ಭಿನ್ನವಾಯ್ತು ಆ ಸ್ವರೂಪದೊಡನೆ ಆತನ ಮಾತ್ರ ಕರಂಡಕವಾದ ಘಟವೂ ಒಡೆದುಹೋಯ್ತು ಇನ್ನು ತನಗೆ ಇನ್ನಾರು ಗತಿ.

ಮೃತ್ತಿಕೆಯ ಘಟ ತನ್ನೊಳಗೆ ದೀಪವನ್ನು ಮುಚ್ಚಿಟ್ಟುಕೊಳ್ಳಬಹುದು ಆದರೆ ಅಂತರ್ದೀಪ್ತಿಯ ನಿತ್ಯ ಪ್ರತಿಭೆಯಿಂದ ಆ ಮೃತ್ತಿಕೆಯ ಘಟ ಸ್ಪಟಿಕವಾದರೆ?ಆ ದಿವ್ಯ ದೀಪ್ತಿ ಸ್ಪಟಿಕವನ್ನು ಬೇಧಿಸಿ ಹೊರಹೊಮ್ಮಿಸಿದೆಯೋ ಅಜಗಣ್ಣಾ! ಅಂತರಂಗದ ಶುದ್ಧಿ ದಿಟಪುಟ, ಸತ್ಯ, ನಿಶ್ಚಯ, ಬಹಿರಂಗದ ಬಳಿಕೆ ಮಾತ್ರ ಹೊರಗೆ ಸಿಡಿಯುವುದು ಎಂದು ಅಜಗಣ್ಣ ಪ್ರವೇಶ ಮಾಡುವ ಸಂದರ್ಭದಲ್ಲಿ ಅಜಗಣ್ಣನ ತಲೆಗೆ ಬಾಗಿಲು ತಾಗಿ ಆತನ ಮಂತ್ರಗೋಪ್ಯ(ಗೌಪ್ಯ) ಓಂ ನಮಃ ಶಿವಾಯ ಎಂದು ಬಾಯಿಂದ ಹೊರ ನಡೆದಿದ್ದು ಶಿವಯೋಗಿಗೆ ಸಲ್ಲದು ಎನ್ನುತ್ತಾಳೆ.

ಅಂತರಂಗದಲ್ಲಿರಬೇಕಾದ ಶುದ್ಧಿಯನ್ನು ಬಹಿರಂಗಕ್ಕೆ ತಂದು ಸಂತೈಸಲರಿಯದೆ ಮರುಳಾದಿರಾ ಎನ್ನವಲ್ಲಿ. ಪ್ರಸ್ತುತ ಸಮಾಜದಲ್ಲಿ ಕಂಡುಬರುವ ಬಾಹ್ಯಾಡಂಬರ ವೈಭವೂಪೇತ ಆಡಂಬರದ ಪೂಜೆ ಪುರಸ್ಕಾರಗಳಿಗೆ ಅಂದಿನ ಹತ್ತನೇ ಸಾಹಿತ್ಯದ ವಚನಕಾರರು ಅದರಲ್ಲೂ ಮುಕ್ತಾಯಕ್ಕಳ ನಿಜವಾದ ಭಕ್ತಿಗೆ ಕನ್ನಡಿ ಹಿಡಿದ್ದಾಳೆ.

ಮಾಣಿಕ್ಯದ ದೀಪ್ತಿಯಂತಿರುವ ಮುಕ್ತಾಯಕ್ಕಳು ಕೆಲವೇ ವಚನಗಳಲ್ಲಿ ಮಹಾ ಅನುಭಾವಿ ಜ್ಞಾನ ಮಿಂಚುತ್ತಿದೆ.ಕಣ್ಣು ಕುಕ್ಕಿಸುವ ಮಿಂಚುವ ಬೆಳಗುವ ಸುಳಿವ ಅಲ್ಲಮ ಪ್ರಭುವನ್ನು ನಿಬ್ಬೆರಗಾಗಿಸುತ್ತದೆ.

ಮುಕ್ತಾಯಕ್ಕ ವಿಕಳಾವಸ್ಥೆ ಪರವಸ್ತುವಿನಲ್ಲಿ ವಿನಿಯೋಗ, ವಿರಹ, ವಿಕಳವಾದ ಅವ್ಯವಸ್ಥೆಯನ್ನು ಸಹಿಸಿಕೊಂಡು ಸಂಯೋಗ, ಸಹಿತ, ಸಕಳಕ್ಕಾಗಿ ರಭಸದಿಂದ ಮುನ್ನುಗ್ಗುತ್ತಾಳೆ.

ತನ್ನ ತಾನರಿದವಂಗೆ ಅರಿವೆ ಗುರು
ಅರಿವರತು ಮರಹು ನಷ್ಟವಾದಲ್ಲಿ
ದುಷ್ಟನಷ್ಟವೇ ಗುರು
ದುಷ್ಟ ನಷ್ಟವೇ ಗುರು ತಾನಾದಲ್ಲಿ, ಮುಟ್ಟಿ ತೋರಿದವರಿಲ್ಲದಡೇನು
ಸಹಜವ ನೆಲೆಗೊಳಿಸುವ ನಿರ್ಣಯ ನಿಷ್ಪತ್ತಿಯೆ ಗುರು ನೋಡಾ,
ಗುರು ತಾನಾದರೂ ಗುರುವಿಡಿದಿರಬೇಕು, ಎನ್ನ ಅಜಗಣ್ಣನಂತೆ[೫].

ತನ್ನೊಳಗೆ ತನ್ನನ್ನು ಕರೆದೊಯ್ಯುವ ಹಾಗೂ ವಿಶ್ವಮುಖವಾದ ಗುಹಾಂತರಾಳದ ಮಾರ್ಗವನ್ನು ಬೆಳಗಿ ತೋರಿಸುವ ಚಿದ್ ಬೆಳಕೇ ತನ್ನರಿವೇ ತನ್ನ ಗುರು. ಈ ಅಂತರಾಳದ ಮಾರ್ಗವನ್ನು ನಿರ್ದೇಶಿಸುವ ಗುರು ತನ್ನೊಳಗೆ ಹುಟ್ಟಿಕೊಳ್ಳಬೇಕು.ತನ್ನ ತಾನರಿಯದ ಹೊರತು ಬೇರೆಯವರನ್ನು ಅರಿಯಲು ಸಾಧ್ಯವೇ ? ತನ್ನೊಳಗೆ ಮೂಡಿದ ಜ್ಯೋತಿಯೇ ಈ ಬೆಳಕು ತನ್ನದು, ತಾನು ಬೆಳಗಲು ಎಂಬ ಅರಿವು ತಾನು. ಮತ್ತು ಬೆಳಕು ಒಂದೇ ನಾಣ್ಯದ ಎರಡು ಮುಖಗಳಂತೆ.ತಾನು ಮತ್ತು ಬೆಳಕು ಎಂಬ ಅರಿವು ಬೆಳಕಿನಲ್ಲಿ ಬಿರುಕಿಲ್ಲದೇ ಅಖಂಡ ಏಕಾರ್ತವಾಗಿ ನಿಂತು ಅಜ್ಞಾನವನ್ನೆಲ್ಲಾ ನಿವೃತ್ತಿಗೊಳಿಸಿ ಏಕಮಯವಾದ ನಿಂದ ಬೆಳಕೆ ಗುರು.

ಈ ನಿಲುವನ್ನು ಮುಟ್ಟಿ ತೋರಿಸುವವರಾರು ಇಲ್ಲಿಲ್ಲ ನಿಜ ಆದರೆ ವಾದ ತರ್ಕ ವೇದಶಾಸ್ತ್ರ ಬೋದ್ಯ, ಬೋಧಕ, ಎಂಬ ಶಬ್ದದ ಆಡಂಬರದ ಸುಳಿವು ಅಡಗಿ ಸ್ವಯಂಭು ನಿರ್ಣಯ ಸರ್ವಾಂಗ ಪಕ್ಷವಾಗಿ ಸದಾಕಾಲದಲ್ಲೂ ಏಕಮಯವಾಗಿ ನಿಲ್ಲುವುದೇ.ಈ ಅರಿವು ಅಥವಾ ಗುರು ಈ ಸ್ವಾನುಭಾವದ ನಿರ್ಣಯ ಸಂಪೂರ್ಣ ಮೊತ್ತವೇ ಗುರು.ಈ ಗುರುತ್ವ ತಾನೇ ಹೌದು.ಗೌಪ್ಯ ಗುರುವಿನ ಕೈ ಹಿಡಿದುಕೊಂಡು ಸಹಜದ ಇರುವನ್ನು ತೋರ್ಪಡಿಸಬೇಕು.ಇದೇ ರೀತಿ ತನ್ನ ಅಣ್ಣ ಇದ್ದ.ತಾನು ಗುರುವಾಗಿದ್ದರೂ ತನ್ನಲ್ಲಿ ಅಡಗಿದ್ದ ಸಮರಸವಾಗಿರುವ ಶಿಷ್ಯತ್ವದ ಎಚ್ಚರ

ತಂಗಿಗಿರಬೇಕೆಂದು ಕಂಡುಕೊಂಡು ಬೆಂಕಿಯ ಸಂಘದಿಂದ ಕಟ್ಟಿಗೆ ಹೇಗೆ ಬೆಂಕಿಯಾಗುವುದೋ ನಂತರ ಬೆಂಕಿ ಕಟ್ಟಿಗೆಯನ್ನು ಉಂಡು ಉರಿಯುತ್ತದೆಯೋ ಹಾಗೆಯೇ ಬೆಂಕಿಯಾಗಿ ಉರಿಯುತ್ತದೆಯೋ ಹಾಗೆ ತನ್ನ ಅಜಗಣ್ಣ ಅರಿವು ಆ ಅರಿವಿನಿಂದ ತಾನು ಮರೆವನ್ನ ಹೋಗಲಾಡಿಸಿದೆನು ಎಂದು ಮುಕ್ತಿಯ ಮುಕ್ತಾಯಕ್ಕ ಹೇಳುತ್ತಾಳೆ.

ಸಹಜ ಸಂಬಂಧಕ್ಕೆ ಗುರುವಲ್ಲದೇ ಅಸಹಜಕ್ಕೆ ಗುರು ಎಂದಾದರೂ ಸಿಗಲು ಸಾಧ್ಯವೇ? ಭಕ್ತಿ, ಜ್ಞಾನ, ಯೋಗಕ್ರಿಯೆ, ಆಚಾರ, ನಿಯಮ ಹಿಡಿದು ನಡೆವ ಮಾರ್ಗ ಸ್ಥಳದಲ್ಲಿ ಗುರು ಶಿಷ್ಯ ಸಂಬಂಧ ಸಹಜ. ಆದರೆ ಅಕ್ಕ ಈ ನಿಯಮವನ್ನೆಲ್ಲಾ ನಿಷ್ಪತ್ತಿಯಾಗಿ ತೊಟ್ಟುಬಿಟ್ಟು ಕಳಚಿಬಿದ್ದ ಬಳಿಕ ಗುರುವೆಲ್ಲಿ? ಶಿಷ್ಯನೆಲ್ಲಿ ಇಲ್ಲದ ಗುರು ಶಿಷ್ಯರಿಗೆ ಸಂಬಂಧವೆಲ್ಲಿ ತಾಯೆ ಎಲ್ಲಾ ಸಂಬಂಧ ಕಡಿದು ಹೋಗಿ ತಾನು ತಾನೆಯಾಗಿ ನಿಂದ ಮೀರಿದ ಸ್ಥಳದಲ್ಲಿ ಗುರು ಶಿಷ್ಯರೆಂಬ ಯಾವ ನಾಮ ಯಾವ ಸೇವೆ ಯಾವ ಸಂಬಂಧ ಉಳಿದಿಲ್ಲ. ಎಂದು ಅಲ್ಲಮ ಪ್ರಭುವಿನ ಜೊತೆ ಮುಕ್ತಾಯಕ್ಕ ಚರ್ಚಿಸುತ್ತಾಳೆ.

ಸತ್ಯವುಳ್ಳಲ್ಲಿ ಶಬುದ ಹಿಂಗದು
ಭಾವವುಳ್ಳಲ್ಲಿ ಭಕ್ತಿ ಹಿಂಗದು
ಮೂರು ಲೋಕದ ಹಂಗಿನ ಶಬುದ ವೇನಯ್ಯ ?
ಮುಕುತಿಯನೇವೆನಯ್ಯಾ ?
ಎನ್ನ ಯುಕುತಿಯ ಮುಕುತಿಯ ಭಕುತಿಯ ಪದವನು ಕಂಡು
ನಾಚಿದವನಜಗಣ್ಣ ತಂದೆ[(೬)].

ಮುಕ್ತಾಯಕ್ಕ ಯುಕ್ತಿ, ಮುಕ್ತಿ ಬಗೆಗೆ ಅಜಗಣ್ಣ ಭಾವಿಸಿದಂತೆ ಅಳವಿಲ್ಲವೆಂದು ತಿಳಿಯುತ್ತಾಳೆ.ತನ್ನನ್ನು ಒಂದು ರೀತಿಯ ಆತ್ಮ ಶೋಧನೆಗೆ ಒಳವು ಮಾಡಿಕೊಂಡು

ಜಗತ್ತಿನ ಜ್ಞಾನಿಗಳು ತಮ್ಮನ್ನು ಬರೆ ಹಚ್ಚಿ ನೋಡಿಕೊಳ್ಳುವಂತೆ ಮುಕ್ತಾಯಕ್ಕಳು ಸಹ ತನ್ನ ಅರಿವಿನ ಆಳವನ್ನು ಪರೀಕ್ಷಿಸಿಕೊಳ್ಳುತ್ತಾಳೆ.

ಸತ್ಯವಿದ್ದಲ್ಲಿ ಶಬ್ಧ, ಭಾವವಿದ್ದಲ್ಲಿ ಭಕ್ತಿ ಎಂದೆಂದಿಗೂ ಶಾಶ್ವತ.ಚಿನ್ನವನ್ನು ಕಾಯಿಸಿದಷ್ಟು ಹೊಳಪು ಜಾಸ್ತಿಯಾಗುತ್ತದೆಯೋ ಹಾಗೆಯೇ ಸತ್ಯವಿದ್ದಲ್ಲಿ ಪ್ರಕರವಾದ ಜ್ಞಾನ, ಅರಿವು, ಗುರು ತನ್ನಲ್ಲಿರುತ್ತದೆ. ಹಾಗೆಯೇ ಮರ್ತ್ಯ, ಸ್ವರ್ಗ, ನರಕ ಎನ್ನುವಂತಹ ಕಾಲ್ಪನಿಕ ಶಬ್ಧದ ಆಡಂಬರದ ಮೂರು ಲೋಕದ ಹಂಗನ್ನು ತಿರಸ್ಕರಿಸುತ್ತಾ ಸತ್ಯಭಾವವಿದ್ದಲ್ಲಿ ಮುಕ್ತಿಯೂ ತಾನಾಗಿ ಪರಿಣಮಿಸುತ್ತದೆ.

ಯುಕ್ತಿ, ಮುಕ್ತಿ, ಭಕ್ತಿ ಎನ್ನುವಂತಹ ಆಡಂಬರದ ಆಚರಣೆಯನ್ನು ಕಂಡಂತಹ ನನ್ನ ಬಾಹ್ಯಾಡಂಬರದ ಆಚರಣೆಗೆ ನಗುತ್ತಾನೆ.

ಅಜಗಣ್ಣ ಬದುಕಿದ್ದಾಗ ಬಹುಶಃ ಆತನೊಡನೆ ನಡೆದ ಮಾತುಕತೆಗಳನ್ನು ಮುಕ್ತಾಯಕ್ಕ ಮೆಲುಕು ಹಾಕುತ್ತಿದ್ದಾಳೆಂದು ಭಾಸವಾಗುತ್ತದೆ.ಜ್ಞಾನಮೂಲ ಗುರುತಿಸುತ್ತೇವೆಂಬೆನು.

ಐಶ್ವರ್ಯ ಮೂಲ ಲಿಂಗಾರ್ಚನೆ ಎಂಬೆನು ಮೋಕ್ಷ ಮೂಲ ಘಟ ಸಂತೃಪ್ತಿ ಎಂಬೆನು ಅಜಗಣ್ಣ ಲಿಂಗವೇ ಜ್ಞಾನ ಮೂಲ ಎನ್ನುವಲ್ಲಿ ಐಶ್ವರ್ಯ ಮೂಲ ಹಾಗೂ ಮೋಕ್ಷಮೂಲ ವಿವರಣೆಯನ್ನು ನೀಡುತ್ತಾಳೆ.

ಅಣ್ಣ ಬಯಲಾಗಿ ಮಲಗಿದ್ದಾನೆ. ಆತನ ಮುಂದೆ ದುಃಖದ ನಿಖಿಳಾವಸ್ಥೆಗೆ ಹೋದ ಮುಕ್ತಾಯಕ್ಕ ನೀತಿ ಸಂಹಿತೆಯ ಪಾಠ ಹೇಳುತ್ತಿದ್ದಾಳೆ.ಆಚಾರ ವಿಚಾರಗಳ ವಿಮರ್ಶೆ ಮಾಡುತ್ತಿದ್ದಾಳೆ.ಅಣ್ಣನ ಮಾತುಗಳನ್ನು ನೆನೆನೆನೆದು ಆಡುತ್ತಿದ್ದಾಳೆ.ಕೆಟ್ಟ ನುಡಿಗಳ ನುಡಿಯಲಿ ಬಾರದು. ಕೆಟ್ಟ ನಡೆಗಳ ನುಡಿಯಲು ಬಾರದು ನುಡಿದಡೇನು

ನುಡಿಯದಿರ್ದಡೇನು ?ಹಿಡಿದ ವ್ರತವನ್ನು ಎಂದೂ ಬಿಡಬಾರದು.ಅದೇ ಮಹಾ ಜ್ಞಾನದ ಆಚರಣೆ ಎಂದಿದ್ದಾಳೆ.

> **ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ**
> **ಬಯಲಬೊಂಬೆಯ ಕೈಯಲಿ ಕೊಟ್ಟು ಮುದ್ದಾಡಿಸುತಿರ್ದನಯ್ಯಾ**
> **ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ**
> **ಅಗ್ನಿ ಕರಗಿ ಕರ್ಪೂರ ಉಳಿದುದ್ದಕ್ಕೆ ಬೆರಗಾದೆನಯ್ಯಾ**
> **ಎನ್ನ ಅಜಗಣ್ಣನ ಯೋಗಕ್ಕೆ**[೭].

ನನ್ನ ಅಜಗಣ್ಣ ನೀರ ಗೊಂಬೆಗೆ ನಿರಾಳ ಗೆಜ್ಜೆ ಕಟ್ಟಿದ್ದಾನೆ. ಬಯಲು ಎನ್ನುವ ಬೊಂಬೆಯನ್ನು ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿದ್ದಾನೆ. ಕರ್ಪೂರದ ಪ್ರತಿಮೆಗೆ (ಮೂರ್ತಿಗೆ) ಅಗ್ನಿಯ ಸಿಂಹಾಸನವನ್ನು ಕೊಟ್ಟು ಕರ್ಪೂರದ ಪ್ರತಿಮೆ ಉರಿದು ಹೋಗಬೇಕು ಆದರೆ ಅಗ್ನಿ ಕರಗಿ, ಅಂದರೆ (ಸಿಂಹಾಸನವೇ ಕರಗಿ) ಕರ್ಪೂರ ಉಳಿಯಿತು ಹೀಗಿರುವ ಅಜಗಣ್ಣನ ಯೋಗಕ್ಕೆ ಬೆರಗಾದೆನಯ್ಯಾ ನಾನು. ಹೀಗೆ ದೇಹವಿದ್ದು ದೇಹವಿಲ್ಲದೇ ತನ್ನ ಅರಿವು ತೋರದೆ ತಾನೆಂಬ ಸ್ವರೂಪವನ್ನ ಶಿವ ತತ್ವ ಸ್ವರೂಪದಲ್ಲಿ ನಿರ್ವಹಿಸಿ ತನ್ನ ಭೌತಿಕ ಇರವಿನಿಂದ ತಪ್ಪಿಸಿಕೊಂಡು ಹೋದನೇ ಎಂದು ಭಿನ್ನವಿಸುತ್ತಾಳೆ.ನೀರ ಪುತ್ಥಳಿಯನ್ನು ಮತ್ತೆ ಕರ್ಪೂರದ ಗೊಂಬೆಯನ್ನು ಉರಿದು ಸಿಂಹಾಸನದಲ್ಲಿ ಕುಳ್ಳಿರಿಸಿದ ಅಜಗಣ್ಣ ನಂತರದಲ್ಲಿ ಉರಿಯ ಆಸನ (ಸಿಂಹಾಸನ) ಕರಗಿಹೋಯ್ತು. ಕರ್ಪೂರದ ಪುತ್ಥಳಿ ಉರಿದು ಕರಗದೆ ಉಳಿಯಿತು.ಅಂದರೆ ಮುಕ್ತಾಯಕ್ಕಳ ಕಣ್ಣಲ್ಲಿ ಬೆರಗು ಮೂಡಿ ಶಿವಯೋಗಿಯ ಈ ಕಮ್ಮಟ ಕಣ್ಣಾರೆ ಕಂಡಿದ್ದು.

ಶಿವ ಯೋಗದ ಈ ಕಮ್ಮಟದಲ್ಲಿ ಅಜಗಣ್ಣ ಮೊದಲು ನೀರ ಬೊಂಬೆಗೆ ನಿರಾಳದ ಗೆಜ್ಜೆಯನ್ನು ಕಟ್ಟುವುದು ಈ ನೀರಬೊಂಬೆ ಜಲಬಿಂದು ಸ್ವರೂಪವಾದ

ದೇಹ ಇದೇ ನೀರಲಾದ ನಿರ್ಮಿತ ಈ ದೇಹ ಎನ್ನುವಂತಹ ಅಹಂಭಾವ ರೂಪವಿರುವ ಮಾನವ ಬೊಂಬೆಗೆ ಅಜಗಣ್ಣ ಅಳವಡಿಸುವ ಗೆಜ್ಜೆ ನಿರಾಳ ಎನ್ನುವಂತಹ ಗೆಜ್ಜೆ. ಎಲ್ಲೂ ತೋರ್ಪಡಿಕೆಯ ಜೀವನ ಅಥವಾ ಭೌತಿಕ ಶಬ್ಧಾಡಂಬರದ ಜೀವನ ಸಲ್ಲದು ಎಂದರ್ಥ.ನಿಶ್ಯಬ್ದ ಗಂಭಿರವೇ ಅಜಗಣ್ಣನ ನಿರಾಳದ ಗೆಜ್ಜೆ ಈ ನಿರಾಳ ಗಂಭೀರವನ್ನು ತನ್ನ ದೇಹಭಾವಕ್ಕೆ ಕಟ್ಟಿ ಬಯಲ ಬೊಂಬೆಯ ಕೈಗೆ ಕೊಟ್ಟ.ಮುಕ್ತಾಯಕ್ಕಳ ಈ ವಚನಗಳಲ್ಲಿ ಮಸ್ತಕದ ಡೊಂಕನ್ನು ತಿದ್ದಿ ತೀಡಿ ಆಚಾರ, ವಿಚಾರ, ನಡವಳಿಕೆ, ಪರಿಶುದ್ಧಗೊಳಿಸಿ, ಸನ್ಮಾರ್ಗದ ಜೀವನವನ್ನು ನಡೆಸುವ ಕಾಳಜಿ ತೀವ್ರವಾಗಿ ಕಂಡುಬರುತ್ತದೆ.

ನುಡಿಯಲು ಬಾರದು ಕೆಟ್ಟ ನುಡಿಗಳ.
ನಡೆಯಲು ಬಾರದು ಕೆಟ್ಟ ನಡೆಗಳ.
ನುಡಿದಡೇನು ನುಡಿಯದಿರ್ದಡೇನು ?
ಹಿಡಿದ ವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ[೮].

ನಡೆ ನುಡಿ ಬದುಕಿನ ಅವಿಭಾಜ್ಯ ಅಂಗಗಳಾಗಿರಬೇಕು ಭೌತಿಕ ಅಂಗಗಳು ಎಷ್ಟು ಮುಖ್ಯವೋ ಹಾಗೆಯೇ ನಡೆ ಮತ್ತು ನುಡಿ ಎರಡೂ ಅಂಗಗಳು ನಮ್ಮ ಜೀವನದಲ್ಲಿ ಅಡಕವಾಗಿ ಬಂದು ವ್ರತದಾಚರಣೆಯನ್ನು ಕೈಗೊಳ್ಳಬೇಕು.ಪಟ್ಟು ಬಿಡದ ಆ ವ್ರತವೆಂದರೆ ಮಹಾ ಜ್ಞಾನ ಎನ್ನುವಂತಹ ಆಚರಣೆ.ನಾವು ಹೇಗೆ ಹಬ್ಬ ಹರಿದಿನಗಳಲ್ಲಿ ಸಂಭ್ರಮದಿಂದ ಆಚರಿಸುತ್ತೇವೆಯೋ ಹಾಗೆ ಅದೇ ಸಂಭ್ರಮಾಚರಣೆಯಿಂದ ಕಟ್ಟದ್ದು ಕಲುಷಿತಗೊಂಡಿದ್ದು ಅಂಧಕಾರದ್ದು.ಎನ್ನ ಭಾವಕ್ಕೆ ಗುರುವಾದನಯ್ಯಾ ಬಸವಣ್ಣನು

ಎನ್ನ ನೋಟಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು
ಎನ್ನ ಪರಿಣಾಮಕ್ಕೆ ಪ್ರಸಾದವಾದನಯ್ಯಾ ಮರುಳಶಂಕರದೇವರು
ಎನ್ನ ಹೃದಯಕ್ಕೆ ಮಂತ್ರವಾದನಯ್ಯಾ ಮಡಿವಾಳಯ್ಯನು
ಇಂತೀ ಐವರ ಕಾರುಣ್ಯಕ್ಕೆ ಪ್ರಸಾದವ ಕೊಂಡು
ಬದುಕಿದೆನಯ್ಯಾ ಅಜಗಣ್ಣ ತಂದೆ.

ಜೀವ, ಜೀವನ, ವಿದ್ಯೆ ಮುಂತಾದವುಗಳೆಲ್ಲಾ ನಮಗೆ ಇತರರ ದಯೆ–ದಾನಗಳಿಂದ ಬಂದಿರುತ್ತವೆ. ಹೀಗೆ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯ ರಚನೆಗೆ ವಸ್ತುಕ, ಪ್ರಕಾರ ಶೈಲಿಗಳ ಕಾರಣಕ್ಕೆ ಬೇರೊಬ್ಬ ಹಿರಿಯಕವಿಗಳ ಬಗೆಗೆ ತಮ್ಮ ಕಾವ್ಯಕೃತಿಗಳಲ್ಲಿ ವಿನಯಶೀಲತೆಯಿಂದ ಸ್ಮರಿಸಿಕೊಳ್ಳುವುದು ರೂಢಿಯಾಗಿದೆ.ಪಂಪನಾದಿಯಾಗಿ ಬಹುತೇಕ ಕನ್ನಡ ಕವಿಗಳೂ ಇದರಿಂದ ಹೊರತಾದವರಲ್ಲ ಅಂತೆಯೇ ತನ್ನ ಸಮಕಾಲೀನ ವಚನಕಾರರನ್ನು ಮುಕ್ತಾಯಕ್ತ ಮನಸಾರೆ ಸ್ಮರಿಸಿಕೊಂಡಿರುವುದನ್ನು ಈ ವಚನದಲ್ಲಿ ಕಾಣಬಹುದು.

ಭಾವಕ್ಕೆ ಬಸವಣ್ಣ ನೋಟಕ್ಕೆ ಅಥವಾ ಮೂರ್ತ ತತ್ವಕ್ಕೆ ಚೆನ್ನಬಸವಣ್ಣ, ಜ್ಞಾನಕ್ಕೆ ಪ್ರಥಮ ಶೂನ್ಯ ಸಿಂಹಾಸನಾಧೀಶ ಅಲ್ಲಮಪ್ರಭು, ಕಾರ್ಯಗಳ ಪರಿಣಾಮಕ್ಕೆ ಪ್ರಸಾದದಂತೆ ಮರುಳಶಂಕರ ದೇವರೆಂಬ ಶರಣರು, ಹೃದಯಕ್ಕೆ ಮಂತ್ರವಾಗುವಲ್ಲಿ ಮಡಿವಾಳ ಮಾಚಯ್ಯನು ಹೀಗೆ ಈ ಐವರ ಕರುಣೆಯಲ್ಲಿ ನಾನು ಬದುಕಿದ್ದೇನೆ ಎಂದು ಸ್ಮರಿಸಿದ್ದಾಳೆ.

ಗುರುವಚನದಿಂದಲ್ಲದೆ ಲಿಂಗವನರಿಯಬಾರದು
ಗುರುವಚನದಿಂದಲ್ಲದೆ ಜಂಗಮವನರಿಯಬಾರದು
ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು
ಗುರುವಚನದಿಂದಲ್ಲದೆ ತನ್ನತಾನರಿಯಬಾರದು
ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದಡೆ
ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೆ?
ತನ್ನಲ್ಲಿ ತಾನು ಸನ್ನಹಿತನಾದೆಹೆನೆಂದಡೆ ಗುರುವಿಲ್ಲದೆ ಆಗದು ಕೇಳಾ
ಎನ್ನ ಅಜಗಣ್ಣನೆಂಬ ಗುರುವಿಲ್ಲದೆ
ಆರೂಢಿಯ ಕೂಟ ಸಮನಿಸದು ಕೇಳಾ.

ಪುರಂದರ ದಾಸರು ತಮ್ಮ ಕೀರ್ತನೆಗಳಲ್ಲಿ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ಹೇಳಿದ್ದಾರೆ. ಹಾಗೆ ಮುಕ್ತಾಯಕ್ಕ ಕೂಡ ತನ್ನ ಈ ವಚನದಲ್ಲಿ ಗುರುಕಾರುಣ್ಯವಿಲ್ಲದೆ ಜಗತ್ತಿನಲ್ಲಿ ಏನೂ ನಡೆಯದೆನ್ನುವ ಕರಾರುವಾಕ್ ನುಡಿಯನ್ನು ನುಡಿದಿದ್ದಾಳೆ. ಗುರುವು ಹೇಳದಿದ್ದರೆ ಲಿಂಗ ಜಂಗಮ ಮತ್ತು ಪ್ರಸಾದಗಳನ್ನರಿಯುವ ಪ್ರಯತ್ನ ಮಾಡಬಾರದು ಅಲ್ಲದೆ ಸ್ವಯಂಭೂ ಆಗಿ ತನ್ನನ್ನು ತಾನು ಅರಿಯಲಾಗದೆನ್ನುತ್ತಾಳೆ.ಆದರೆ, ಇತರ ವಚನಕಾರರು ತನ್ನರಿವೇ ತನಗೆ ಗುರುವೆಂದಿದ್ದಾರೆ.ಇವಳ ಭಿನ್ನ ನಡೆ ವಚನಕಾರರಲ್ಲಿ ಅಚ್ಚರಿ ಮೂಡಿಸಿದೆ. ಗುರು ಮುಖದಿಂದಲೇ ನಮ್ಮ ಜ್ಞಾನದ ಬಾಗಿಲು ತೆರೆಯುತ್ತದೆ ಎಂಬುದು ಇವಳ ನಂಬುಗೆ.ಜಾನಪದ ಕವಿಚಕ್ರವರ್ತಿ ಸರ್ವಜ್ಞನು ತನ್ನ ತ್ರಿಪದಿಯೊಂದರಲ್ಲಿ 'ಗುರುರಾಯ ಬಂಧನವಕಳೆವನು' ಎಂದು ಉಲ್ಲೇಖಿಸಿದ್ದಾನೆ.

ಕಳೆದ ಜನ್ಮದಲ್ಲಿ ಲಿಂಗವನ್ನು ಪೂಜಿಸಿದ್ದು ಈ ಜನ್ಮದಲ್ಲಿ ಅದರ ಪರಿಣಾಮದ ಜ್ಞಾನೋದಯವಾದದ್ದಕ್ಕೆ ಗುರುವಿಂದ ಅನುಗ್ರಹವಾಗದೆ ಆಯಿತು ಎನ್ನಬಹುದೇ ಎಂದು ಮುಕ್ತಾಯಕ್ಕ ಪ್ರಶ್ನಿಸಿದ್ದಾಳೆ.ತನ್ನನ್ನು ತಾನು ಅರಿಯಬೇಕೆಂದರೆ ಗುರುವು

ಬೇಕೇಬೇಕೆಂದು ಪ್ರತಿಪಾದಿಸುವ ಇವಳು ಅಜಗಣ್ಣನೆಂಬ ಗುರುವಿಲ್ಲದೆ ಜ್ಞಾನದ ಉನ್ನತ ಸಾಧನೆ (ಆರೂಢ) ಸಂಗಮ ಸಾಧ್ಯವೆನಿಸದು ಎಂದು ಹೇಳಿದ್ದಾಳೆ.

ಶಿವಶರಣರಿಗೆ ಮೂಲತಃ ಹೊಂದಾಣಿಕೆಯ ಐಕ್ಯತಾಗುಣವಿರಬೇಕೆಂದು ಮುಕ್ತಾಯಕ್ಕ ಮೇಲಿನ ತನ್ನ ವಚನಗಳ ಮೂಲಕ ಪ್ರತಿಪಾದಿಸುವ ಯತ್ನ ಮಾಡಿದ್ದಾರೆ.ತನುವಿನೊಳಗೆ ತನುವಾಗಿ ಮನದೊಳಗೆ ಮನವಾಗಿ ಪ್ರಾಣವಾಗಿ ಇರುವುದು ಎಂದರೆ ತನ್ನಲ್ಲಿ ತಾನು ಅರಿತುಕೊಳ್ಳುವುದು ಎಂದರ್ಥವೇ? ಎಂದು ಪ್ರಶ್ನಿಸಿದ್ದಾಳೆ. ಅದರ ಪರಿಣಾಮಗಳ ಬಗೆಗೆ ತಾನು ಅರಿತನೆಂದು ಹೇಳಿದರೆ ಸಾಧ್ಯವೇ?ಎಂದಿರುವ ಮುಕ್ತಾಯಕ್ತ ತಮ್ಮ ಅಂತರಂಗ ಹೀಗೇಯೇ ಇದೆ ಎಂದು ಅರ್ಥೈಸಲಾದೀತೆ.ಮನಸ್ಸನ್ನು ನೇರವಾಗಿ ಮುಟ್ಟಿ ಅರ್ಥೈಸಲು ಪ್ರಯತ್ನ ಮಾಡಲಾಗದು ಎನ್ನುತ್ತಾಳೆ.ಬಹಿರಂಗದಲ್ಲೂ ಅದನ್ನು ಪೂಜಿಸುವತನಕ ಕಾಣುವ ಪ್ರಯತ್ನ ಸರಿಯಲ್ಲ. ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳನ್ನು ಇಟ್ಟುಕೊಂಡಿದ್ದರೆ ಆಕಾರವಿಲ್ಲದ ನಿರಾಕಾರನಾದ ಶಿವನ ಲಿಂಗವನ್ನು ತಲುಪಲು ಸಾಧ್ಯವಾಗದು ಎನ್ನುತ್ತಾಳೆ.ಅವಳ ಮನಸ್ಸಿನೊಳಗೆ ಘನರೂಪಿ ಶಿವನದರ್ಶನವಿಲ್ಲದ್ದರಿಂದ ಅಜಗಣ್ಣ ಅವಳಿಗೆ ಕೊಟ್ಟ ರೇಷ್ಮೆ ವಸ್ತ್ರದಲ್ಲೂ ದೋಷವುಂಟಾಯ್ತು ಅದಕ್ಕಾಗಿಯೇ ನಾನು ಬೆರಗಾದೆನು ಎಂದು ಮುಕ್ತಾಯಕ್ತ ಅಚ್ಚರಿ ವ್ಯಕ್ತಪಡಿಸಿದ್ದಾಳೆ.ಮುಕ್ತಾಯಕ್ತ ಗುರುವಚನದಿಂದಲೇ ಎಲ್ಲವನ್ನು ಅರ್ಥೈಸಿಕೊಳ್ಳಬೇಕೆಂದು ಹೇಳಿದ್ದನ್ನು ಗಮನಿಸಿದಾಗ ಗುರು ಮುಖದಿಂದ ಲಿಂಗಜಂಗಮ ಪ್ರಸಾದವನ್ನು ಅರಿಯಬೇಕೆಂದು ಹೇಳುತ್ತಾ ಗುರುವಿನ ಮಹತ್ವವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದಿದ್ದಾಳೆ.ಇವು ಮೂರನ್ನು ತೋರಿದ ವ್ಯಕ್ತಿಯೇ ಶ್ರೇಷ್ಟವೆನ್ನುತ್ತಾಳೆ.ಗುರುವನ್ನೊರತು ಜ್ಞಾನಪಿಪಾಸುವಾಗುವ ಸಾಧ್ಯತೆಗಳೇ ಇಲ್ಲವೆಂಬುದು ಮುಕ್ತಾಯಕ್ತಳ ವಾದ.

ಈ ವಿಚಾರದಲ್ಲಿ ಭಿನ್ನಕಾಲಘಟ್ಟಗಳಲ್ಲಿ ಭಿನ್ನವಾದ ನಿಲುವುಗಳನ್ನು ತಳೆದಿರುವುದನ್ನು ಕಾಣಬಹುದು.ಇತರ ಶರಣ–ಶರಣೆಯರ ವಚನಗಳಲ್ಲಿ ಉಲ್ಲೇಖವಾಗಿರುವಂತೆ **"ತನ್ನತಾನರಿಧವಂಗೆ ಅರಿವೇ ಗುರು ಅರಿವರಿತು ಮರಹು ನಷ್ಟವಾದಲ್ಲಿ ದೃಷ್ಟನಷ್ಟವೇ ಗುರು"** ಎಂದು ಹೇಳುತ್ತಾ **"ಗುರುತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ"** ಎಂದು ಪ್ರತಿಪಾದಿಸಿದ್ದಾಳೆ.

ಅರಿವೇ ಗುರು ಎನ್ನುವುದು ಸಾರ್ವಕಾಲಿಕ ಸತ್ಯ.ಇದನ್ನೇ ಅನುಭಾವ ಎನ್ನಬಹುದು ಅನುಭಾವ ಇದ್ದಾಗಲೂ ಗುರುವು ನಮ್ಮನ್ನು ಅಜಗಣ್ಣನಂತೆ ಹಿಡಿದಿರಬೇಕು ಎನ್ನುವಲ್ಲಿ ಗುರುವಿನ ಶ್ರೇಷ್ಠತೆ ಮನವರಿಕೆಯಾಗುತ್ತದೆ.

ಮುಕ್ತಾಯಕ್ಕಳ ಪ್ರಾರಂಭಿಕ ವಚನಗಳಲ್ಲಿ ಅತೀಂದ್ರಿಯ ಸಮಾನವಾದ ವಚನಗಳು ರಚಿತವಾಗಿಲ್ಲ. ಸೀಮಿತ ಕಲ್ಪನೆಗಳನ್ನೇ ತನ್ನ ವಚನಗಳ ವಸ್ತುವಾಗಿಸಿ ರಚಿಸಲು ಪ್ರಾರಂಭಿಸಿರಬಹುದು. ವಿದ್ಯಾಭ್ಯಾಸದ ಕಾಲದಲ್ಲಿ ವೇದ, ಉಪನಿಷತ್ತುಗಳನ್ನೂ ಅಭ್ಯಸಿಸಿರಬೇಕು. ಅಣ್ಣನಾಗಿ, ಗುರುವಾಗಿ, ತಂದೆಯಾಗಿ ಒಟ್ಟಾರೆ ದೈವವೂ ಆಗಿ ಅಜಗಣ್ಣ ಮುಕ್ತಾಯಕ್ಕಳಿಗೆ ಮೈದೋರಿರಬೇಕು.ಅವನೇ ಎಲ್ಲಾ ಎನ್ನುವಂತೆ ತನ್ನ ವಚನವೊಂದರಲ್ಲಿ ಪ್ರತಿಪಾದಿಸಿದ್ದಾಳೆ.

ಹನ್ನೆರಡನೇ ಶತಮಾನದ ಕಲ್ಯಾಣದಲ್ಲಿ ಸಮಾನತೆಯ ಆಧಾರದಲ್ಲಿ ಬಸವಣ್ಣ ಅಲ್ಲಮರ ನೇತೃತ್ವದಲ್ಲಿ ನಿರ್ಮಾಣ ಹಂತದಲ್ಲಿದ್ದ ಸಮಾಜದ ಸಕ್ರಿಯ ಸದಸ್ಯೆಯಾದ ಮುಕ್ತಾಯಕ್ಕ ಇತರ ಶರಣರಿಗಿಂತಲೂ ಭಿನ್ನ ನಿಲುವುಗಳನ್ನು ಹೊಂದಿದ್ದಳೆನ್ನುವುದಕ್ಕೆ ಇವಳ ಕೆಲ ವಚನಗಳೇ ಸಾಕ್ಷಿಯಾಗಿವೆ ಕೆಲ ಶರಣರಿಗೆ ಶಿವನೇ ಸರ್ವಸ್ವವಾಗಿ ಬಸವಣ್ಣನನ್ನೇ ಗುರುವಾಗಿಸಿಕೊಂಡಿದ್ದರು. ಆದರೆ, ಮುಕ್ತಾಯಕ್ಕನಿಗೆ ಅವೆಲ್ಲವೂ ಅಜಗಣ್ಣನೇ ಆಗಿದ್ದನೆಂದು ತೋರುತ್ತದೆ.ಅವಳು ಬೆಳೆದ ಪರಿಸರದಲ್ಲಿ ಅಜಗಣ್ಣ ಅವಳ ಜೀವನದಲ್ಲಿ ನಿರ್ವಹಿಸಿದ ಪಾತ್ರ ಮುಖ್ಯವಾಗುತ್ತದೆ.ಗುರುವಾಗಿ, ಅಣ್ಣನಾಗಿ

ತಂದೆಯಾಗಿ, ದೈವವಾಗಿ ಇನ್ನು ಏನೇನೋ ಆದರ್ಶದ ರೂಪಗಳಲ್ಲಿ ಅಜಗಣ್ಣ ಮುಕ್ತಾಯಕ್ಕಳಿಗೆ ಕಂಡು ಬಂದಿದ್ದಾನೆ.

ಮುಕ್ತಾಯಕ್ಕ ರಚಿಸಿರುವ ಮೂವತ್ತೇಳು ವಚನಗಳಲ್ಲಿ ಅತೀ ದೀರ್ಘವಾದ ಈ ವಚನದಲ್ಲಿ ಅಜಗಣ್ಣನನ್ನು ಹೊಗಳುತ್ತಲೇ ವೈಚಾರಿಕತೆಯ ಅಗಾಧ ಬೇರುಗಳೇ ಮೈವೆತ್ತಿ ನಿಂತಿವೆ.

ಏಕತತ್ವ ತ್ರಿತತ್ವ ಪಂಚತತ್ವ ಪಂಚವಿಂಶತಿತತ್ವ ಷಟ್ತ್ರಿಂಶತ್ ತತ್ವವ
ಗರ್ಭೀಕರಿಸಿಕೊಂಡಿಪ್ಪಾತನು ಅಜಗಣ್ಣನೆ
ತತ್ವವೆಲ್ಲಕ್ಕಧಿಕವಾಗಿಪ್ಪಾತನು ಅಜಗಣ್ಣನೆ, ಮಹಾತತ್ವವು ಅಜಗಣ್ಣನೆ,
ಶ್ರೀಗುರುತತ್ವವು ಅಜಗಣ್ಣನೆ, ಪರತತ್ವವು ಅಜಗಣ್ಣನೆ.
ಶಿವಶಿವಾ ಹರಹರಾ, ಸಕಲವೇದಶಾಸ್ತ್ರಪುರಾಣಾಗಮ
ಅಷ್ಟಾದಶ ವಿದ್ಯಂಗಳು ಸರ್ವ ವಿದ್ಯಂಗಳು
ಸಪ್ತಕೋಟಿ ಮಹಾಮಂತ್ರಂಗಳು ಉಪಮಂತ್ರವನಂತಕೋಟಿಗಳಿಗೆ
ಮಾತೃಸ್ಥಾನವಾದಾತನು ಅಜಗಣ್ಣನೆ.
ಲಯ ಕಾಲ ಸ್ಥಿತಿಗಳಿಗೆ ಕಾರಣವಾಗಿರ್ಪಾತನು ಅಜಗಣ್ಣನೆ.
ಮಂತ್ರರಾಜರು ಅಜಗಣ್ಣನೆ, ಮೂಲಮಂತ್ರವು ಅಜಗಣ್ಣನೆ.
ಏಕವಾದ ಮಹಾಲಿಂಗವು ಅಜಗಣ್ಣನೆ,
ಮಹಾಲಿಂಗವಾಗಿಪ್ಪಾತನು ಅಜಗಣ್ಣನೆ,
ಮಹಾಸದ್ಭಕ್ತನು ಅಜಗಣ್ಣನವ್ವಾ.
ತತ್ವಜ್ಞಾನ ಅಜಗಣ್ಣನೆ, ತತ್ವಮಯನು ಅಜಗಣ್ಣನೆ.
ಮಹಾಮಂತ್ರ ಮುಖೋದ್ಗತವಾದಾತನು ಅಜಗಣ್ಣನೆ.
ಮಹಾಲಿಂಗೈಕ್ಯನು ಅಜಗಣ್ಣನೆ.

ಆತನೆ ಮಹಾಘನಮಹತ್ತನೊಳಕೊಂಡಿರ್ಪನಾಗಿ

ಶಿವಶಿವಾ, ಸದ್ಭಕ್ತ ಅಜಗಣ್ಣ ಗುರುವಿಂಗೆ ಪೂಜೆ ಅರ್ಚನೆ ಭಜನೆಗಳಿಲ್ಲವಾಗಿ

ಉಪಮಾತೀತ ಅಜಗಣ್ಣನು, ವಾಙ್ಮನಕ್ಕತೀತ ಅಜಗಣ್ಣನು.

ಮಹಾಗುರುವ ಕಾಣದೆ ನಾನೆಂತು ತಾಳುವೆನವ್ವಾ?

ಬ್ರಹ್ಮರಂಧ್ರದಲ್ಲಿ ಗುರುಮೂರ್ತಿಯಾಗಿಪ್ಪ ಪರಮಾತ್ಮನು ಅಜಗಣ್ಣನೆ.

ಭ್ರೂಮಧ್ಯದಲ್ಲಿ ಲಿಂಗಮೂರ್ತಿಯಾಗಿಪ್ಪಾತನು ಅಜಗಣ್ಣನೆ.

ಹೃದಯದಲ್ಲಿ ಜಂಗಮಮೂರ್ತಿಯಾಗಿಪ್ಪಾತನು ಅಜಗಣ್ಣನೆ

ಇಂತಪ್ಪ ಅಜಗಣ್ಣನೇನಡಗಿಸಿದನವ್ವಾ.

ಧ್ಯಾನಿಸಿ ನೆನೆದಡೆ ಶೋಕಿಸಿದರೆಂಬರೆಲೆ ಅವ್ವಾ

ಈ ಅಜಗಣ್ಣ ತಂದೆಯನಗಲಿ ನಾನೆಂತು ಸೈರಿಸುವೆನೆಲೆ

ಸತ್ಯಕ್ಕ ತಾಯೆ ಆಹಾ!(೯)

ಈ ಮೇಲಿನ ವಚನದಲ್ಲಿ ಉಲ್ಲೇಖಿಸಿರುವಂತೆ ನೂರಾರು ತತ್ತ್ವಗಳಿಗೆ ಮಹಾತತ್ತ್ವವಾಗಿ ಅಜಗಣ್ಣನಿದ್ದಾನೆ! ಸಪ್ತ ಕೋಟಿಮಂತ್ರಗಳಿಗೆ ಅನಂತಕೋಟಿಗಳಿಗೆ ಮಾತೃಸ್ಥಾನವೂ ಅಜಗಣ್ಣನೇ! ಲಯ ಕಾಲ ಸ್ಥಿತಿಗಳಿಗೆ ಕಾರಣ ಇವನೇ.ಮಂತ್ರರಾಜನೂ, ಮೂಲಮಂತ್ರವೂ ಮಹಾಲಿಂಗವೂ ಅಜಗಣ್ಣನೇ, ಮಹಾಸದ್ಭಕ್ತನೂ, ತತ್ತ್ವಜ್ಞಾನವೂ, ತತ್ತ್ವಮಯನು, ಮಹಾಲಿಂಗೈಕ್ಯನು ಅಜಗಣ್ಣನೇ ಆಗಿರುವುದನ್ನು ಗ್ರಹಿಸಬಹುದು.ಇವನು ಹೋಲಿಕೆಗೆ, ಹೊಗಳಿಕೆಗೆ ಸಿಗುವುದಿಲ್ಲ. ಇವನಿಗೆ ಪೂಜೆ, ಅರ್ಚನೆ ಭಜನೆಗಳಿರುವುದಿಲ್ಲ. ಬ್ರಹ್ಮರಂಧ್ರದಲ್ಲಿ ಗುರುವಾಗಿರುವ ಪರಮಾತ್ಮನೂ ಇವನೇ. ಭೂಮಧ್ಯದಲ್ಲಿ ಲಿಂಗವಾಗಿರುವವರು, ಭಕ್ತರ ಹೃದಯದಲ್ಲಿ ಜಂಗಮ ಮೂರ್ತಿಯಾಗಿಯೂ ಇರುವ ಅಜಗಣ್ಣನನ್ನು, ಅಂಥಾ ತಂದೆಯನ್ನು ಅಗಲಿ ನಾನು ಹೇಗೆ ಸಹಿಸಿಕೊಳ್ಳುವೆನು ಎನ್ನುವ ಅಸಹಾಯಕತೆಯನ್ನು ಇನ್ನೊಬ್ಬ

ವಚನಕಾರ್ತಿ ಸತ್ಯಕ್ಕನ ಬಳಿ ನಿವೇದಿಸಿಕೊಂಡಂತಿರುವ ಈ ವಚನದಲ್ಲಿ ಇಂದು ನಾವು ಯಾವುದನ್ನು ಅಂತರ್ಜಾಲ ಎಂದು ಕರೆಯುತ್ತಿದ್ದೇವೋ ಅಂದೇ ಮುಕ್ತಾಯಕ್ಕ, ಸತ್ಯಕ್ಕ, ಅಕ್ಕಮಹಾದೇವಿಯರೊಂದಿಗಿನ ಅಂತರ್ಜಾಲ ಸಂಬಂಧಿ ಸಂವಹನ ಪ್ರಜ್ಞೆಯನ್ನು ಕಾಣಬಹುದಾಗಿದೆ.

ಮುಕ್ತಾಯಕ್ಕ ಕೆಲವು ದೃಷ್ಟಾಂತಗಳ ಮೂಲಕ ತನ್ನ ವಚನವನ್ನು ಪ್ರಸ್ತುತಪಡಿಸುತ್ತಾಳೆ. ಅವುಗಳಲ್ಲಿ ಕೆಲವು ಸರಳವಾಗಿ ಗ್ರಹಿಸಿ ಬಲ್ಲಂತೆ ಇರುತ್ತವೆ. ಮತ್ತೆ ಕೆಲವು ಗೂಢತರವಾಗಿರುತ್ತವೆ. ಅಂಥ ವಚನಗಳಲ್ಲಿ ಇದೂ ಒಂದು.ಮುಕ್ತಾಯಕ್ಕ ಆಗಿನ ಕಾಲಕ್ಕೇ ಶಿಷ್ಟವೆನಿಸುವ ಎಲ್ಲಾ ಶಾಸ್ತ್ರಕೃತಿಗಳು ವೇದ, ಪುರಾಣ ಆಗಮ ಮುಂತಾದವುಗಳ ಅಧ್ಯಯನ ಮಾಡಿದಂತೆ ತೋರುತ್ತದೆ ಅಥವಾ ಅವುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಂಡಿರಬೇಕು. ಈ ವಚನದಲ್ಲಿ ವೇದ ಶಾಸ್ತ್ರ, ಶ್ರುತಿ–ಸ್ಮೃತಿಗಳ ಬಗ್ಗೆ ಉಲ್ಲೇಖಿಸಿಸಿದ್ದಾಳೆ.ಅಲ್ಲದೆ, ಏಕತತ್ವದಿಂದಿಡಿದು ತ್ರಿತತ್ತ್ವ, ಪಂಚತತ್ತ್ವ, ಪಂಚ ವಿಂಶತಿತತ್ತ್ವ, ಷಟ್ತ್ರಿಂಶತ್ ತತ್ತ್ವದವರೆಗೆ ಹಾಗೆಯೇ ಶ್ರೀಗುರುತತ್ತ್ವ, ಪರತತ್ತ್ವಗಳನ್ನೂ ಉಲ್ಲೇಖಿಸಿ, ಅಷ್ಟಾದಶ ವಿದ್ಯಂಗಳು ಎಂದು ಹೆಸರಿಸಿ ವಚನಗಳನ್ನು ರಚಿಸುವ ಮೂಲಕ ಮೂಲಕ ಸಾಧಕಿಯ ನೆಲೆಯನ್ನು ಗುರ್ತಿಸಿಕೊಂಡಿರುತ್ತಾಳೆ.

ಈ ವಚನದ ವಿಶ್ಲೇಷಣೆ ಸಂದರ್ಭದಲ್ಲೇ ಅಕ್ಕಮಹಾದೇವಿಯವರ ವಚನವೊಂದು ನೆನಪಿಗೆ ಬರುತ್ತದೆ.

ವನವೆಲ್ಲಾ ನೀನೆ, ವನದೊಳಗಣ ದೇವಿತರುವೆಲ್ಲಾ ನೀನೆ,

ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ,

ಚೆನ್ನಮಲ್ಲಿಕಾರ್ಜುನಾ... [೧೦]

ಹೀಗೆ ಆ ವಚನ ಸಾಗುತ್ತದೆ.ಇಲ್ಲಿ ಅಕ್ಕ ತನ್ನ ಆರಾಧ್ಯದೈವ ಮಾನಸಿಕ ಪತಿಯೂ ಎಂದು ಸ್ವೀಕರಿಸಿರುವ ಚೆನ್ನಮಲ್ಲಿಕಾರ್ಜುನ ಶಿವನನ್ನು ವನ ತರುಲತೆಗಳಲೆಲ್ಲಾ ಕಂಡು ವಿಸ್ಮಿತಳಾಗಿರುವುದನ್ನು ಕಾಣಬಹುದು.ಆದರೆ, ಮುಕ್ತಾಯಕ್ಕ ಶಿವನನ್ನೂ ಮೀರಿ ತತ್ತ್ವ, ವಾದ, ವೇದ ಹೀಗೆ ಇತರೆ ಏನೆಲ್ಲಾ ಇರುವವೋ ಅವುಗಳೆಲ್ಲಾ ನನ್ನ ಅಜಗಣ್ಣ ತಂದೆಯೇ ಎಂದು ನಿರ್ಧರಿಸಿಬಿಡುತ್ತಾಳೆ.ಅಷ್ಟರ ಮಟ್ಟಿಗೆ ಮುಕ್ತಾಯಕ್ಕಳ ಜೀವನ ಪ್ರಕೃತಿಯಲ್ಲಿ ಅಜಗಣ್ಣ ಏನೆಲ್ಲವೂ ಆಗಿ ಆವರಿಸಿಕೊಂಡು ಬಿಟ್ಟಿರುವದನ್ನು ಕಾಣಬಹುದು. ಆದರೆ, ಇದು ಇತರ ಸಮಾಕಾಲೀನ ಶಿವಶರಣರ ವಸ್ತುನಿಷ್ಟ, ವೀರಶೈವನಿಷ್ಟ ಹಾದಿಯಂತಾಗಲಿಲ್ಲ. ಕ್ರಮೇಣ ಈ ಅತಿರೇಕ ಎನ್ನಬಹುದಾದ ಭಾವಪರವಶತೆಯ ಗುರುತತ್ತ್ವದ ಅನುಭಾವದಿಂದ ಹೊರಬಂದು ವಸ್ತುನಿಷ್ಟ ಅನುಭಾವದ ಕಡೆಗೆ ಮುಖಮಾಡಿ ತನ್ನ ವಚನಗಳ ಸಾಧಾರಣೀಕರಣದತ್ತ ಹೊರಳಿರುವುದನ್ನು ಇತರ ವಚನಗಳಿಂದ ತಿಳಿಯಬಹುದು.

ನಂತರದ ವಚನಗಳಲ್ಲಿ ಗುರುವಿನ ಸ್ಥಾನದ ಮಹತ್ವವನ್ನು ಕೆಳಗಿಳಿಸದಿದ್ದರೂ **"ತನ್ನತಾನರಿದವಂಗೆ ಅರಿವೇ ಗುರು"** ಎನ್ನುತ್ತಾ ಅರಿವು ಎನ್ನುವ ಅನುಭಾವ ಜನ್ಯ ಅನುಭಾವದ ಕಡೆಗೆ ಮುಕ್ತಾಯಕ್ಕ ಮುಖ ಮಾಡಿದ್ದಾಳೆ.ನಂತರದಲ್ಲೂ **"ಗುರುತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ"** ಎಂದು ಮತ್ತೆ ಅಜಗಣ್ಣನನ್ನು ಗುರು ಸ್ಥಾನದಿಂದಲೂ ಎತ್ತರಕ್ಕೆ ಕೊಂಡೊಯ್ದಿದ್ದಾಳೆ.

ಅಂಬರದಲಾಡುವ ತುಂಬಿಯ ಬಿಂಬದ ಕಂಬನಿಯೊಳಗಣ ರತ್ನದ

ಬಯಕೆಯಾದ್ಯಂತವನೇನೆಂಬೆನಯ್ಯಾ?

ವೇದ ಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಸಲರಿಯವು.

ನಾದವಲ್ಲ, ಸುನಾದದ ನಿಲವಲ್ಲ;

ಭೇದಿಸುವಡೆ ಅಗಮ್ಯ ನೋಡಾ!

ಸೊಲ್ಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು?

ಎಂತು ಮರೆವೆನಯ್ಯಾ ಎನ್ನ ಅಜಗಣ್ಣ ತಂದೆಯನು?[೧೧]

ಆಕಾಶದಲ್ಲಿ ಆಡುವ ದುಂಬಿಯ ಪ್ರತಿಬಿಂಬದ ಕಣ್ಣ ತೇವಾಂಶದಲ್ಲಿ ಕಾಣುವ ಮೌಲಿಕ ರತ್ನವನ್ನು ಬಯಸುವ ಆದಿ ಮತ್ತು ಅಂತ್ಯಗಳನ್ನು ಏನೆಂದು ಹೇಳಲಿ.ಪುರಾಣದ ವೇದ ಶಾಸ್ತ್ರ ಶ್ರುತಿ–ಸ್ಮೃತಿಗಳು ಸ್ತುತಿಸಲರಿಯವು.ಅಂದರೆ ಅವುಗಳ ಬಗ್ಗೆ ಸ್ತುತಿಸಲು ನಮಗೆ ತಿಳುವಳಿಕೆಯಿಲ್ಲ. ನಾದ ಮತ್ತು ಸುನಾದಗಳ ನಿಲುವೂ ನಮ್ಮಲ್ಲಿ ಇಲ್ಲ. ಅದನ್ನೇ ಒಳಹೊಕ್ಕು ಪರಿಶೀಲಿಸಲು ತುಂಬಾ ದುರ್ಗಮವಾಗಿರುವಂತೆ ಇದೆ.ಧ್ವನಿಯಿಲ್ಲದ ಶ್ರೇಷ್ಟವಲ್ಲದ ಹೆಚ್ಚುಗಾರಿಕೆಯನ್ನು ಏನೆಂದು ಹೇಳಲಿ ಹೇಗೆ ನಮ್ಮ ಅಜಗಣ್ಣ ತಂದೆಯನ್ನು ಮರೆಯಲಿ ಎಂದು ಮುಕ್ತಾಯಕ್ಕ ಮೇಲಿನ ವಚನದಲ್ಲಿ ಕೊಂಡಾಡಿದ್ದಾಳೆ.

ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು

ಶಿಶುಕಂಡ ಕನಸಿನಂತಿರಬೇಕಲ್ಲದೆ,

ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?

ಅರಿವರತು ಮರಹು ನಷ್ಟವಾಗಿ ಗುರುವ ತೋರಿದೆನೆಂಬರು.

ಇದಿರಿಂಗೆ ಕರುಳಕಲೆಯನರುಹುವ ಪರಿಯೆಂತು ಹೇಳಾ?

ಮನದ ಕೊನೆಯ ಮೊನೆಯ ಮೇಲಣ ಅರಿವಿನ ಕಣ್ಣಮುಂದೆ

ಸ್ವಯಂಪ್ರಕಾಶ ತೋರುತ್ತಿದ್ದಡೆ ತಾನಾಗಬಲ್ಲನೆ?

ನೆರೆಯರಿತು ಮರೆಯಬಲ್ಲಡೆ

ಎನ್ನ ಅಜಗಣ್ಣನಂತೆ ಶಬ್ದಮುಗ್ಧನಾಗಿರಬೇಕಲ್ಲದೆ,

ಶಬ್ದಸಂದಣಿಯ ಮಾತು ಸಯವಲ್ಲ ನೋಡಯ್ಯ.[(೧೨)]

ಆತ್ಮ ಮತ್ತು ಪರಮಾತ್ಮ (ಶಿವ) ಬೇರೆಯಲ್ಲ. ಎರಡೂ ಒಂದೇ ಎನ್ನುವ ಭಾವವನ್ನು ಮನಸ್ಸಿನಲ್ಲಿಯೇ ಪ್ರತಿಷ್ಠಾಪಿಸಿ ನಂತರ ಅವೆರಡನ್ನು ಬಿಟ್ಟೆನು ಎನ್ನುವುದು ಮುಗ್ಧ ಮಕ್ಕಳು ಕಾಣುವ ಕನಸಿನಂತೆ ಮುಗ್ಧವಾಗಿಯೇ ಅಥವಾ ಏನೂ ಅರಿಯದಂತಿರಬೇಕೆಂಬ ತತ್ತ್ವವನ್ನು ಮುಕ್ತಾಯಕ್ತ ಈ ವಚನದಲ್ಲಿ ಸ್ಮರಿಸಿಕೊಂಡಿದ್ದಾಳೆ.ಶಿವ ಮತ್ತು ಭಕ್ತ ಅಥವಾ ಶರಣ ಭಿನ್ನವಾಗಿದ್ದು ಭಕ್ತ ಶಿವನನ್ನು ಅರ್ಥೈಸಿಕೊಳ್ಳುವತನಕ ಶಿವನೇ ಬೇರೆ, ಭಕ್ತ/ಶರಣನೇ ಬೇರೆ ಎಂದು ಮುಕ್ತಾಯಕ್ಕ ಹೇಳಿದ್ದಾಳೆ.

ರಾಮನಾಥಾ ಅಂಕಿತವನ್ನು ಇಟ್ಟುಕೊಂಡು ವಚನ ರಚಿಸಿರುವ ಹಿರಿಯ ಶರಣ 'ಜೇಡರ ದಾಸಿಮಯ್ಯ'ನವರು ಅವರ ಒಂದು ವಚನದಲ್ಲಿ **"ನಿಮ್ಮ ಶರಣ ಸೂಳ್ನುಡಿಯನ್ನೊಂದರೆಗಳಿಯಿತ್ತಡೆ ನಿಮ್ಮನ್ನಿತ್ತೆ ಕಾಣಾ ರಾಮನಾಥಾ"** ಎಂದು

ಹೇಳುತ್ತಾ ಶರಣರ ಅನುಭಾವದ ನುಡಿಗಳ ಮಹತ್ತರ ಭೌತಿಕ ಸಂಪತ್ತಿನ ವಸ್ತುಗಳಿಗಿಂತಲೂ ಅತಿ ಉನ್ನತವಾದದ್ದು ಎನ್ನುತ್ತಾರೆ.ಅಂತೆಯೇ ಈ ವಚನದಲ್ಲೂ ಮುಕ್ತಾಯಕ್ಕ **"ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?"**ಎಂದು ಪ್ರಶ್ನಿಸುತ್ತಾರೆ.ಅದ್ವೈತ ತತ್ತ್ವದ ಮಹತ್ವವನ್ನು ಅರಿಯುವ ಮೊದಲು ದ್ವೈತ ಕಲ್ಪನೆಯನ್ನೇ ನೆಚ್ಚಿಕೊಳ್ಳುವ ಪ್ರವೃತ್ತಿ ಸಮಾಜದಲ್ಲಿ ಬೆಳೆದಿತ್ತು.ನಂತರ ಅನುಭಾವದಲ್ಲಿ ಮಿಂದೆದ್ದ ಮೇಲೆ ಹಾಗೂ ಐಕ್ಯತಾಭಾವ ಮೂಡಿದ ಮೇಲೆ ಅದ್ವೈತದ ಭಾವದ ಮಹತ್ವ ಅರಿವಾಗ ತೊಡಗಿತ್ತು ಅದಕ್ಕೇ ಮುಕ್ತಾಯಕ್ಕ ಭಿನ್ನವಲ್ಲದೇನು" ಎನ್ನುವ ಪ್ರಶ್ನೆ ಮಾಡಿದ್ದಾಳೆ.ಅರಿವನ್ನು ಅರ್ಥೈಸಿ, ನಂತರ ಮರೆತುಬಿಟ್ಟು ಗುರುವನ್ನು ತೋರಿದ್ದೇವೆ ಎನ್ನುತ್ತಾರೆ. ಎದುರಿಗೆ ಇದ್ದರೂ ಕರುಳು ಅಥವಾ ಮನಸ್ಸು ಅರ್ಥ ಮಾಡಿಕೊಳ್ಳುವ ರೀತಿಯನ್ನು ಏನೆಂದು ಹೇಳು ಎಂದು ಪ್ರಶ್ನಿಸುವ ಮುಕ್ತಾಯಕ್ಕ ಮನಸ್ಸಿನ ಕಡೆತುದಿಯ ಮೇಲಿನ ಅರಿವು ತಮ್ಮ ತಮ್ಮ ಕಣ್ಣ ಮುಂದೆಯೇ ಸಾಕ್ಷೀಭೂತವಾಗಿ ತೋರುತ್ತಿದ್ದರೆ ಅರಿವು ತಾವೇ ಆಗಲು ಸಾಧ್ಯವೇ ಎಂದು ಪ್ರಶ್ನಿಸಿದ ಮುಕ್ತಾಯಕ್ಕ ನೆರೆಯನ್ನು ಅರ್ಥಮಾಡಿಕೊಂಡು, ಮರೆತು ಇರುವ ಅಜಗಣ್ಣ ಯಾವಾಗಲೂ ನಿಶ್ಯಬ್ದ ರೂಪದಲ್ಲಿಯೇ ಶಬ್ದರೂಪವನ್ನು ಕಾಣುವ ಮುಗ್ಧನಾಗಿರುವುದು ಉಚಿತ ಎನ್ನುವ ಮುಕ್ತಾಯಕ್ಕ ಮೌನಕ್ಕೆ ಮಾತು ಎಂದೂ ಸಮನಾಗುವುದಿಲ್ಲ ಎನ್ನುವ ದಿವ್ಯ ಸತ್ಯವನ್ನು ತಿಳಿಸಿದ್ದಾಳೆ.

ಆಡುಮಾತಿನಲ್ಲೂ ಸಹಜವಾಗಿ **"ಮಾತು ಬೆಳ್ಳಿ, ಮೌನ ಬಂಗಾರ"** ಎನ್ನುವ ಗಾದೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.ಮಾತಿಗೆ ಒಂದು ಅಥವಾ ಎರಡು ಅರ್ಥಗಳಿರುತ್ತವೆ. ಆದರೆ, ಮೌನಕ್ಕೆ ನೂರಾರು ಅರ್ಥಗಳಿರುತ್ತವೆ. ಆದ್ದರಿಂದ, ಮಾತಿಗಿಂತ ಮೌನಕ್ಕೆ ಹೆಚ್ಚುಬೆಲೆ ನೀಡುವ ಅಜಗಣ್ಣನನ್ನು ಅಣ್ಣ, ತಂದೆ,

ಗುರು ಎಲ್ಲ ರೂಪಗಳಲ್ಲೂ ಮುಕ್ತಾಯಕ್ಕ ಕಂಡಿರುವುದು ಇಂಥ ಸಾರ್ಥಕ್ಯ ಗುಣಗಳಿಂದಲೇ ಇರಬೇಕು.

ಆರೆಂದು ಕುರುಹ ಬೆಸಗೊಳಲು, ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ;
ಭಾವದೊಳಗೆ ಭ್ರಮೆಯಿಲ್ಲ.
ಕರೆದು ಬೆಸಗೊಂಬಡೆ ಕುರುಹಿಲ್ಲ.
ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು
ನಿರ್ಬುದ್ಧಿಯಾದವಳನೇಂಬೆನಣ್ಣಾ?
ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯಾ[೧೩].

ಭೂಮಿಯ ಮೇಲೆ ಹುಟ್ಟಿರುವ ಸಕಲ ಚರಾಚರ ಜೀವರಾಶಿಗಳಿಗೆ ಇಲ್ಲಿ ಪ್ರತಿಯೊಂದೂ ಒಂದಕ್ಕೊಂದು ಒಬ್ಬರಿಗೊಬ್ಬರ ಸಂಬಂಧವಿರುವುದನ್ನು ಕಾಣಬಹುದು.ಆದರೆ, ಭಗವಂತ ಅಯೋನಿಜನಾದ್ದರಿಂದ ಭೂಮಿಯ ಯಾವ ಜೀವರಾಶಿಯ ಜೊತೆಗೆ ಸಂಬಂಧವಿಲ್ಲ ಅಂತೆಯೇ ಮುಕ್ತಾಯಕ್ಕ ಭೂಮಿಯ ಯಾವ ಜೀವದಿಂದಲೂ ನಾನು ಜನಿಸಿಲ್ಲ ಅಯೋನಿಯಲ್ಲಿ ಬಂದೆ ಎಂದು ಹೇಳುತ್ತಾ ಭೂಮಿಯ ಮೇಲೆ ನಾನು ಯಾರು ಎಂದು ಹೇಗೆ ಹೇಳಿ ನಾನು ಪರಿಚಯಿಸಿಕೊಳ್ಳಲಿ ಎನ್ನುತ್ತಾಳೆ.

ನನ್ನ ದೇಹದಲ್ಲಿ ಮಾಯೆ ಎಂಬುದು ಇಲ್ಲ. ನನ್ನ ಮನಸ್ಸಿನಲ್ಲಿ ಭ್ರಮೆಯನ್ನೇನೂ ಇಟ್ಟುಕೊಂಡಿಲ್ಲ ಯಾರಾದರು ಕರೆದು ಕೇಳಿದರೆ ಹೇಳಲು

ಯಾವುದೇ ಪುರಾವೆಗಳಿಲ್ಲ. ಬುದ್ಧಿಯ ಮಿತಿಗೆ ನಾನು ಸಿಲುಕಿದವಳಲ್ಲ ದೇಹ ಮತ್ತು ಪ್ರಾಣಗಳುಳಿದು ಬೆಳಗುವ ಜ್ಯೋತಿಯಂತಿರುವ ನನ್ನ ಅಜಗಣ್ಣ ತಂದೆಯ ಬೆನ್ನಬಳಿಯವಳಾಗಿ ಇದ್ದೇನೆ ಎನ್ನುತ್ತಾಳೆ.ಬೆನ್ನಬಳಿಯವಳು ಎಂದರೆ ತಂಗಿಯಾಗಿ ಎಂಬರ್ಥವಾಗುವುದರಿಂದ ಅಜಗಣ್ಣನ ಸೋದರಿಯಾಗಿ ನಾನು ಇದ್ದೇನೆ ಎಂದು ಪ್ರತಿಪಾದಿಸುತ್ತಾಳೆ.

ಉಟ್ಟುದ ತೊರೆದವಂಗೆ ಊರೇನು, ಕಾಡೇನು?
ನಷ್ಟಸಂತಾನಕ್ಕೆ ಕುಲವೇನು, ಛಲವೇನು?
ಹುಟ್ಟುಗೆಟ್ಟಾತಂಗೆ ಪುಣ್ಯವೇನು, ಪಾಪವೇನು?
ಅದು ಕೆಟ್ಟದು ಕೆಟ್ಟದು.
ನಿನ್ನ ನೀನರಿಯದೆ ಬಟ್ಟಬಯಲಲ್ಲಿ ಬಿದ್ದೆಯಲ್ಲಾ ಅಜಗಣ್ಣತಂದೆ! [೧೪]

ಮೇಲಿನ ವಚನದಂತೆಯೇ ಈ ವಚನವೂ ಸಂಬಂಧಗಳ ಬಗೆಗಿನ ಮೌಲ್ಯವನ್ನು ಹೇಳುವ ಪ್ರಯತ್ನ ಮಾಡಿದೆ.ತ್ಯಾಗ ಗುಣಗಳಿಗೆ ಒಟ್ಟಾರೆ ಶಿವ ಶರಣರು ಮುಖ್ಯರಾಗುತ್ತಾರೆ. ಕೊನೆಗೆ ಪ್ರಾಣತ್ಯಾಗದಲ್ಲೂ ಅವರು ಹಿಂಜರಿಯುವುದಿಲ್ಲ. ಶಿವಶರಣರು **"ಮರಣವೇ ಮಹಾನವಮಿಯೆಮಗೆ"** ಎಂದ ಹೇಳಿಕೆಯಲ್ಲೇ ಸಾವಿನ ಮಹತ್ವ ಹೇಳಿದ್ದಾರೆ.ಮೋಕ್ಷ ಮಾರ್ಗದ ಮೊದಲೆಜ್ಜೆಯಾಗಿ ತ್ಯಾಗ ಮಾಡುವ ಗುಣವುಳ್ಳವರಾಗಿರಬೇಕು.

ಐಹಿಕ ಸುಖ-ಭೋಗಗಳನ್ನು ತ್ಯಾಗ ಮಾಡುವುದು ಸ್ವಂತ ಊರು ತೊರೆದ ಮೇಲೆ ಇತರ ಊರು ಕಾಡುಗಳ ಹಂಗೇ ಇರದು.ಹಾಗೆಯೇ ನಶಿಸಿದ ಸಂತಾನಕ್ಕೆ ಯಾವ ಜಾತಿಯಾದರೇನು?ಸತ್ತಮೇಲೆ ಎಲ್ಲರದು ಮಣ್ಣಿನ ಜಾತಿಯಾಗುತ್ತದೆ.ಅಂಥ

ಸಂಬಂಧಗಳನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ಇರಬಹುದಾದ ಫಲವಾವುದು?ಎಂದು ಮುಕ್ತಾಯಕ್ಕ ಪ್ರಶ್ನಿಸಿದ್ದಾಳೆ. ಹುಟ್ಟು ಸಾರ್ಥಕವಾಗಬೇಕಿರುವುದು ಬದುಕಿ ಸಾಧಿಸಲಿಕ್ಕಾಗಿ ಹುಟ್ಟುಗೆಟ್ಟವನಿಗೆ ಪಾಪ-ಪುಣ್ಯಗಳ ಬಗೆಗೆ ವ್ಯತ್ಯಾಸವೇ ತಿಳಿಯದು ಕೆಟ್ಟ ಬದುಕು ಸಾವಿನಲ್ಲಿ ಅಂತ್ಯವಾಗಬಹುದು.ಅದಕ್ಕಾಗಿ ಬದುಕಲಾರದೆ, ನಿನ್ನನ್ನು ನೀನು ಅರ್ಥ ಮಾಡಿಕೊಳ್ಳದೆ ಬಯಲಾಗಿ ಹೋದೆಯಲ್ಲಾ ಎಂದು ಅಜಗಣ್ಣನನ್ನು ಮುಕ್ತಾಯಕ್ಕ ಈ ವಚನದ ಮೂಲಕ ಐಕ್ಯ ಸ್ಥಲದ ನೆಲೆಯ ಮಹತ್ವವನ್ನು ಕಂಡುಕೊಳ್ಳುತ್ತಾಳೆ.

ಅಡಿ ಟಿಪ್ಪಣಿ

1) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 325, ವಚನಸಂಖ್ಯೆ: 1110.
2) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 328, ವಚನಸಂಖ್ಯೆ: 1108.
3) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 325, ವಚನಸಂಖ್ಯೆ: 1099.
4) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 334, ವಚನಸಂಖ್ಯೆ: 1132.
5) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 330, ವಚನಸಂಖ್ಯೆ: 1115.
6) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 334, ವಚನಸಂಖ್ಯೆ: 1128.

7) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 332, ವಚನಸಂಖ್ಯೆ: 1121.

8) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 332, ವಚನಸಂಖ್ಯೆ: 1122.

9) ಶಿವಶರಣೆಯರ ವಚನ ಸಂಪುಟ 5, ಸಂಪಾದಕ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಪುಟ ಸಂಖ್ಯೆ – 327, ವಚನಸಂಖ್ಯೆ: 1107.

10) ಶಿವಶರಣೆಯ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ 1993, ಬೆಂಗಳೂರು, ಪುಟ ಸಂಖ್ಯೆ 108, ವಚನಸಂಖ್ಯೆ: 365,

11) ಶಿವಶರಣೆಯ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ 1993, ಬೆಂಗಳೂರು, ಪುಟ ಸಂಖ್ಯೆ 325, ವಚನಸಂಖ್ಯೆ: 1098,

12) ಶಿವಶರಣೆಯ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ 1993, ಬೆಂಗಳೂರು, ಪುಟ ಸಂಖ್ಯೆ 326, ವಚನಸಂಖ್ಯೆ: 1102,

13) ಶಿವಶರಣೆಯ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ 1993, ಬೆಂಗಳೂರು, ಪುಟ ಸಂಖ್ಯೆ 326, ವಚನಸಂಖ್ಯೆ: 1104,

14) ಶಿವಶರಣೆಯ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ 1993, ಬೆಂಗಳೂರು, ಪುಟ ಸಂಖ್ಯೆ 327, ವಚನಸಂಖ್ಯೆ: 1105,

ಸಮಾರೋಪ

<u>ಸಮಾರೋಪ</u>

ಮುಕ್ತಾಯಕ್ಕಳ ವಚನಗಳು ಅಧ್ಯಾತ್ಮಿಕ, ಧಾರ್ಮಿಕ, ಕಾವ್ಯಾತ್ಮಕ, ಮನೋವಿಶ್ಲೇಷಣಾತ್ಮಕ, ಶೈಕ್ಷಣಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಮೂಹಿಕ, ಅನುಭಾವಿಕ, ಮಾನವಿಕ ಎಂದು ವಿವಿಧತೆಯಲ್ಲಿ ಐಕ್ಯತಾಭಾವ ಕಂಡುಬರುತ್ತದೆ.ಹಾಗೆಯೇ ಐಕ್ಯತಾಭಾವನೆಯಿಂದ ವಿವಿಧತೆಯ ಕುರುಹುಗಳು ಕಂಡುಬರುತ್ತವೆ.

ಶತಶತಮಾನಗಳಿಂದ ದಮನಕ್ಕೊಳಗಾದ ವರ್ಗಗಳಲ್ಲಿ ಮಹಿಳಾ ವರ್ಗವೂ ಪ್ರಮುಖವಾಗಿತ್ತು. ವೇದಗಳ ಕಾಲ ಮತ್ತು ವೇದೋತ್ತರ ಕಾಲಘಟ್ಟಗಳಲ್ಲೂ ಮಹಿಳೆಗೆ ಸ್ವಾಯತ್ತ ಸ್ಥಾನಮಾನಗಳು ದೊರೆತಿರಲಿಲ್ಲ. **"ನಸ್ತ್ರೀ ಸ್ವಾತಂತ್ರ್ಯಮರ್ಹತಿ"** ಅಂದರೆ ಸ್ತ್ರೀಗೆ ಸ್ವಾತಂತ್ರ್ಯವನ್ನು ಅನುಭವಿಸುವ ಅರ್ಹತೆಯಿಲ್ಲ ಎಂದು ಅವಳ ಮೂಲೋಚ್ಚಾಟನೆ ಮಾಡಲಾಗಿತ್ತು.

ಆದರೆ ಹನ್ನೆರಡನೇ ಶತಮಾನದ ಶೈವ ಪರಂಪರೆ **"ಸಮಾಜೋಧಾರ್ಮಿಕ ಗುರು"** ಬಸವಣ್ಣನಂತಹ ವರ ಪ್ರೇರಣೆ ಮತ್ತು ಪ್ರಭಾವಗಳಿಂದಾಗಿ ಮಹಿಳಾ ಸ್ಥಾನ–ಮಾನಗಳು ಪುರುಷ ಸಮಾನವಾಗಿ ನಿಲ್ಲಲು ಕಾರಣವಾದವು.ಶೈವ ಪರಂಪರೆ ವೀರಶೈವ ಪರಂಪರೆಯಾಗಿ ಪರಿವರ್ತಿತವಾಗುತ್ತಿದ್ದಂತೆ ಅಸಮಾನತೆಯ ತಕ್ಕಡಿಯಲ್ಲಿನ ಪುರುಷ ಮತ್ತು ಮಹಿಳಾ ವ್ಯಕ್ತಿತ್ವ ತೂಕಗಳೂ ಸಮಾನವಾಗಿ ತೂಗಲಾರಂಭಿಸಿದವು.ಇದು ಕನ್ನಡ ನಾಡಿನ ಮಟ್ಟಿಗೆ ಅಷ್ಟೇ ಅಲ್ಲ ಇಡೀ ವಿಶ್ವದ ಮಹಿಳಾಲೋಕದ ಮಟ್ಟಿಗೆ ಅದ್ಭುತವೆನಿಸತೊಡಗಿತು.

ಮಹಾನುಭಾವ ಬಸವಣ್ಣನವರ ಅನೇಕ ಕ್ರಾಂತಿಗಳ ಫಲದಿಂದಾದ ಸತ್ಪರಿಣಾಮವಾಗಿ ಸ್ತ್ರೀಜಾಗೃತಿಯು ಮೊಳಗಿತು.ಅನೇಕ ಸ್ತ್ರೀರತ್ನಗಳಲ್ಲಿ ಸಾಮಾಜಿಕ,

ಮಾನಸಿಕ, ಶೋಧನಾತ್ಮಕ ಕೆಲಸ ಮಾಡತೊಡಗಿತು.ಇದಕ್ಕೆ ನೇರವಾಗಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಸತ್ಯಕ್ಕ, ಅಮುಗೆರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ನಮ್ಮ ಕಣ್ಣೆದುರಿನ ಸಾಧಕಿಯರಾಗಿ ಸಾಕ್ಷಿಗಲ್ಲುಗಳಾಗಿ ಸಮಾಜದಲ್ಲಿ ಕಂಗೊಳಿಸುತ್ತಿದ್ದಾರೆ.

ವಿದ್ಯಾಪರಿಣತರಾಗಿ ನಂತರ ಅನುಭವದ ಸಾರವನ್ನು ಕೃತಿಗಳಲ್ಲಿ ಅಥವಾ ವಚನಗಳಲ್ಲಿ ಇಳಿಸುವುದು ಅತಿಶಯವಾದುದೇನೂ ಅಲ್ಲ. ಆದರೆ, ದನಗಾಹಿಯಾಗಿ ಅನಕ್ಷರ ಕುಕ್ಷಿಯಾಗಿ ಜೀವನ ಸಾಗಿಸುತ್ತಿದ್ದ ಮುಗ್ಧ ಜೀವಿ ಮುಕ್ತಾಯಕ್ತ ಕಾಲದ ಪ್ರತಿಭೆಯಿಂದ ಬಂದ ಕನಿಷ್ಟ ಅಕ್ಷರ ಜ್ಞಾನವನ್ನೇ ತನ್ನ ಜೀವಿತ ಕಾಲದ ಅನುಭವಗಳನ್ನೇ ಅನುಭಾವವಾಗಿಸುವ ಸಾಮರ್ಥ್ಯ ಪಡೆದದ್ದೇ ಒಂದು ಅಚ್ಚರಿಯಾಗಿದೆ. ತನ್ನ ಯೋಚನಾಶಕ್ತಿಗೆ ಮೂರ್ತರೂಪ ನೀಡಲು ಅಲ್ಲದೆ ತನ್ನ ಅಧ್ಯಾತ್ಮಿಕ ಪರಮ ಸಾಧನೆಗಳಿಗಾಗಿ ಅಜಗಣ್ಣನನ್ನೇ ತನ್ನ ಅಣ್ಣ–ಗುರುವೆಂದು ಪರಿಭಾವಿಸಿ ಅವನನ್ನೇ ತನ್ನ ವಚನಗಳ ಅಂಕಿತವಾಗಿಸಿಕೊಂಡು ಮೂರ್ತ–ಅಮೂರ್ತಗಳ ಸಂಗಮವಾಗಿಸಿದ್ದಾಳೆ.

ಮೂಲತಃ ಮುಗ್ಧ ದನಗಾಹಿಯಾದರೂ ಪರಮಾತ್ಮನ ಸಾಕ್ಷಾತ್ಕಾರ ಕಾಯಕದಿಂದ ಕಂಡುಕೊಂಡ ಸಾರ್ಥಕ್ಯಭಾವ ಶ್ರಮ ಜೀವನದ ಮಹತ್ತುಗಳನ್ನು ಮೂರ್ತ ವಚನಗಳಾಗಿಸುವಲ್ಲಿ ಯಶಸ್ವಿಯಾಗಿ ಇತರ ಮಹಿಳಾ ವಚನಕಾರ್ತಿಯರ ಸಮಾನವಾಗಿ ತನ್ನ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದಾಳೆ.

ಅಧ್ಯಾತ್ಮ, ಪಾರಮಾರ್ಥಿಕತೆ, ದಾರ್ಶನಿಕತೆ, ತಾತ್ವಿಕತೆ ದೃಷ್ಟಾಂತಗಳನ್ನು ತನ್ನ ವಚನಗಳ ಮೂಲಕ ಪ್ರತಿಪಾದಿಸಿದ್ದುದ್ದರ ಆಧಾರದ ಮೇಲೆ ಅವಲೋಕನ ಮಾಡಿದಾಗ ಅನುಭವಕ್ಕೂ ಮೀರಿದ ಅನುಭಾವ ಇವಳಲ್ಲಿರುವುದನ್ನು ಗಮನಿಸಬಹುದು.

ಸಮಾಜ ವಿದೂರಳಾಗಿದ್ದ ಸ್ತ್ರೀಯೂ ಸಮಾಜೋದ್ಧಾರದ ಕಲ್ಪನೆಗಳ ಮೂಲಕ ಸಮಾಜದ ಮುಖ್ಯವಾಹಿನಿಗೆ ಬಂದ ದಾರಿಯೇನು ಸುಗಮವಾಗಿರದು. ಸಾಮಾನ್ಯ ಕುಟುಂಬದ ತಂದೆ-ತಾಯಿಗಳ ಸಂಗಮದಿಂದ ತಾನು ಹುಟ್ಟಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ

ಆರೆಂದು ಕುರುಹ ಬೆಸಗೊಳಲು, ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ;
ಭಾವದೊಳಗೆ ಭ್ರಮೆಯಿಲ್ಲ.
ಕರೆದು ಬೆಸಗೊಂಬಡೆ ಕುರುಹಿಲ್ಲ.
ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು
ನಿರ್ಬುದ್ಧಿಯಾದವಳನೇಂಬೆನಣ್ಣಾ?
ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯಾ.

"ಒಬ್ಬರಿಗೂ ಹುಟ್ಟದೆ ಅಯೋನಿಯಲ್ಲಿ ಬಂದು" ಎಂಬ ಹೇಳಿಕೆಯ ಮೂಲಕ ಅಯೋನಿಜನಾದ ಶಿವನಂತೆ ತಾನೂ ಮನುಷ್ಯ ಸೃಷ್ಟಿಯಲ್ಲ ಎಂದು ಸಮರ್ಥಿಸಿಕೊಂಡಿದ್ದಾಳಲ್ಲದೆ ಅವಳ ಸಂಬಂಧಿಕನಾಗಿ/ಅಣ್ಣನಾಗಿ **"ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯ"** ಎಂದು ಅಜಗಣ್ಣನನ್ನೇ ಸ್ವೀಕರಿಸುತ್ತಾಳೆ.

ಒಂದೆಡೆ ಸಮಕಾಲೀನನಾದ ಶೂನ್ಯಸಿಂಹಾಸನಧೀಶನಾದ ದ್ವಿಮಣಿ ಅಲ್ಲಮಪ್ರಭು ಪ್ರತಿಯೊಬ್ಬ ಶಿವಶರಣರನ್ನು ಅವರ ವಚನಗಳನ್ನೂ ಅವಲೋಕಿಸಿ "ಅನುಭವ ಮಂಟಪದ" ಸದಸ್ಯರಾಗಿಸುವ ಸಂದರ್ಭದಲ್ಲಿ ಮೊದಲಿಗೆ ಆಯ್ದುಕೊಂಡದ್ದು ಹಾಗೂ ಚರ್ಚಿಸಿದ್ದು ಮುಕ್ತಾಯಕ್ಕಳಲ್ಲಿ ಎಂದರೆ

ಶಿವಶರಣರಲ್ಲಿ/ವಚನಕಾರರಲ್ಲಿ ಇವಳ ಸ್ಥಾನ–ಮಾನದ ಮಹತ್ವವನ್ನು ಅರಿಯಬಹುದು.

ಇವಳ ವಚನಗಳ ಗೂಢತೆ / ಅತೀಂದ್ರಿಯತೆಗೆ ಕಾರಣ ಇವಳ ಅಧ್ಯಾತ್ಮ ಸಾಧನೆಗಾಗಿ ಬಸವಣ್ಣನವರ **"ಅಂಗೈಯೊಳಗಣ ಲಿಂಗ"**ದ ಇಷ್ಟ ಲಿಂಗಾರ್ಚನೆ ಮತ್ತು ಶಿವಯೋಗದ ಮಾರ್ಗವನ್ನು ಅನುಸರಿಸಿರುವುದು ವೇದ್ಯವಾಗುತ್ತದೆ.ಕೆಲವೊಮ್ಮೆ ಅವಳಿಗೆ ಅವಳು ಅರ್ಥವಾಗದಷ್ಟು ಮುಗ್ಧತೆ ಕಂಡುಬರುತ್ತದೆ.**"ಕತ್ತಲು ಬೆಳಕು ಕಾಂಬುವ ಸಂದೇಹಿ ನಾನೊಬ್ಬಳು"** ಎನ್ನುವ ಮೂಲಕ ತನ್ನ ಗೂಢತನವನ್ನು ಪ್ರಚುರಪಡಿಸಿದ್ದಾಳೆ.ಇದರಿಂದಾಗಿ ಮುಕ್ತಾಯಕ್ಕ ಆಧ್ಯಾತ್ಮಿಕವಾಗಿ ಉಚ್ಛ ಸ್ಥಾನದಲ್ಲಿದ್ದಾಳೆ.

ಪ್ರಜ್ಞಾತೀತವಾದ ಶಕ್ತಿಗಳಲ್ಲಿ ನಂಬಿಕೆ ಇರಿಸಿಕೊಂಡಿರುವ ಮುಕ್ತಾಯಕ್ಕ ಭೌತಿಕ ಪ್ರಜ್ಞೆಗೆ ಮಹತ್ವ ನೀಡಲಿಲ್ಲ. ಸಾಮಾಜಿಕ ಪಿಡುಗುಗಳಾದ ಕಂದಾಚಾರ, ಮೂಢನಂಬಿಕೆ ಅಂಧಶ್ರದ್ಧೆಗಳ ಕುಂದುಗಳನ್ನು ತೊಲಗಿಸಿ ವ್ಯಕ್ತಿ ಸ್ವಾತಂತ್ರ್ಯದ ಸ್ವಾಭಿಮಾನದ ನಿರವಲಂಬನಾ ಜೀವನದ ಮಹತ್ತುಗಳನ್ನು ತನ್ನ ವಚನಗಳಲ್ಲಿ ಪ್ರತಿಬಿಂಬಿಸಿದ್ದಾರೆ.ಇದರಿಂದಾಗಿ ಹನ್ನೆರಡನೇ ಶತಮಾನದಲ್ಲೇ ವೈಚಾರಿಕತೆಯ ಬೀಜವನ್ನು ಬಿತ್ತಿದ ವರ ಸಾಲಿಗೆ ಮುಕ್ತಾಯಕ್ಕಳೂ ಸೇರುತ್ತಾಳೆ.

ಪ್ರಾಣಿಗಿಂತ ಮನುಷ್ಯ ಭಿನ್ನವಾಗಿರುವುದೇ ಆತನ ಆಲೋಚನಾಶಕ್ತಿ ಮತ್ತು ಭಾವನಾತ್ಮಕ ಶಬ್ಧ ಭಂಡಾರಗಳ ಹೊರಹಾಕುವಿಕೆಯಿಂದ ತಾನು ತನ್ನ ಅಸ್ತಿತ್ವ ಕಂಡುಕೊಳ್ಳುವುದೇ ಪ್ರಜ್ಞಾಶಕ್ತಿ ಅಂದರೆ ಜಗತ್ತಿನಲ್ಲಿ ತನ್ನ ಇರುವಿಕೆ, ಭಾಗವಹಿಸುವಿಕೆಗಳ ಮೂಲಕ ದೃಢವಾದ ಅಸ್ತಿತ್ವವನ್ನು ರೂಢಿಸಿಕೊಂಡು ಸಮಾಜದಲ್ಲಿ ತನ್ನದೇ ಆದ ಏಕೈಕ ವ್ಯಕ್ತಿತ್ವ ರೂಪಿಸಿಕೊಳ್ಳಬಲ್ಲ ಸಾಮರ್ಥ್ಯ

ಮನುಷ್ಯನಿಗೆ ಎನ್ನುವುದನ್ನು ಮುಕ್ತಾಯಕ್ಕ ತನ್ನ ವಚನಗಳ ಮೂಲಕ ಪ್ರತಿಪಾದಿಸಿದ್ದಾಳೆ.

ಈ ಪ್ರಜ್ಞೆಯಿಲ್ಲದ ಶೂನ್ಯತ್ವ ವ್ಯಕ್ತಿತ್ವವಿಲ್ಲದವರು ಅನಾಥ ಪ್ರಜ್ಞೆಯನ್ನು ಅನುಭವಿಸುವಂತಾಗುತ್ತದೆ.ಅಲ್ಲದೆ **'ಎಲ್ಲರೊಳಗೊಂದಾಗಿ'** ಸಮಾಜದಲ್ಲಿ ತಮ್ಮತನದ ಅಸ್ತಿತ್ವ ರೂಪಿಸಿಕೊಳ್ಳಲಾರದವರಾಗುತ್ತಾರೆ ಎಂಬ ವಾದದ ಮೂಲಕ ಮುಕ್ತಾಯಕ್ಕ ತಿಳಿಸಿ ಅದನ್ನು ವಚನ ರಚನೆಗಳ ಮೂಲಕ ಸಮಾಜಕ್ಕೆ ತಮ್ಮ ವ್ಯಕ್ತಿತ್ವದ ಪರಿಚಯ ಮಾಡಿಕೊಡಬೇಕೆನ್ನುತ್ತಾಳೆ.

ಐಹಿಕದ ನಶ್ವರದ ಬಗೆಗೂ ಮುಕ್ತಾಯಕ್ಕಳು ಮುಕ್ತವಾಗಿ ತಿಳಿಸುತ್ತಾ ಸ್ತ್ರೀಕುಟುಂಬದ ಒಂದು ಭಾಗವಾಗದೆ, ಆ ಕುಟುಂಬದ ಅಸ್ತಿತ್ವದಲ್ಲಿ ತನ್ನ ಅಸ್ತಿತ್ವವನ್ನು ಗುರ್ತಿಸಲಾಗದೆ **"ಉರಿಯೊಳಡಗಿದ ಕರ್ಪೂರದಂತೆ"** ಎಂದು ಹೇಳಿ ತನ್ನ ಅಸ್ತಿತ್ವವಿಲ್ಲದಂತಾಗಿರುವ ಸ್ಥಿತಿಯನ್ನು ಸ್ಮರಿಸಿ **"ಅಂಬರದಲಾಡುವ ತುಂಬಿಯ ಬಿಂಬದ ಕಂಬನಿಯೊಳಗಣ ರತ್ನದ ಬಯಕೆ"** ಎಂಬ ಅಸದೃಶ ದೃಷ್ಟಾಂತವನ್ನು ತನ್ನ ವಚನದಲ್ಲಿ ಮುಕ್ತಾಯಕ್ಕ ಬಳಸುವ ಉದಾಹರಣೆಗಳು ಆಗಿನ ಸಮಾಜದ ಹೆಣ್ಣಿನ ಸ್ಥಿತಿ-ಗತಿಗಳ ಬಗೆಗೆ ಪ್ರತಿಕ್ರಿಯಿಸಿದ್ದಾಳೆ.

ಮುಕ್ತಾಯಕ್ಕಳ ವಚನಗಳು ಅಧ್ಯಾತ್ಮಿಕ, ಧಾರ್ಮಿಕ, ಕಾವ್ಯಾತ್ಮಕ, ಮನೋವಿಶ್ಲೇಷಣಾತ್ಮಕ, ಶೈಕ್ಷಣಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಮೂಹಿಕ, ಅನುಭಾವಿಕ, ಮಾನವಿಕ ಎಂದು ವಿವಿಧತೆಯಲ್ಲಿ ಐಕ್ಯತಾಭಾವ ಕಂಡುಬರುತ್ತದೆ.ಹಾಗೆಯೇ ಐಕ್ಯತಾಭಾವನೆಯಿಂದ ವಿವಿಧತೆಯ ಕುರುಹುಗಳು ಕಂಡುಬರುತ್ತವೆ.

ಸ್ತ್ರೀಯನ್ನೂ ಶೂದ್ರವರ್ಗಕ್ಕೆ ಸೇರಿಸಿ ಹೆಣ್ಣು, ಹೊನ್ನು, ಮಣ್ಣು ಎಂಬ ಭೋಗವಸ್ತುಗಳ ಪಟ್ಟಿಗೆ ಸೇರಿಸಿಬಿಡುವ ಪುರುಷ ಪ್ರಧಾನ ಸಮಾಜದ ನಿರ್ಬಂಧಿತ ವ್ಯವಸ್ಥೆಯಲ್ಲಿದ್ದುಕೊಂಡೇ ತನ್ನ ಕರ್ತೃತ್ವಶಕ್ತಿ ಮತ್ತು ಕನಿಷ್ಟ ಅಕ್ಷರಜ್ಞಾನ ಹಾಗೂ ಗರಿಷ್ಠ ಅನುಭಾವ ಜ್ಞಾನದ ಮಹಿಮೆಯಿಂದಾಗಿ ಇತ್ತೀಚಿನ "ವೈಯಕ್ತಿಕ ಸ್ವಾತಂತ್ರ್ಯ" ಎಂಬ ಮಹಿಳಾ ಪರವಾದಿಯಾಗಿ ಉತ್ಕರ್ಷಿತ ಮಹಿಳಾ ಪ್ರಾತಿನಿಧ್ಯಕ್ಕೆ ಮನ್ನಣೆ ದೊರಕಿಸಿಕೊಟ್ಟ ಕನ್ನಡ ನಾಡಿನ ಶ್ರೇಷ್ಟ ಶಿವಶರಣೆಯಾಗಿದ್ದಾರೆ ಹಾಗೂ ಪ್ರಜಾಪ್ರಭುತ್ವವಾದಿಯಾಗಿದ್ದಾರೆ.

ಅನುಬಂಧ:

ಮುಕ್ತಾಯಕ್ಕನ ವಚನಗಳು – ಒಂದು ಅಧ್ಯಯನ ಎಂಬ ಮಹಾಪ್ರಬಂಧದ ಲೇಖಕರಾದ ಡಾ.ಗಂಗಾಂಬಿಕಾ ಪಾಟೀಲ್‌ರವರೊಂದಿಗಿನ ಸಂದರ್ಶನ ಅವರನ್ನು ಜಂಗಮವಾಣಿ ಸಂಪರ್ಕದಿಂದ ಸಂದರ್ಶಿಸಿದಾಗ ಪಡೆದ ಪೂರಕ ಅಂಶಗಳು.

ಸಂದರ್ಶನದ ಪ್ರಶ್ನಾವಳಿಗಳು

ಸಂಶೋಧಕರು: ಮುಕ್ತಾಯಕ್ಕಳ ವಚನಗಳಲ್ಲಿ ವೈಚಾರಿಕತೆ ಇದೆಯೇ?

ಲೇಖಕರು : ಮುಕ್ತಾಯಕ್ಕಳ ವಚನಗಳಲ್ಲಿ ಮೂಢನಂಬಿಕೆ ಇಲ್ಲದಿರುವುದು ಹಾಗೂ ಇವರ ವಚನದಲ್ಲಿ ವ್ಯಕ್ತಿತ್ವ ವಿಕಸನ, ಕಾಯಕತತ್ವ ನಡೆ, ನುಡ, ಒಳ್ಳೆಯ ಗುಣ, ಆಚಾರ ವಿಚಾರದ ಬಗ್ಗೆ ಹಾಗೂ ಪ್ರತಿಮೆಗಳನ್ನು ಕೊಡುವುದರ ಮೂಲಕ ಸ್ಪಷ್ಟಪಡಿಸುತಿದ್ದಾಳೆ.

ಸಂಶೋಧಕರು: ಅಜ್ಜಗಣ್ಣನನ್ನ ತಂದೆ, ಗುರು ಎಂದು ಕರೆಯುತ್ತಾರೆ? ಅದರ ಹಿಂದಿನ ಅರ್ಥ ಏನು?

ಲೇಖಕರು : ಚಿಕ್ಕಂದಿನಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡ ಮುಕ್ತಾಯಕ್ಕ ಆ ತಂದೆ ತಾಯಿಯ ಪ್ರೀತಿಯನ್ನು ತನ್ನ ಒಡಹುಟ್ಟಿದ ಅಣ್ಣ ನೀಡಿದ್ದಾನೆ ಹಾಗೂ ಗುರುವಾಗಿ ಮಾರ್ಗದರ್ಶನ ನೀಡುತ್ತಾ ಬೆಳೆದುದರಿಂದ ಮುಕ್ತಾಯಕ್ಕ ಅಜಗಣ್ಣನನ್ನೇ ತಂದೆ, ಗುರುವಾಗಿ ಕಾಣುತ್ತಾರೆ.

ಸಂಶೋಧಕರು: ಮುಕ್ತಾಯಕ್ಕಳ ವಚನಗಳ ತಾತ್ವಿಕ ನಿಲುವುಗಳೇನು?

ಲೇಖಕರು: ತತ್ವಪೂರ್ಣವಾದ ಜೀವನ ಅಜಗಣ್ಣನಲ್ಲಿ ಕಂಡು ಬಂದಿದ್ದು, ಅದನ್ನು ಮುಕ್ತಾಯಕ್ಕ ತತ್ವ ಸಹಿತವಾದ ಜೀವನ ನಡೆಸುವುದರ ಮೂಲಕ ಗುರು – ಲಿಂಗ – ಜಂಗಮ ಎಲ್ಲರನ್ನು ತನ್ನ ಗುರು ಅಜಗಣ್ಣನಲ್ಲಿ ಕಾಣುತ್ತಾರೆ.

ಸಂಶೋಧಕರು: ಮುಕ್ತಾಯಕ್ಕಳ ವಚನಗಳಲ್ಲಿ ವೈವಿಧ್ಯತೆ ಇದೆಯೇ? ಹೇಗೆ ?

ಲೇಖಕರು: ಮುಕ್ತಾಯಕ್ಕಳ ವಚನಗಳಲ್ಲಿ ವೈವಿಧ್ಯತೆಯ ಆಗರವೇ ತುಂಬಿದೆ. ವಿಚಾರಶೀಲತೆ, ಸಾಮಾಜಿಕತೆ, ವೈಚಾರಿಕತೆ, ನೈತಿಕತೆ, ವಾಸ್ತವವಾದ ಫಲವಾದ, ಅಸ್ತಿತ್ವವಾದ ಎಲ್ಲಾ ವಾದಗಳಲ್ಲಿ ವೈವಿಧ್ಯತೆನ್ನು ಕಾಣಬಹುದು.

ಸಂಶೋಧಕರು: ಮುಕ್ತಾಯಕ್ಕ ಮತ್ತು ಅಕ್ಕಮಹಾದೇವಿಯ ವಚನಗಳಲ್ಲಿ ಸಾಮ್ಯತೆ ಇದೆಯೇ ?

ಲೇಖಕರು: ಮುಕ್ತಾಯಕ್ಕ ಹಾಗೂ ಅಕ್ಕಮಹಾದೇವಿ ಇಬ್ಬರಿಗೂ ಸಾಮೀಪ್ಯ ಇದೆ. ಇಬ್ಬರು ಕದಳಿ ಗರ್ಭವನದಲ್ಲಿ ಐಕ್ಯರಾಗುತ್ತಾರೆ. ಇಬ್ಬರು ಆಧ್ಯಾತ್ಮಿಕ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಆದುದರಿಂದ ಇಬ್ಬರ ವಚನಗಳಲ್ಲಿ ಸಾಮೀಪ್ಯ ಇದೆ.

ಧನ್ಯವಾದಗಳು

ಪರಾಮರ್ಶನ ಗ್ರಂಥಗಳು:

ಆಕರ ಗ್ರಂಥ:

ಸಮಗ್ರ ವಚನ ಸಂಪುಟ 5, ಸಂಪಾದಕ ಡಾ॥ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಪರಮಾರ್ಶನ ಗ್ರಂಥಗಳು:

1) ಸಮಗ್ರ ವಚನ ಸಂಪುಟ 15, ವಚನ ಪರಿಭಾಷ ಸಂಪಾದಕ, ಡಾ॥ ಎಸ್.ಜಿ.ಮಹಾದೇವಪ್ಪ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಘುಟ–3, ಪ್ರಧಾನ ಸಂಪಾದಕ ಡಾ॥ ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1976.
3) ಮುಕ್ತಾಯಕ್ಕನ ವಚನಗಳು ಒಂದು ಅಧ್ಯಯನ, ಡಾ॥ ಗಂಗಾಂಭಿಕಾ ಪಾಟೀಲ ಎಂ.ಎ.ಪಿ.ಎಚ್.ಡಿ. ಸಹಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಅಕ್ಕಮಹಾದೇವಿ, ಮಹಿಳಾ ಮಹಾವಿದ್ಯಾಲಯ, ಬೀದರ ಕಣ್ಣ ಪ್ರಕಾಶನ, ಬೆಂಗಳೂರು.
4) ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ಕರ್ನಾಟಕ ಸಾಹಿತ್ಯ ಅಕಾಡಮಿ 1993.
5) ಸಮಗ್ರ ವಚನ ಸಂಪುಟ – ಜನಪ್ರಿಯ ಆವೃತ್ತಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
6) ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
7) ಜನ ಸಾಮಾನ್ಯರಿಗೆ ಕನ್ನಡ ಸಾಹಿತ್ಯ ಚರಿತ್ರೆ – ಜಿ.ಎಸ್.ಎಸ್.ವಚನ ಸಂಪುಟ.

8) ವಚನ ಕಮ್ಮಟ – ಕೆ .ಮರುಳ ಸಿದ್ಧಪ್ಪ ಮತ್ತು ಕಿ.ರಂ.ನಾಗರಾಜ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

9) ಕನ್ನಡಮಹಿಳಾ ಸಾಹಿತ್ಯ ಚರಿತ್ರೆ – ಡಾ॥ ಹೆಚ್.ಡ್. ಶ್ರೀಮತಿ ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

10) ವಚನ ಮತ್ತು ಸಮೂಹ ಸಂವಹನ – ಒಂದು ಅಧ್ಯಯನ. ಪಿಎಚ್.ಡಿ. ಸಂಪ್ರಬಂಧ – ಡಾ. ಶೀಲಾದೇವಿ ಎಸ್. ಮಳೀಮಠ, ಬನರಾಸ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ಉತ್ತರ ಪ್ರದೇಶ 2001.